# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 30 ಮಂಗಳವಾರ 2022

ಸಂಪುಟ: 43 | ಸಂಚಿಕೆ: 135 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



# ರಾಮನಗರ ಬಳಿ ನದಿಯಾದ ಮೈಸೂರು–ಬೆಂಗಳೂರು ಹೆದ್ದಾರಿ






ರಾಮನಗರ, ಆ.29–ರಾಮನಗರ ಜಿಲ್ಲೆಯಲ್ಲಿ ಮಳೆ ಅವಾಂತರ ಮುಂದುವರಿದಿದೆ. ಕಳೆದ ಮೂರು ದಿನಗಳಿಂದ ಸತತವಾಗಿ ಸುರಿಯುತ್ತಿದ್ದ ಮಳೆ ಸೋಮವಾರವೂ ಮುಂದುವರೆದಿದ್ದು, ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಮೇಲೆ ನಾಲ್ಕು ಅಡಿಗೂ ಹೆಚ್ಚು ನೀರು ನಿಂತಿದ್ದು, ಅಂಡರ್‌ಪಾಸ್‌ಗಳಲ್ಲಿ ವಾಹನಗಳು ತೇಲುತ್ತಿದ್ದ ದೃಶ್ಯ ಕಂಡು ಬಂದಿದೆ. ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ.

ಬೆಂಗಳೂರು– ಮೈಸೂರು ದಶಪಥ ಹೆದ್ದಾರಿಯಲ್ಲಿ ಸಂಚರಿಸಲು ವಾಹನ ಸವಾರರು ಪರದಾಡುತ್ತಿದ್ದು, ಕೆಲ ವಾಹನಗಳು ನೀರಿನಲ್ಲಿ ಮುಳುಗಡೆಯಾಗಿವೆ. ರಾಮನಗರ ಸಮೀಪದ ಸಂಗಬಸವನದೊಡ್ಡಿ ಬಳಿ ಅಂಡರ್‌ಪಾಸ್‌ನಲ್ಲಿ ಕೆಲವು ಕಾರುಗಳು ಮುಳುಗಿವೆ. ಪ್ರಯಾಣಿಕರು ನೀರಿನಲ್ಲೇ ಕಾರನ್ನು ಬಿಟ್ಟು ಇಳಿದು ಲಾಕ್ ಮಾಡಿಕೊಂಡು ಸುರಕ್ಷಿತ ಸ್ಥಳಕ್ಕೆ ತೆರಳಿದ ಪರಿಣಾಮ ಹಲವಾರು ಕಾರುಗಳು ನೀರಿನಲ್ಲಿ ತೆಪ್ಪದಂತೆ ತೇಲಾಡುತ್ತಿದ್ದ ದೃಶ್ಯ ಕಂಡು ಬಂದಿದೆ. ಬೆಂಗಳೂರು–ಮೈಸೂರು ದಶಪಥ ಹೆದ್ದಾರಿ ಸರ್ವಿಸ್ ರಸ್ತೆ ಸಂಪೂರ್ಣ ಜಲಾವೃತಗೊಂಡಿದ್ದು, ಬಸವನಪುರದ ಮಧುರ ಗಾರ್ಮೆಂಟ್ಸ್ ಬಳಿ ಕಾರೊಂದು ಗುಂಡಿಗೆ ಮಗುಚಿದೆ. ಬೆಂಗಳೂರಿನಿಂದ ಮಳವಳ್ಳಿಗೆ ತೆರಳುತ್ತಿದ್ದ ಉದಯರಂಗ ಖಾಸಗಿ ಬಸ್ ರಾಮನಗರದ ಬಿಳಗುಂಬ ಅಂಡರ್ ಪಾಸ್‌ನಲ್ಲಿ ಸಿಲುಕಿದ್ದು, ಬಸ್‌ನ ಅರ್ಧಭಾಗ ಮುಳುಗಡೆಯಾಗಿದೆ. ಈ ಬಸ್‌ನಲ್ಲಿದ್ದ 50ಕ್ಕೂ ಹೆಚ್ಚು ಪ್ರಯಾಣಿಕರನ್ನು ಕಿಟಕಿಗಳ ಮೂಲಕ ಸ್ಥಳೀಯರು ರಕ್ಷಣೆ ಮಾಡಿದ್ದಾರೆ.

**ಆರ್ಕೇಶ್ವರ ಕಾಲೋನಿ ಸಂಪೂರ್ಣ ಜಲಾವೃತ:** ಧಾರಾಕಾರ ಮಳೆಯಿಂದಾಗಿ ಆರ್ಕೇಶ್ವರ ಕಾಲೋನಿ ಸಂಪೂರ್ಣ ಜಲಾವೃತಗೊಂಡಿದೆ. ▶ 6ನೇ ಪುಟಕ್ಕೆ

## ರಾಮನಗರದ ಮಳೆ ಬಾಧಿತ ಸ್ಥಳಗಳಿಗೆ ಮುಖ್ಯಮಂತ್ರಿ ಬೊಮ್ಮಾಯಿ ಭೇಟಿ; ಎಚ್.ಡಿ.ಕುಮಾರಸ್ವಾಮಿ ಸಾಥ್



**ರಾಮನಗರ:** ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದು ರಾಮನಗರ ಜಿಲ್ಲೆಯ ಮಳೆ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು. ರಾಮನಗರದ ಮಾರುತಿ ಬಡಾವಣೆಯಲ್ಲಿ ಭಕ್ಷಿಕೆರೆ ಒಡೆದು ಅಪಾರ ಪ್ರಮಾಣದಲ್ಲಿ ಬೆಳೆ ಹಾನಿಯಾಗಿರುವುದನ್ನು ಪರಿಶೀಲಿಸಿದ ಮುಖ್ಯಮಂತ್ರಿ, ಕೆರೆ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಭಕ್ಷಿಕೆರೆ ಒಡೆದು 100 ರಿಂದ 150 ಮನೆಗಳಿಗೆ ಹಾನಿಯಾಗಿದೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಮುಖ್ಯಮಂತ್ರಿಗಳಿಗೆ ▶ 6ನೇ ಪುಟಕ್ಕೆ

## ಮೈಸೂರಿನಿಂದ ಬೆಂಗಳೂರಿಗೆ ಸಂಚಾರ ಹೇಗೆ?



ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಮೂರು ಕಡೆ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿರುವುದರಿಂದ ಪ್ರಯಾಣಿಕರಿಗೆ ಬದಲಿ ಸಂಚಾರ ವ್ಯವಸ್ಥೆಯನ್ನು ಮಂಡ್ಯ ಹಾಗೂ ರಾಮನಗರ ಜಿಲ್ಲಾಡಳಿತ ಮಾಡಿದೆ. ಮೈಸೂರಿನಿಂದ ಬೆಂಗಳೂರಿಗೆ ತೆರಳುವವರು ಬನ್ನೂರು ಮೂಲಕ ಮಳವಳ್ಳಿಗೆ ತೆರಳಿ, ಮಳವಳ್ಳಿಯಿಂದ ಕನಕಪುರ, ಹಲಗೂರು, ಕನಕಪುರ, ಬನಶಂಕರಿ ಮಾರ್ಗವಾಗಿ ಸಂಚರಿಸಬಹುದಾಗಿದೆ.

**ಮತ್ತೊಂದು ರಸ್ತೆ** ಶ್ರೀರಂಗಪಟ್ಟಣದ ಬನ್ನಿಮಂಟಪದಿಂದ ಪಾಂಡವಪುರ, ನಾಗಮಂಗಲ, ಬೆಳ್ಳೂರು ಕ್ರಾಸ್ ಮಾರ್ಗವಾಗಿ ಮಂಗಳೂರು– ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ತಲುಪಿ ಕುಣಿಗಲ್, ನೆಲಮಂಗಲ ಮೂಲಕವೂ ಮೈಸೂರಿನಿಂದ ಬೆಂಗಳೂರಿಗೆ ಸಂಚರಿಸಬಹುದಾಗಿದೆ.

# ಬಿಜೆಪಿಯ ‘ಜನೋತ್ಸವ’ದ ವಿರುದ್ಧ ಕಾಂಗ್ರೆಸ್‌ನಿಂದ ‘ಜನಜಾಗೃತಿ’

### ಜನರ ಮುಂದೆ ಬಿಜೆಪಿ ವಚನ ಭ್ರಷ್ಟತೆ ಬಯಲು ಮಾಡಲು ಸರಣಿ ಪ್ರಶ್ನೆ...



**ಬೆಂಗಳೂರು, ಆ.29 (ಕೆಎಂಶಿ)–ರಾಜ್ಯ ಬಿಜೆಪಿ ಸರ್ಕಾರದ ‘ಜನೋತ್ಸವ’ ಕಾರ್ಯಕ್ರಮಕ್ಕೆ ವಿರುದ್ಧವಾಗಿ ‘ಜನಜಾಗೃತಿ’ ಅಭಿಯಾನಕ್ಕೆ ಕಾಂಗ್ರೆಸ್ ಚಾಲನೆ ನೀಡಿದೆ.**

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮುಂಬರುವ ಚುನಾವಣಾ ಪ್ರವಾಸ ವಿವರಗಳನ್ನು ನೀಡಿದರು. ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, ‘ರಾಜ್ಯದಲ್ಲಿ ಭ್ರಷ್ಟ ಸರ್ಕಾರ ಇದೆ. ಇಡೀ ದೇಶದಲ್ಲೇ ಇದು ಅತ್ಯಂತ ಭ್ರಷ್ಟ ಸರ್ಕಾರ. ಬಿಜೆಪಿ ಸುಳ್ಳು ಹೇಳುವ ಪಕ್ಷ. ಬಿಜೆಪಿ ಅಂದರೆ ಬಿಗ್ ಟ್ರೇಡ್ ಜನತಾ ಪಾರ್ಟಿ. ಬಿಜೆಪಿ ಎಂದರೆ ಬೇಕೂಫ್ ಜನತಾ ಪಾರ್ಟಿ‘ ಎಂದು ವ್ಯಂಗ್ಯವಾಡಿದರು. ಬಿಜೆಪಿ ನಿಮ್ಮ ಹತ್ತಿರ ಇದೆಯಾ ಉತ್ತರ... ಇದು ನಮ್ಮ ಪಕ್ಷದಿಂದ ನಡೆಯಲಿರುವ ಅಭಿಯಾನ. ವಿಧಾನಸಭೆ ಚುನಾವಣೆಗೆ ಇನ್ನು ಏಳೆಂಟು ತಿಂಗಳು ಮಾತ್ರ ಇದೆ. ಅಲ್ಲಿಯವರೆಗೆ ನಾವು ಇದನ್ನೆ ಕೇಳುತ್ತೇವೆ. ಇದೇ ಪ್ರಶ್ನೆಗಳನ್ನು ಇಟ್ಟುಕೊಂಡು ಜನರ ಮುಂದೆ ಹೋಗುತ್ತೇವೆ. ಬಿಜೆಪಿ ಸರ್ಕಾರದಲ್ಲಿ ಶೇ.30 ಕಮಿಷನ್ ಮಠಗಳಿಗೆ, ಶೇ.40 ಗುತ್ತಿಗೆದಾರರಿಗೆ, ಶೇ.50 ಬಿಜೆಪಿ ಕಾರ್ಯಕರ್ತರಿಗೆ ಇದೆ. ಹೀಗೆ ಕಮಿಷನ್‌ನ್ನು ವಿವಿಧ ಹಂತಗಳಲ್ಲಿ ▶ 6ನೇ ಪುಟಕ್ಕೆ

### ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ 6 ಕಡೆ

# ಬಿಜೆಪಿ ಬೃಹತ್ ರ್‍ಯಾಲಿ



## ಪಕ್ಷ ಸಂಘಟನೆಯಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗೆ ಕೊಕ್

- ಯಡಿಯೂರಪ್ಪ, ಅರುಣ್ ಸಿಂಗ್, ನಳಿನ್‌ಕುಮಾರ್ ಕಟೀಲ್ ನೇತೃತ್ವದ ತಂಡದಿಂದ ರಾಜ್ಯ ಪ್ರವಾಸ
- ವರಿಷ್ಠರ ತೀರ್ಮಾನಕ್ಕೆ ಬಿಜೆಪಿ ವಲಯದಲ್ಲಿ ಅಚ್ಚರಿ





ಬೆಂಗಳೂರು, ಆ.29 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆ, ಪ್ರವಾಸ, ಜನಸಂಪರ್ಕ ಕಾರ್ಯಕ್ರಮಗಳನ್ನು ಬಿಜೆಪಿ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಈ ತಂಡದಿಂದ ಕೈಬಿಡಲಾಗಿದೆ.

ಚುನಾವಣಾ ತಯಾರಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಪಕ್ಷದ ಹಿರಿಯ ನಾಯಕ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ದೆಹಲಿಗೆ ಕರೆಸಿಕೊಂಡಿದ್ದ ಬಿಜೆಪಿ ವರಿಷ್ಠರು, ಅಲ್ಲಿಯೇ ಜನಸಂಘಟನೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ರೂಪಿಸಿ, ಇದರ ಹೊಣೆಗಾರಿಕೆಯನ್ನು ಯಾರು ಹೊರಬೇಕೆಂದು ಅವರಿಗೆ ತಿಳಿಸಿದ್ದಾರೆ. ಚುನಾವಣಾ ಪೂರ್ವಭಾವಿ ತಯಾರಿಗಾಗಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ನೇತೃತ್ವವನ್ನು ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ▶ 6ನೇ ಪುಟಕ್ಕೆ



# ಮೈಸೂರು ದಸರಾ ವೇಳೆ ಮಂಡ್ಯ ಜಿಲ್ಲೆಯಲ್ಲೂ ಹೊರ ರಾಜ್ಯದ ವಾಹನಗಳಿಗೆ ತೆರಿಗೆ ವಿನಾಯ್ತಿಗೆ ಪ್ರಸ್ತಾವನೆ

- ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ
- ಕೆಆರ್‌ಎಸ್, ಶ್ರೀರಂಗಪಟ್ಟಣ ಇನ್ನಿತರೆ ಸ್ಥಳಗಳಿಗೆ ಪ್ರವಾಸಿಗರ ಭೇಟಿ ದೃಷ್ಟಿಯಿಂದ ಈ ತೀರ್ಮಾನ
- ಏಕೀಕೃತ ಟಿಕೆಟ್ ವ್ಯವಸ್ಥೆಗೂ ಗಂಭೀರ ಚಿಂತನೆ
- ಕೈಗಾರಿಕಾ ದಸರಾ, ಆರೋಗ್ಯ ಮೇಳ ಆಯೋಜಿಸಲು ಮನವಿ



ಮೈಸೂರು, ಆ.29(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವದ ವೇಳೆ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ನೀಡಲಾಗುವ ತೆರಿಗೆ ವಿನಾಯ್ತಿಯನ್ನು ಮಂಡ್ಯ ಜಿಲ್ಲೆಗೂ ವಿಸ್ತರಿಸಲು ಪರಿಷ್ಕೃತ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ದಸರಾ ಪೂರ್ವಭಾವಿ ಸಭೆ ನಡೆಸಿದ ಅವರು, ದಸರಾ ಮಹೋತ್ಸವದ ವೇಳೆ ಮೈಸೂರಿಗೆ ಆಗಮಿಸುವ ಹೊರ ರಾಜ್ಯದ ಪ್ರವಾಸಿಗರು ನೆರೆ ಜಿಲ್ಲೆ ಮಂಡ್ಯದ ಕೆಆರ್‌ಎಸ್, ಶ್ರೀರಂಗಪಟ್ಟಣ ಇನ್ನಿತರ ಪ್ರೇಕ್ಷಣೀಯ ಸ್ಥಳಗಳಿಗೂ ಭೇಟಿ ನೀಡುತ್ತಾರೆ. ಆ ಸಂದರ್ಭದಲ್ಲಿ ಪ್ರವಾಸಿಗರಿಗೆ ತೊಂದರೆಯಾಗಬಾರದು. ಈ ನಿಟ್ಟಿನಲ್ಲಿ ಹೊರ ರಾಜ್ಯಗಳ ಪ್ರವಾಸಿ ವಾಹನಗಳಿಗೆ ನೀಡಲಾಗುವ ತೆರಿಗೆ ವಿನಾಯ್ತಿ ಮಂಡ್ಯ ಜಿಲ್ಲೆಗೂ ಅನ್ವಯವಾಗುವಂತೆ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು. ದಸರಾ ▶ 8ನೇ ಪುಟಕ್ಕೆ



## ಅದ್ದೂರಿ ದಸರಾ ಮೇಲೆ ವರುಣನ ಕಾರ್ಮೋಡ

ಮೈಸೂರು, ಆ.29(ಎಸ್‌ಬಿಡಿ)–ಅದ್ದೂರಿ ದಸರಾ ಮಹೋತ್ಸವದ ಮೇಲೆ ಮಳೆ ಅವಾಂತರದ ಕಾರ್ಮೋಡ ಕವಿಯುವ ಆತಂಕ ಎದುರಾಗಿದೆ.

ಕಳೆದೆರಡು ವರ್ಷ ಕೊರೊನಾ ಕಾರಣದಿಂದ ಅದ್ದೂರಿಗೆ ಬ್ರೇಕ್ ಹಾಕಿ ಸರಳ ಹಾಗೂ ಸಾಂಪ್ರದಾಯಿಕವಾಗಿ ದಸರಾ ಆಚರಿಸಲಾಗಿತ್ತು. ಸದ್ಯ ಈ ಬಾರಿ ಅದ್ದೂರಿಯಾಗಿ ಅತ್ಯಂತ ವೈಭವಯುತವಾಗಿ ದಸರಾ ಆಚರಿಸಲು ಸರ್ಕಾರ ನಿರ್ಧರಿಸಿ, ಆ ನಿಟ್ಟಿನಲ್ಲಿ ಸಿದ್ಧತಾ ಕಾರ್ಯಗಳು ▶ 8ನೇ ಪುಟಕ್ಕೆ

### ದಸರಾ ಸಾಂಪ್ರದಾಯಿಕ ವಿಧಿ ವಿಧಾನ ಪ್ರಕ್ರಿಯೆಗೆ ಚಾಲನೆ

## ಕುಶಾಲತೋಪು ಸಿಡಿಸುವ ಫಿರಂಗಿಗಳಿಗೆ ಸಚಿವ ಸೋಮಶೇಖರ್‌ರಿಂದ ಪೂಜೆ



ಮೈಸೂರು,ಆ.29(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿ ದಿನ ಚಿನ್ನದ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ವೇಳೆ ಕುಶಾಲತೋಪು ಸಿಡಿಸಲು ಬಳಸುವ ಫಿರಂಗಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು.

ಮೈಸೂರು ಅರಮನೆಯ ಆನೆ ಬಾಗಿಲಿನ ಬಳಿ ನಡೆದ ಕಾರ್ಯಕ್ರಮದಲ್ಲಿ ಸೋಮವಾರ ಮಧ್ಯಾಹ್ನ, ಅರ್ಚಕ ಎಸ್.ವಿ.ಪ್ರಹ್ಲಾದರಾವ್, ವಿಧಿ ವಿಧಾನದಂತೆ ಗಣಪತಿ, ವಿಜಯ ಗಣಪತಿ ಜೊತೆಗೆ ಫಿರಂಗಿಗಳಿಗೆ ಸಾಂಪ್ರದಾಯಿಕ ಪೂಜೆ ಸಲ್ಲಿಸಿದರು. ಬಳಿಕ ಸಚಿವ ▶ 8ನೇ ಪುಟಕ್ಕೆ

# ಮೇರಿಲ್ಯಾಂಡ್‌ನ ಗೆಥರ್ಸ್‌ಬರ್ಗ್‌ನಲ್ಲಿ ಜೆಎಸ್‌ಎಸ್ ಹಿಂದೂ ದೇಗುಲಕ್ಕೆ ಭೂಮಿಪೂಜೆ

**ಮೈಸೂರು:** ಅಮೆರಿಕದ ಮೇರಿಲ್ಯಾಂಡ್‌ನ ಗೇಥರ್ಸ್‌ಬರ್ಗ್‌ನಲ್ಲಿರುವ ಜೆಎಸ್‌ಎಸ್ ಆಧ್ಯಾತ್ಮಿಕ ಮಿಷನ್‌ನಲ್ಲಿ ಜೆಎಸ್‌ಎಸ್ ಹಿಂದೂ ದೇವಾಲಯ ಸಂಕೀರ್ಣ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಲಾಯಿತು.

ಸುತ್ತೂರು ಮಠದ ಶಿವರಾತ್ರಿ ರಾಜೇಂದ್ರ ಶ್ರೀಗಳ 107ನೇ ಜಯಂತಿ ಮಹೋತ್ಸವದ ಅಂಗವಾಗಿ ಈ ಕಾರ್ಯಕ್ರಮ ನಡೆಯಿತು. ಸಾನ್ನಿಧ್ಯ ವಹಿಸಿದ್ದ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮನುಷ್ಯನು ತನ್ನೆಲ್ಲ ಲೌಕಿಕ ಕಾರ್ಯಚಟುವಟಿಕೆಗಳ ನಡುವೆ ಆಧ್ಯಾತ್ಮಿಕತೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಅಗತ್ಯ ಎಂದು ತಿಳಿಸಿದರು.

ಅಮೆರಿಕದಲ್ಲಿ ನೆಲೆಸಿರುವ ಭಾರತೀಯರ ಸದಾಶಯದಂತೆ ಜೆಎಸ್‌ಎಸ್ ಆಧ್ಯಾತ್ಮಿಕ ಮಿಷನ್ ಸ್ಥಾಪನೆಯಾಗಿದೆ. ಇದರ ಮೂಲಕ ಭಾರತೀಯ ಸಂಸ್ಕೃತಿಯ ಪ್ರಸಾರಕ್ಕಾಗಿ ಎಲ್ಲ ಪ್ರಯತ್ನವನ್ನೂ ಮಾಡಲಾಗುತ್ತಿದೆ ಎಂದರು.

ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮಾತನಾಡಿ, ಅಮೆರಿಕದ ಈ ಸ್ಥಳದಲ್ಲಿ ಆಧ್ಯಾತ್ಮಿಕ ವಾತಾವರಣ ಇರುವುದನ್ನು ನಾವೆಲ್ಲರೂ ಗಮನಿಸಬೇಕು. ಶಿಲಾ ಭಕ್ತಿ, ನರಭಕ್ತಿ ಮತ್ತು ಭೂಭಕ್ತಿಗಳು ಸೇರಿದಾಗ ಮಾತ್ರ ದೇವಸ್ಥಾನದ ನಿರ್ಮಾಣ ಸುಗಮವಾಗಿ ಆಗಲು ಸಾಧ್ಯವಾಗುತ್ತದೆ ಎಂದು ನುಡಿದರು.

ಭಾರತವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸುತ್ತಿದೆ. ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಮಾಂಟ್‌ಗೊಮರಿಯ ಕೌಂಟಿಯಲ್ಲಿದ್ದು, ಅವರ ಭಾವನೆಗಳಿಗೆ ಸಹಕರಿಸಲಾಗುತ್ತದೆ ಎಂದು ಮಾಂಟ್‌ಗೊಮರಿ ಕೌಂಟಿಯ ಕಾರ್ಯನಿರ್ವಾಹಕ ಮಾರ್ಕ್ ಎಲ್ರಿಚ್ ತಿಳಿಸಿದರು.

ಮೇರಿಲ್ಯಾಂಡ್‌ನ ಮಾಜಿ ಡೆಲಿಗೇಟ್ ಅರುಣಾ ಮಿಲ್ಲರ್, ಭಾರತದ ರಾಯಭಾರ ಕಚೇರಿಯ ಶೈಕ್ಷಣಿಕ ಮತ್ತು ಸಮುದಾಯ ವಿಭಾಗದ ಕೌನ್ಸಿಲರ್ ಅನ್ಸುಲ್ ಶರ್ಮಾ, ಮೇರಿಲ್ಯಾಂಡ್ ಪ್ರಾಂತ್ಯದ ಅಂತರ ಧರ್ಮೀಯ ಸಂಬಂಧಗಳ ಮುಖಂಡ ಮ್ಯಾನ್ಸ್‌ಫೀಲ್ಡ್ ಕೇಸಿ ಕೆಸ್‌ಮನ್, ಮೇರಿಲ್ಯಾಂಡ್‌ನ ಡೆಲಿಗೇಟ್ ಲಿಲಿ ಕ್ಯು, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಎಂ.ಕೃಷ್ಣೇಗೌಡ, ಹಾನ್ಸೆನ್ ಬೆಂಜಮಿನ್ ಎಲ್ ಕಾರ್ಡಿನ್‌ನ ಸಹಾಯಕ ಕೆನ್ ರಿಚರ್ಡ್ ಮಾತನಾಡಿದರು.

ಡಾ.ಬಾಬು ಕಿಲಾರ ಸ್ವಾಗತಿಸಿದರು. ಉಷಾಚಾರ್ ಮತ್ತು ತಂಡದವರು ಭಕ್ತಿಗೀತೆಗಳನ್ನು ಪ್ರಸ್ತುತಪಡಿಸಿದರು. ಸಾನಿಕಾ ಮಹಾಶೆಟ್ಟಿ ಪ್ರಾರ್ಥಿಸಿದರು. ರೂಪಾ ದಾಸರಿ ವಂದಿಸಿದರು. ತ್ರಿಶೂಲ್ ನಾಗೇನಹಳ್ಳಿ ಹಾಗೂ ಜಿಗ್ನಾ ಗೋಯಲ್ ನಿರೂಪಿಸಿದರು.




ಮೇರಿಲ್ಯಾಂಡ್‌ನ ಗೆಥರ್ಸ್‌ಬರ್ಗ್‌ನಲ್ಲಿ ಜೆಎಸ್‌ಎಸ್ ಹಿಂದೂ ದೇವಸ್ಥಾನಕ್ಕೆ (ಬಲಚಿತ್ರ) ಜೆಎಸ್‌ಎಸ್ ಶ್ರೀಗಳು ಹಾಗೂ ಗಣಪತಿ ಸಚ್ಚಿದಾನಂದ ಶ್ರೀಗಳ ಸಾನಿಧ್ಯದಲ್ಲಿ ಭೂಮಿಪೂಜೆ ಆ.28ರಂದು ನೆರವೇರಿತು. ಈ ವೇಳೆ ಮೇರಿಲ್ಯಾಂಡ್ ಸೆನೆಟರ್ ಪ್ರತಿನಿಧಿ ಮಾಂಟ್‌ಗೊಮರಿ ಕೌಂಟಿಯಾ, ಕಾರ್ಯನಿರ್ವಾಹಕ ಮಾರ್ಕ್ ಎಲ್ರಿಚ್, ಭಾರತದ ರಾಯಭಾರಿ ಕಚೇರಿಯ ಶೈಕ್ಷಣಿಕ ಮತ್ತು ಸಮುದಾಯ ವಿಭಾಗದ ಕೌನ್ಸಿಲರ್ ಅನ್ಸುಲ್ ಶರ್ಮಾ ಇತರರು ಹಾಜರಿದ್ದಾರೆ. ಸಭಾ ಕಾರ್ಯಕ್ರಮದಲ್ಲಿ (ಎಡಚಿತ್ರದಲ್ಲಿ ಎಡದಿಂದ) ಮೈಸೂರಿನ ನಿವೃತ್ತ ಕನ್ನಡ ಪ್ರಾಧ್ಯಾಪಕ ಡಾ.ಎಂ.ಕೃಷ್ಣೇಗೌಡ, ಮೇರಿಲ್ಯಾಂಡ್‌ನ ಡಿಲಿಗೇಟ್ ಲಿಲಿಕ್ಯು, ಅಮೆರಿಕಾ ಕನ್ನಡ ಕೂಟ ಅಸೋಸಿಯೇಷನ್‌ನ (ಅಕ್ಕ) ಅಧ್ಯಕ್ಷ ಅಮರ್‌ನಾಥ್‌ಗೌಡ, ಕೇರಳ ಅಸೋಸಿಯೇಷನ್ ಅಧ್ಯಕ್ಷ ಡಾ.ನಾಯರ್ ಉಪಸ್ಥಿತರಿದ್ದಾರೆ.

## ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಶಾಸಕ ರಾಮದಾಸ್‌ರಿಂದ ಸೀರೆ, ಫಲತಾಂಬೂಲ ವಿತರಣೆ



ಮೈಸೂರು,ಆ.29(ಎಂಕೆ)–ಗೌರಿ–ಗಣೇಶ ಹಬ್ಬದ ಅಂಗವಾಗಿ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಹಾಗೂ ಆಶಾ ಕಾರ್ಯಕರ್ತೆಯರಿಗೆ ಶಾಸಕ ಎಸ್.ಎ.ರಾಮದಾಸ್ ಸೀರೆ ಮತ್ತು ಫಲತಾಂಬೂಲ ನೀಡಿ ಹಬ್ಬದ ಶುಭಾಶಯ ಕೋರಿದರು.

ವಿದ್ಯಾರಣ್ಯಪುರಂನಲ್ಲಿರುವ ತಮ್ಮ ಕಚೇರಿಯಲ್ಲಿ ವ್ಯಾಪ್ತಿಯ ನೂರಾರು ಮಂದಿ ಆರೋಗ್ಯ ಕಾರ್ಯಕರ್ತೆಯರಿಗೆ ಗೌರಿ–ಗಣೇಶ ಹಬ್ಬದ ಪ್ರಯುಕ್ತ ಸೀರೆ ನೀಡಿ ಶುಭ ಕೋರಿದ ಶಾಸಕರು, ಆರೋಗ್ಯ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು ರೋಗಿಗಳ ಸೇವೆ ಮಾಡುವಂತೆ ಸಲಹೆ ನೀಡಿದರು. ಮುಖಂಡರಾದ ಪ್ರಸಾದ್ ಬಾಬು, ನೂರ್ ಫಾತಿಮಾ, ಸಂತೋಷ್, ಜಯರಾಮ್, ಕ್ಷಮಾ, ಸಿಡಿಪಿ ಅಧಿಕಾರಿ ಮಧೂಸೂದನ್, ಆರೋಗ್ಯ ಇಲಾಖೆಯ ಮಹದೇವ್, ಅನ್ನಪೂರ್ಣ, ನಾಗರತ್ನ, ರೇಣುಕಾ, ಲತಾ ಮತ್ತಿತರರಿದ್ದರು.

## ಮಳೆಯಿಂದಾಗಿ ದಟ್ಟಗಳ್ಳಿ ಬಳಿ ರಿಂಗ್ ರಸ್ತೆಯ ಸರ್ವಿಸ್ ರೋಡ್‌ನಲ್ಲಿ ಭಾರೀ ಕುಸಿತ

ಮೈಸೂರು, ಆ.29(ಎಂಕೆ)– ನಗರದೆಲ್ಲೆಡೆ ಸುರಿಯುತ್ತಿರುವ ಮಳೆಯಿಂದಾಗಿ ದಟ್ಟಗಳ್ಳಿ ಸಮೀಪದ ರಿಂಗ್ ರಸ್ತೆಯ ಸರ್ವಿಸ್ ರೋಡ್‌ನಲ್ಲಿ ಭಾರೀ ಪ್ರಮಾಣದ ಗುಂಡಿ ಬಿದ್ದಿದ್ದು, ವಾಹನ ಸವಾರರು ಹಾಗೂ ಅಕ್ಕ–ಪಕ್ಕದ ಬಡಾವಣೆಗಳ ನಿವಾಸಿಗಳಲ್ಲಿ ಆತಂಕ ಮೂಡಿಸಿದೆ ರಿಂಗ್ ರಸ್ತೆಯಲ್ಲಿರುವ ಕೆಇಬಿ ಜಂಕ್ಷನ್ ಸಮೀಪದ ಸರ್ವಿಸ್ ರಸ್ತೆಯಲ್ಲಿ ಸುಮಾರು 20 ಅಡಿಯಷ್ಟು ಆಳಕ್ಕೆ ಕುಸಿದಿದೆ. ಸುಮಾರು 15 ದಿನಗಳ ಹಿಂದೆಯಷ್ಟೇ ಸುಮಾರು 5–6 ಅಡಿ ಆಳದಷ್ಟು ಕುಸಿದಿದ್ದ ಸ್ಥಳದಲ್ಲಿಯೇ ಸೋಮವಾರ ಮಧ್ಯಾಹ್ನ ಮತ್ತೆ ಕುಸಿದಿದ್ದು, ಸರ್ವಿಸ್ ರಸ್ತೆಯೇ ತುಂಡಾದಂತಾಗಿದೆ.

ಸರ್ವಿಸ್ ರಸ್ತೆ ಕುಸಿದಿರುವ ಜಾಗದ ಬಳಿ ಚರಂಡಿ ಇದ್ದು, ಮಣ್ಣು ಸುರಿದು ಗುಂಡಿ ಮುಚ್ಚಲು ಪ್ರಯತ್ನ ನಡೆಸಿದರೂ ಸಾಧ್ಯವಾಗುತ್ತಿಲ್ಲ. ನಿರಂತರ ಮಳೆಯಿಂದಾಗಿ ಗುಂಡಿ ಮುಚ್ಚಲು ತೊಂದರೆಯಾಗುತ್ತಿದೆ. ರಿಂಗ್ ರಸ್ತೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಬರುವ ಹಿನ್ನೆಲೆ ಅಲ್ಲಿನ ಅಧಿಕಾರಿಗಳಿಗೂ ಮಾಹಿತಿ ನೀಡಿದ್ದೇನೆ.



ಅಲ್ಲದೆ ಗುಂಡಿಯ ಸುತ್ತಲೂ ಬ್ಯಾರಿಕೇಡ್ ಅಳವಡಿಸಿ ಯಾರೂ ತಿರುಗಾಡದಂತೆ ಮುಂಜಾಗ್ರತೆ ವಹಿಸಲಾಗಿದೆ ಎಂದು ಸ್ಥಳೀಯ ನಗರ ಪಾಲಿಕೆ ಸದಸ್ಯರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

## ಗಣೇಶ ಚತುರ್ಥಿ: ನಾಳೆ ಮಾಂಸ ಮಾರಾಟ ನಿಷೇಧ

ಮೈಸೂರು,ಆ.29–ಮೈಸೂರು ನಗರಪಾಲಿಕೆಯಿಂದ ಪಾಲಿಕೆಗೆ ಸೇರಿದ ಕುರಿ ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ನಗರದಲ್ಲಿ ಆ.31ರಂದು ಗಣೇಶ ಚತುರ್ಥಿ ಪ್ರಯುಕ್ತ ಮುಚ್ಚಲಾಗುತ್ತದೆ. ಹಾಗೂ ವ್ಯಾಪಾರವನ್ನು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಿರುತ್ತದೆ ಎಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.


## ನಿಧನ



### ಕಮಲಾಕ್ಷಮ್ಮ

ಮೈಸೂರು, ಆ.29–ಮೈಸೂರಿನ ಯುನಿವರ್ಸಿಟಿ ಬಡಾವಣೆಯ ನಿವಾಸಿ ಕಮಲಾಕ್ಷಮ್ಮ (74) ಭಾನುವಾರ ತಮ್ಮ ನಿವಾಸದಲ್ಲಿ ನಿಧನರಾದರು. ಮೃತರು ಪಿಎಲ್‌ಡಿ ಬ್ಯಾಂಕ್ ನಿವೃತ್ತ ಸಿಬ್ಬಂದಿ ದಿ॥ ಕಾಳೇಗೌಡರವರ ಧರ್ಮಪತ್ನಿ. ಮೃತರು ಪುತ್ರ ಖ್ಯಾತ ವಕೀಲ ಎಸ್.ಕೆ. ಮಂಜುನಾಥ್, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮೈಸೂರಿನ ರುದ್ರಭೂಮಿಯಲ್ಲಿ ಭಾನುವಾರ ಸಂಜೆ ನಡೆಯಿತು.

### ವಾಲ್ಟರ್ ಪಿಂಟೋ



ಮೈಸೂರು, ಆ. 29– ಮೈಸೂರಿನ ಶಾರದಾದೇವಿನಗರದ ನಿವಾಸಿ ನಿವೃತ್ತ ಬೆಮೆಲ್ ನೌಕರ ವಾಲ್ಟರ್ ಪಿಂಟೋ (77) ಭಾನುವಾರ ನಿಧನರಾದರು. ಮೃತರು ಪುತ್ರಿ ಮಹಾರಾಜ ಇಂಜಿನಿಯರಿಂಗ್ ಕಾಲೇಜಿನ ಸಹ ಪ್ರಾಧ್ಯಾಪಕಿ ಸ್ಮಿತಾ ಜಾಯ್ಸ್ ಪಿಂಟೊ, ಅಳಿಯ ಮಿಲಿಟರಿ ಲೆಫ್ಟಿನೆಂಟ್ ಕರ್ನಲ್ ಅನಂತ ಕೇಶವ ಹಾಗೂ ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಬೆಳಗ್ಗೆ 11 ಗಂಟೆಗೆ ಮೈಸೂರು ತಾಲೂಕು ಬೆಳವಾಡಿ ಗ್ರಾಮದ ಕ್ರಿಶ್ಚಿಯನ್ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ತೀವ್ರ ಸಂತಾಪ ಸೂಚಿಸಿದ್ದಾರೆ.

### ನರಸಿಂಹ ಮಯ್ಯ



ಮೈಸೂರು, ಆ.29–ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿ ನರಸಿಂಹ ಮಯ್ಯ(82) ಅವರು ಆ.24ರಂದು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ದೇಹವನ್ನು ಸರ್ಕಾರಿ ಆಯುರ್ವೇದ ಆಸ್ಪತ್ರೆಗೆ ಮತ್ತು ನೇತ್ರವನ್ನು ಜೆಎಸ್‌ಎಸ್ ಆಸ್ಪತ್ರೆಗೆ ದಾನ ಮಾಡಿದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಹಿರಿಯ ವಕೀಲ ಎಂ.ಶಿವಪ್ಪ

ಚಾಮರಾಜನಗರ, ಆ.29–ತಾಲೂಕಿನ ತಮ್ಮಡಹಳ್ಳಿ ಗ್ರಾಮದ ನಿವಾಸಿ, ಹೈಕೋರ್ಟ್‌ನ ಹಿರಿಯ ವಕೀಲ ಎಂ.ಶಿವಪ್ಪ(86) ಸೋಮವಾರ ಬೆಳಗ್ಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು.




ಶಿವಪ್ಪ ಬೆಂಗಳೂರಿನ ಹೈಕೋರ್ಟ್‌ನಲ್ಲಿ ವಕೀಲರಾಗಿ ಐವತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ, ಪ್ರಸ್ತುತ ತುಮಕೂರಿನ ಸಿದ್ಧಗಂಗಾ ಮಠದ ಕಾನೂನು ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದರು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಪಾರ್ಥಿವ ಶರೀರವನ್ನು ಬೆಂಗಳೂರಿನ ಬನಶಂಕರಿಯ ಅವರ ಸ್ವಗೃಹದಲ್ಲಿ ಸೋಮವಾರ ಸಂಜೆವರೆಗೆ ಇರಿಸಿ, ಮಂಗಳವಾರ ಬೆಳಗ್ಗೆ 10 ಗಂಟೆಗೆ ತಮ್ಮಡಹಳ್ಳಿಯ ಅವರ ಸ್ವಗೃಹಕ್ಕೆ ತರಲಾಗುವುದು. ಮಧ್ಯಾಹ್ನ 12ಕ್ಕೆ ಅವರ ತೋಟದಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ದೇವಮ್ಮ



ಕೆ.ಆರ್.ಪೇಟೆ, ಆ.29–ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ದೇವಮ್ಮ (90) ಸೋಮವಾರ ನಿಧನರಾದರು. ಮೃತರು ಓರ್ವ ಪುತ್ರ, ಮೊಮ್ಮಕ್ಕಳು, ಮರಿ ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಸ್ವಗ್ರಾಮ ಅಗ್ರ ಹಾರಬಾಚಹಳ್ಳಿ ಗ್ರಾಮದಲ್ಲಿ ನಡೆಯಿತು.

## ಮೇಯರ್ ಚುನಾವಣೆ
## ಕಾಂಗ್ರೆಸ್ ಮೈತ್ರಿಗೆ ಯಾರಿಗೂ ಆಹ್ವಾನಿಸಿಲ್ಲ



ಮೈಸೂರು, ಆ.29(ಎಂಕೆ)– ಮೈಸೂರು ನಗರ ಪಾಲಿಕೆ ಮೇಯರ್ ಚುನಾವಣೆಯಲ್ಲಿ ಕಾಂಗ್ರೆಸ್ ಯಾವ ಪಕ್ಷದೊಂದಿಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ. ಅಲ್ಲದೆ ಯಾವ ಪಕ್ಷದವರನ್ನು ಮೈತ್ರಿಗಾಗಿ ಆಹ್ವಾನಿಸಿಲ್ಲ ಎಂದು ಮಾಜಿ ಮೇಯರ್ ಆಯೂಬ್ ಖಾನ್ ಸ್ಪಷ್ಟಪಡಿಸಿದ್ದಾರೆ.

ಕಳೆದ ವರ್ಷದ ಮೇಯರ್–ಉಪ ಮೇಯರ್ ಚುನಾವಣೆಯಲ್ಲಿ ಬಿಜೆಪಿಯ ಸುನಂದಾ ಪಾಲನೇತ್ರ ಅವರು ಮೇಯರ್ ಆಗಲು ಕಾಂಗ್ರೆಸ್ ಕಾರಣ ಎಂದು ದೂರಿದ್ದ ಜೆಡಿಎಸ್‌ನ ಬಣ್ಣ ಬಯಲಾಗಿದೆ. ಜೆಡಿಎಸ್ ಶಾಸಕರು ಈಗ ಬಿಜೆಪಿ ಹಿಂದೆ ಬಿದ್ದಿರುವುದನ್ನು ಗಮನಿಸಿದರೆ ತಿಳಿಯುತ್ತದೆ ಎಂದು ವ್ಯಂಗ್ಯವಾಡಿದ್ದಾರೆ.

ಕಳೆದೊಂದು ವರ್ಷ ಪಾಲಿಕೆಯಲ್ಲಿ ಬಿಜೆಪಿ ಆಡಳಿತದಿಂದ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ನಡೆದಿಲ್ಲ. ಸುಮಾರು 8 ತಿಂಗಳಿಂದ ಕೌನ್ಸಿಲ್ ಸಭೆ ನಡೆಸಿಲ್ಲ. ಬಿಜೆಪಿಯವರು ಅಧಿಕಾರಕ್ಕೆ ಬಂದರೆ ಅಭಿವೃದ್ಧಿ ಶೂನ್ಯ ಎಂಬುದು ದಿಟವಾಗಿದೆ ಎಂದು ಹೇಳಿದರು.

## ಮಠದಲ್ಲಿ 15 ವರ್ಷದಿಂದ ಪಿತೂರಿ: ಮುರುಘಾ ಶ್ರೀ

ಚಿತ್ರದುರ್ಗ, ಆ.29–ನನ್ನ ವಿರುದ್ಧ ಮುರುಘಾ ಮಠದ ಒಳಗಡೆ ನಡೆಯುತ್ತಿದ್ದ ಪಿತೂರಿ ಇದೀಗ ಹೊರಗಡೆ ನಡೆಯುತ್ತಿದೆ ಎಂದು ಡಾ.ಶಿವಮೂರ್ತಿ ಶರಣರು ಹೇಳಿದರು.



ಮಠದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇನು ಹೊಸದಲ್ಲ, ಕಳೆದ 15 ವರ್ಷದಿಂದ ಪಿತೂರಿ ನಡೆಯುತ್ತಿದೆ. ನಮ್ಮ ಮಠ ನ್ಯಾಯ ದೇಗುಲದಂತಿತ್ತು. ಇದೀಗ ಮಠದ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದರು.

ಈ ನೆಲದ ಕಾನೂನು ಎಲ್ಲರಿಗೂ ಒಂದೇ. ಕಾನೂನನ್ನು ಗೌರವಿಸೋಣ ಎಂದ ಶ್ರೀಗಳು, ಯಾವುದೇ ಕಾರಣಕ್ಕೂ ಪಲಾಯನವಾದ ಇಲ್ಲ, ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುವುದು. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಲಾಗುವುದು. ಎಲ್ಲರೂ ಹೋರಾಡುವ ಮೂಲಕ ತಾರ್ಕಿಕ ಅಂತ್ಯ ಹಾಡುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು. ಶೀಘ್ರದಲ್ಲಿ ಎಲ್ಲಾ ಆರೋಪಗಳಿಂದ ಮುಕ್ತನಾಗಿ ಹೊರಬರುತ್ತೇನೆ ಎಂದರು.

ಭಕ್ತಾದಿಗಳು ಯಾವುದೇ ಕಾರಣಕ್ಕೂ ಆತಂಕಪಡಬೇಕಾಗಿಲ್ಲ. ಯಾವುದೇ ಊಹಾಪೋಗಳಿಗೆ ಕಿವಿಗೊಡಬಾರದು. ಏನೋ ಒಂದು ಅಹಿತಕರ ಸಂದರ್ಭ ಎದುರಾಗಿದೆ. ಅದನ್ನು ಶಾಂತ ರೀತಿಯಲ್ಲಿ ಬಗೆಹರಿಸಿಕೊಳ್ಳೋಣ ಎಂದು ಭಕ್ತರಿಗೆ ವಿಶ್ವಾಸ ತುಂಬಿದರು.

**ಪ್ರಯಾಣಕ್ಕೆ ಪೊಲೀಸರ ತಡೆ:** ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ಕಾರನ್ನು ಹಾವೇರಿ ಜಿಲ್ಲೆಯ ಬಂಕಾಪುರದ ಬಳಿ ತಡೆದ ಪೊಲೀಸರು ಚಿತ್ರದುರ್ಗಕ್ಕೆ ವಾಪಸ್ ಕಳುಹಿಸಿದರು.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ಅವರನ್ನು ಹಾವೇರಿ ಪೊಲೀಸರು ಬಂಕಾಪುರದ ಬಳಿ ತಡೆದು, ಅವರೊಂದಿಗೆ ಚರ್ಚಿಸಿ, ಚಿತ್ರದುರ್ಗಕ್ಕೆ ಮರಳುವಂತೆ ಮನವೊಲಿಸಿದ ನಂತರ ಪೊಲೀಸ್ ಭದ್ರತೆಯಲ್ಲಿ ಚಿತ್ರದುರ್ಗಕ್ಕೆ ಕರೆತಂದರು.

**ಭಕ್ತರಿಂದ ಸ್ವಾಗತ:** ಹಾವೇರಿ ಕಡೆ ಹೋಗಿದ್ದ ಶರಣರನ್ನು ಪೊಲೀಸರು ಮಧ್ಯಾಹ್ನ 1.05ಕ್ಕೆ ಮಠಕ್ಕೆ ಕರೆತಂದರು. ಕಾರಿನಲ್ಲಿ ಮರಳಿದ ಶ್ರೀಗಳಿಗೆ ಮಠದ ಆವರಣದಲ್ಲಿ ಜಮಾಯಿಸಿದ್ದ ಅಪಾರ ಭಕ್ತರು ಸ್ವಾಗತ ಕೋರಿದರು. ಶಿವಮೂರ್ತಿ ಮುರುಘಾ ಶರಣರು ಹಾಗೂ ಮುರುಘಾ ಪರಂಪರೆಗೆ ಸಂಬಂಧಿಸಿದ ಘೋಷಣೆ ಮೊಳಗಿಸಿದರು.

**ಶ್ರೀಗಳು ನಾಪತ್ತೆಯಾಗಿಲ್ಲ, ಬಂಧನವೂ ಆಗಿಲ್ಲ:** ಇಂದು ಬೆಳಗ್ಗೆ ಮುರುಘಾ ಮಠದ ಶ್ರೀಗಳು ಅಜ್ಞಾತ ಸ್ಥಳಕ್ಕೆ ತೆರಳುತ್ತಿದ್ದಾಗ ಪೊಲೀಸರು ಬಂಧಿಸಿದ್ದಾರೆ ಎಂದು ಕೆಲವು ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಆದರೆ, ಇದಕ್ಕೆ ಸ್ಪಷ್ಟನೆ ನೀಡಿರುವ ಮಠದ ಸಿಬ್ಬಂದಿ, ಸ್ವಾಮೀಜಿ ಎಲ್ಲಿಯೂ ಹೋಗಿಲ್ಲ. ಅವರು ಧಾರವಾಡಕ್ಕೆ ವಕೀಲರನ್ನು ಭೇಟಿಯಾಗಲು ತೆರಳಿದ್ದರು. ಧಾರವಾಡದಿಂದ ಅವರು ಮಠಕ್ಕೆ ವಾಪಸ್ಸಾಗಿದ್ದಾರೆ ಎಂದು ಮಠದ ಭಕ್ತ ಆನಂದಪ್ಪ ತಿಳಿಸಿದ್ದಾರೆ. ಧಾರವಾಡಕ್ಕೆ ಅವರು ತೆರಳುತ್ತಿದ್ದ ವೇಳೆ ಅವರ ಭದ್ರತೆಗಾಗಿ ಅವರ ಹಿಂದೆ ಪೊಲೀಸ್ ವಾಹನ ಬಂದಿದೆ. ಟೋಲ್‌ನಲ್ಲಿ ಅವರ ಕಾರು ನಿಂತಿದ್ದಾಗ, ಅವರ ಹಿಂದೆ ಪೊಲೀಸ್ ವಾಹನ ನಿಂತಿತ್ತು ಅಷ್ಟೇ. ಅದನ್ನು ತಪ್ಪಾಗಿ ಅರ್ಥೈಸಿಕೊಂಡು ಮಾಧ್ಯಮ ಗಳಲ್ಲಿ ವರದಿಯಾಗಿದೆ ಎಂದ ಅವರು, ಸ್ವಾಮೀಜಿ ಬಂಧನ ವಾಗಿಲ್ಲ. ಅಜ್ಞಾತ ಸ್ಥಳಕ್ಕೆ ಹೋಗುವ ಪ್ರಯತ್ನವೂ ಮಾಡುತ್ತಿಲ್ಲ ಎಂದರು.

### ನಿರೀಕ್ಷಣಾ ಜಾಮೀನು ಕೋರಿ ಅರ್ಜಿ

**ಚಿತ್ರದುರ್ಗ:** ಇಲ್ಲಿನ ಮುರುಘಾ ಮಠದ ಡಾ.ಶಿವಮೂರ್ತಿ ಶರಣರು ಬಂಧನ ಭೀತಿ ಎದುರಿಸುತ್ತಿದ್ದು, ಸೋಮವಾರ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ. ಶ್ರೀಗಳ ಪರ ವಕೀಲರು ನಿರೀಕ್ಷಣಾ ಜಾಮೀನು ಕೋರಿ ಚಿತ್ರದುರ್ಗದ 2ನೇ ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದು, ಅರ್ಜಿ ವಿಚಾರಣೆಗೆ ಅಂಗೀಕರಿಸಿದ ನ್ಯಾಯಾಲಯ ವಿಚಾರಣೆಯನ್ನು ಸೆ.1ಕ್ಕೆ ನಿಗದಿಪಡಿಸಿದೆ. ಮುರುಘಾಶ್ರೀ ವಿರುದ್ಧ ಪೋಕ್ಸೋ ಕಾಯ್ದೆ ಅಡಿ ಪ್ರಕರಣ ದಾಖಲಾಗಿದ್ದು, ಶ್ರೀಗಳನ್ನು ಯಾವುದೇ ಕ್ಷಣದಲ್ಲೂ ಬಂಧಿಸುವ ಸಾಧ್ಯತೆ ಇದೆ ಎಂಬ ಕಾರಣಕ್ಕಾಗಿ ಶ್ರೀಗಳು ನಿರೀಕ್ಷಣಾ ಜಾಮೀನಿಗಾಗಿ ಅರ್ಜಿ ಸಲ್ಲಿಸಿದ್ದಾರೆ.

### ಯಾರಿಂದಲೂ ಒತ್ತಡವಿಲ್ಲ



ಹುಬ್ಬಳ್ಳಿ, ಆ.29– ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದ ತನಿಖೆ ಎಲ್ಲಾ ಆಯಾಮಗಳಲ್ಲೂ ನಡೆಯುತ್ತಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಿಂದಲೂ ಒತ್ತಡ ಬಂದಿಲ್ಲ ಎಂದು ಅಪರಾಧ ಮತ್ತು ಕಾನೂನು ಸುವ್ಯವಸ್ಥೆ ಎಡಿಜಿಪಿ ಅಲೋಕ್‌ಕುಮಾರ್ ಹೇಳಿದರು.

ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ಮಕ್ಕಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ. ಅವರ ಪೋಷಕರನ್ನು ಸಹ ಸಂಪರ್ಕಿಸಿದ್ದು, ಮಾಹಿತಿಯನ್ನು ಸಂಗ್ರಹಿಸಲು ಮುಂದಾಗಿದ್ದೇವೆ. ಪೋಕ್ಸೋ ಕಾಯ್ದೆಯಡಿ ತನಿಖೆ ಮುಂದುವರಿದಿದೆ ಎಂದರು.

ಕೆಲವು ಮಾಧ್ಯಮಗಳಲ್ಲಿ ಮುರುಘಾ ಶ್ರೀಗಳ ಬಂಧನದ ಕುರಿತು ಮಾಹಿತಿ ಬರುತ್ತಿವೆ. ಬಂಧನವಾಗಿದ್ದರೆ ನನಗೆ ಮಾಹಿತಿ ದೊರೆಯುತ್ತಿತ್ತು. ಆದರೆ, ಈವರೆಗೆ ಅಂತಹ ಯಾವುದೇ ಮಾಹಿತಿ ಲಭ್ಯವಾಗಿಲ್ಲ. ಮಾಧ್ಯಮಗಳಿಗೆ ಅರ್ಧ ಮಾಹಿತಿಯನ್ನು ನೀಡಬಾರದು ಎಂದು ಪೊಲೀಸ್ ಅಧಿಕಾರಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ. ತನಿಖಾ ಹಂತದಲ್ಲಿ ಯಾವುದೇ ಮಾಹಿತಿ ನೀಡಬಾರದು ಎಂದು ಕೋರ್ಟ್ ಆದೇಶ ಸಹ ಇದೆ ಎಂದು ಹೇಳಿದರು.

## ಸಂತ್ರಸ್ತ ಬಾಲಕಿಯರ ವೈದ್ಯಕೀಯ ಪರೀಕ್ಷೆ; ಹೇಳಿಕೆ ದಾಖಲು

ಚಿತ್ರದುರ್ಗ,ಆ.29–ಇಲ್ಲಿನ ಶಿವಮೂರ್ತಿ ಮುರುಘಾ ಶರಣರ ವಿರುದ್ಧ ಪೋಕ್ಸೋ ಕಾಯ್ದೆಯಡಿ ದಾಖಲಾದ ಪ್ರಕರಣದ ತನಿಖೆಯನ್ನು ಪೊಲೀಸರು ಚುರುಕುಗೊಳಿಸಿದ್ದಾರೆ. ಸಂತ್ರಸ್ತ ಬಾಲಕಿಯರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಹೇಳಿಕೆ ದಾಖಲಿಸಿಕೊಂಡಿದ್ದಾರೆ.

ಲೈಂಗಿಕ ಕಿರುಕುಳ ಪ್ರಕರಣದ ಸಂತ್ರಸ್ತ ಬಾಲಕಿಯರನ್ನು ಮೈಸೂರಿನಿಂದ ಚಿತ್ರದುರ್ಗಕ್ಕೆ ಭಾನುವಾರ ನಸುಕಿನಲ್ಲಿ ಕರೆತರಲಾಗಿದ್ದು, ಇವರಿಗೆ ಬಾಲಕಿಯರ ಬಾಲಮಂದಿರದಲ್ಲಿ ಆಶ್ರಯ ನೀಡಲಾಗಿತ್ತು. ಮಕ್ಕಳ ಕಲ್ಯಾಣ ಸಮಿತಿಯ ಸಮಾಲೋಚಕರು ಮತ್ತು ಮಹಿಳಾ ಪೊಲೀಸರು ಬಾಲಕಿಯರ ಹೇಳಿಕೆಯನ್ನು ದಾಖಲಿಸಿಕೊಂಡರು. ಮೈಸೂರಿನಲ್ಲಿ ನೀಡಿದ ಹೇಳಿಕೆಯನ್ನೇ ಸಮಿತಿಯ ಎದುರು ಸಂತ್ರಸ್ತರು ಪುನರುಚ್ಚರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.


ಮಕ್ಕಳ ನೆರವಿಗೆ ಧಾವಿಸಿದ್ದ ಒಡನಾಡಿ ಸೇವಾ ಸಂಸ್ಥೆಯ ಸಿಬ್ಬಂದಿ ಹೊರಗಿಟ್ಟು ಹೇಳಿಕೆ ದಾಖಲಿಸಿಕೊಳ್ಳುವ ಪ್ರಯತ್ನವೂ ನಡೆಯಿತು. ಇದಕ್ಕೆ ಆಕ್ಷೇಪಿಸಿದಾಗ ವಾಗ್ವಾದ ನಡೆಯಿತು. ಸರ್ಕಾರಿ ಅಭಿಯೋಜಕರ ಸಲಹೆ, ಸಂತ್ರಸ್ತ ಬಾಲಕಿಯರ ಅಪೇಕ್ಷೆಯ ಮೇರೆಗೆ ಒಡನಾಡಿ ಸೇವಾ ಸಂಸ್ಥೆಯ ಪ್ರತಿನಿಧಿಗಳ ಸಮ್ಮುಖದಲ್ಲಿ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ.

**ಸಾಕ್ಷ್ಯಾಧಾರ ಸಂಗ್ರಹ ಶುರು:** ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವಲ್ಲಿ ಪೊಲೀಸರ ಮತ್ತೊಂದು ತಂಡ ಕಾರ್ಯನಿರತವಾಗಿತ್ತು. ತನಿಖಾಧಿಕಾರಿ ಡಿವೈಎಸ್‌ಪಿ ಅನಿಲ್‌ಕುಮಾರ್ ಮಾರ್ಗದರ್ಶನದಲ್ಲಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪೂರಕ ಸಾಕ್ಷ್ಯ ಕಲೆಹಾಕುವಲ್ಲಿ ಪ್ರಯತ್ನ ನಡೆಸಿತು. ಕೃತ್ಯ ನಡೆದ ಸ್ಥಳದ ಮಹಜರು, ವಿಚಾರಣೆಗೆ ಹಾಜರಾಗಲು ಆರೋಪಿಗಳಿಗೆ ನೋಟಿಸ್ ನೀಡುವ ಪ್ರಕ್ರಿಯೆ ನಡೆದಿದೆ.

ಮತ್ತೊಂದೆಡೆ ಮಠದ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ದಂಪತಿ ವಿರುದ್ಧದ ಲೈಂಗಿಕ ಕಿರುಕುಳ ಹಾಗೂ ಮಕ್ಕಳ ಅಪಹರಣ ಪ್ರಕರಣದ ತನಿಖೆ ಶುರುವಾಗಿಲ್ಲ. ಬಸವರಾಜನ್ ಮನೆಗೆ ಬೀಗ ಹಾಕಿದ್ದು, ದಂಪತಿ ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ ಎನ್ನಲಾಗುತ್ತಿದೆ.

## ಶಿವಮೂರ್ತಿ ಮುರುಘಾ ಶರಣರ ಪ್ರತಿಮೆ ಧ್ವಂಸ





ಚಿತ್ರದುರ್ಗ, ಆ.29– ಮುರುಘಾ ಮಠದ ಶರಣರ ವಿರುದ್ಧ ಲೈಂಗಿಕ ಪ್ರಕರಣ ರಾಜ್ಯದಲ್ಲಿ ತಲ್ಲಣ ಮೂಡಿಸಿದೆ. ಶರಣರ ವಿರುದ್ಧ ಪರ–ವಿರೋಧ ಘೋಷಣೆಗಳು ಕೇಳಿ ಬರುತ್ತಿವೆ. ಈ ಪ್ರಕರಣದ ಬಗ್ಗೆ ಮೊದಲ ಬಾರಿಗೆ ತನಿಖೆಯನ್ನು ಎದುರಿಸುವುದಾಗಿ ಸ್ವತಃ ಸ್ವಾಮೀಜಿ ಸ್ಪಷ್ಟನೆ ನೀಡಿದ್ದಾರೆ.

ಆದರೆ ಮತ್ತೊಂದು ಕಡೆ ಸ್ವಾಮೀಜಿ ಪ್ರತಿಮೆಯನ್ನು ಯುವಕರ ಗುಂಪೊಂದು ಧ್ವಂಸಗೊಳಿಸಿರುವ ಘಟನೆ ನಡೆದಿದೆ.

ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದಲ್ಲಿ ನಿರ್ಮಿಸಲಾಗಿದ್ದ ಶಿವಮೂರ್ತಿ ಮುರುಘಾ ಶರಣರ ಪ್ರತಿಮೆಯನ್ನು ಗ್ರಾಮಸ್ಥರು ಸೋಮವಾರ ಧ್ವಂಸಗೊಳಿಸಿ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮಲ್ಲಾಡಿಹಳ್ಳಿ, ರಾಮಘಟ್ಟ, ಡುಮ್ಮಿ, ಕೆಂಗುಂಟೆ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಯುವಕರು ಗುಂಪು ಆಶ್ರಮ ಪ್ರವೇಶಿಸಿ ಶಿವಮೂರ್ತಿ ಶರಣರ ಫೋಟೋಗಳನ್ನು ಹೊರಗೆ ತಂದು, ಗ್ರಾಮದ ಮುಖ್ಯವೃತ್ತದಲ್ಲಿ ಸುಟ್ಟು ಹಾಕುವ ಮೂಲಕ ಪ್ರತಿಭಟನೆ ನಡೆಸಿದರು.

ಮುರುಘಾ ಶರಣರು ಆಶ್ರಮದ ಅಧ್ಯಕ್ಷರಾಗಿ 15 ವರ್ಷ ಕಳೆದಿದೆ, ಆದರೆ ಯಾವುದೇ ಅಭಿವೃದ್ಧಿಯಾಗಿಲ್ಲ. ಆಶ್ರಮದ ಆವರಣದಲ್ಲಿ ದನ–ಕರು ಮೇಯುವಂತ ದುಸ್ಥಿತಿ ಬಂದಿದೆ. ಆಶ್ರಮಕ್ಕೆ ಕೋಟ್ಯಾಂತರ ರೂ. ಆದಾಯ ಬರುತ್ತದೆ, ಆದರೆ ಎಲ್ಲಾ ಹಣ ದುರುಪಯೋಗ ಮಾಡಲಾಗುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಮಲ್ಲಾಡಿಹಳ್ಳಿ ಆಶ್ರಮ ಹಿಂದೆ ಶಿಸ್ತಿಗೆ ಹೆಸರಾಗಿತ್ತು, ಈಗ ಶಿಸ್ತು ಮಾಯವಾಗಿದೆ. ಟ್ರಸ್ಟಿಗಳು ಆಶ್ರಮಕ್ಕೆ ಬರುತ್ತಿಲ್ಲ. ಇದೀಗ ಸ್ವಾಮೀಜಿ ಮೇಲೆ ಆರೋಪ ಕೇಳಿಬರುತ್ತಿದ್ದು, ಅವರನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಯುವಕರ ಗುಂಪು ಆಕ್ರೋಶ ಹೊರ ಹಾಕಿತು.

## ಮೈಸೂರು ಹಾಗೂ ಸುತ್ತಮುತ್ತ ಇಂದು...



### ಇಂದಿನ ಪಂಚಾಂಗ

**30.08.2022 ಮಂಗಳವಾರ, ಮಳೆ ನಕ್ಷತ್ರ : ಮಖೆ, 17.08.2022 ರಿಂದ 30.08.2022**
**ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ**
**ತಿಥಿ: ತೃತೀಯ, ನಕ್ಷತ್ರ : ಹಸ್ತ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ**

- **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ಸಾಮವೇದ ಉಪಾಕರ್ಮ, ಸ್ವರ್ಣಗೌರೀ ವ್ರತ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.
- **ಶ್ರೀ ವಿದ್ಯಾಗಣಪತಿ ದೇವಸ್ಥಾನ ಹಾಗೂ ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** ಗೌರಿ–ಗಣೇಶ ಹಬ್ಬದ 42ನೇ ವಾರ್ಷಿಕೋತ್ಸವ, ಬೆಳಗ್ಗೆ 4.30ಕ್ಕೆ ಸ್ವರ್ಣಗೌರಿ ಪ್ರತಿಷ್ಠಾಪನೆ, ಬೆಳಗ್ಗೆ 7ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, 6ನೇ ಮುಖ್ಯ ರಸ್ತೆ, ವಿನಾಯಕನಗರ.
- **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ, 68ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಬೆಳಗ್ಗೆ ಪುಣ್ಯಾಹ, ಪಂಚಗವ್ಯ ಸಾಧನೆ, ಪೋಷಣೆ, ರಕ್ಷಾ ಬಂಧನ, ಬೆಳಗ್ಗೆ 8ಕ್ಕೆ ಸ್ವರ್ಣಗೌರಿ ಸ್ಥಾಪನೆ, ಅಷ್ಟೋತ್ತರ ಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ.
- **ಟೆರೇಷಿಯನ್ ಕಾಲೇಜು :** ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಅಂಗವಾಗಿ ಭಾರತೀಯ ಸ್ವಾತಂತ್ರ್ಯ ಚಳವಳಿ ಪರಾಮರ್ಶೆ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಡಾ. ಲ್ಯಾನ್ಸಿ ಡಿಸೋಜಾ, ಪ್ರೊ. ಪುಷ್ಪಾ ಶರ್ಮ, ಸ್ಥಳ: ಅವೆ ಮರಿಯಾ ಗೋಲ್ಡನ್ ಜ್ಯೂಬಿಲಿ ಸಭಾಂಗಣ, ಮಧ್ಯಾಹ್ನ 1.30ಕ್ಕೆ.

### ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸದಾಶಿವ ಪಾಟೀಲ್ ಮತ್ತು ಪಿ. ಸುರಭೀ, ವ್ಯಾಖ್ಯಾನ– ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.00 ವೃತ್ತಿ ಮಾರ್ಗದರ್ಶನ–ಆರ್ಕಿಯಾಲಜಿ ಮತ್ತು ಮ್ಯೂಸಿಯಾಲಜಿ ವಿಷಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಸಿ.ಇ. ಲೋಕೇಶ್ ಅವರೊಂದಿಗೆ ಮಾತುಕತೆ, 10.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ಕಾರ್ಯಕ್ರಮ ಸರಣಿ.

**ಮಧ್ಯಾಹ್ನ:** 12.30 ದೇವರನಾಮ–ವೃಂದಗಾನ, 12.45 ಮಧ್ಯಮ ಮಾರ್ಗ–ಚಂದ್ರಶೇಖರ್ ವಸ್ತ್ರದ್ ಅವರಿಂದ ವಿನೋದ ಭಾಷಣ, ಸಂದರ್ಶಕರು– ದಿವಾಕರ ಹೆಗಡೆ, 1.20 ಭಾವಗೀತೆ –ಸಾವಿತ್ರಿ ಪ್ರಭಾಕರ್, 3.00 ಶ್ರೀರಾಂ ಭಟ್–ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ "ಗಜಗೌರಿ ವ್ರತ"– ಪ್ರಸ್ತುತಿ – ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ, ಪುಣ್ಯಕೋಟಿ ದತ್ತು ಯೋಜನೆ ಕುರಿತು ಡಾ.ಎಂ.ಎಸ್.ನಂದಿನಿ ಅವರೊಡನೆ ಸಂದರ್ಶನ, 9.30 ಸ್ಮಿತಾ ಶ್ರೀಕಿರಣ್–ವೇಣು ವಾದನ, 10.00 ಕಾವ್ಯವಾಚನ, ವಾಚನ–ಎಂ.ವಿ. ಶುಭ, ವ್ಯಾಖ್ಯಾನ– ದಿನಮಣಿ ಶ್ರೀನಿವಾಸಮೂರ್ತಿ

# ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ರೇಸ್‌ಕೋರ್ಸ್ ಬಳಿ ಸಿಎ ನಿವೇಶನ; ಕಟ್ಟಡ ನಿರ್ಮಾಣಕ್ಕೂ ಹಣಕಾಸು ನೆರವು

● ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಭರವಸೆ ● ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ, ಪತ್ರಕರ್ತರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು,ಆ.29(ಪಿಎಂ)–ಮೈಸೂರು ಜಿಲ್ಲಾ ಪತ್ರಕರ್ತರ ಸಂಘಕ್ಕೆ ಮೈಸೂರಿನ ರೇಸ್‌ಕೋರ್ಸ್ ಸಮೀಪ ಸಿಎ ನಿವೇಶನ (ನಾಗರಿಕ ಸೌಕರ್ಯ ನಿವೇಶನ) ನೀಡಲು ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಉಪಸಮಿತಿಯಲ್ಲಿ ತೀರ್ಮಾನವಾಗಿದೆ. ಸದ್ಯದಲ್ಲೇ ಸದರಿ ನಿವೇಶನ ಸಂಘಕ್ಕೆ ಲಭ್ಯವಾಗಲಿದ್ದು, ಮುಖ್ಯಮಂತ್ರಿಗಳ ಗಮನಕ್ಕೆ ತಂದು ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಹಣಕಾಸು ನೆರವು ಕಲ್ಪಿಸಿಕೊಡುವುದಾಗಿ ಸಹಕಾರ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಸಂಘದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆ, ಪ್ರಶಸ್ತಿ ಪ್ರದಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಘದ ಅಧ್ಯಕ್ಷರು ಸದರಿ ನಿವೇಶನ ಸೂಕ್ತವಾಗಿದೆ ಎಂದು ಹೇಳಿದ್ದಾರೆ. ಸಂಘದ ಕಟ್ಟಡ ನಿರ್ಮಾಣಕ್ಕೆ ಸರ್ಕಾರ, ಜಿಲ್ಲಾಡಳಿತದಿಂದ ಅಗತ್ಯವಿರುವ ಎಲ್ಲಾ ಸಹಕಾರ ನೀಡಲಾಗುವುದು ಎಂದು ತಿಳಿಸಿದರು.

ನಾನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವನಾದ ಬಳಿಕ ಇಲ್ಲಿನ ಪತ್ರಿಕೋದ್ಯಮ ಮತ್ತು ಪತ್ರಕರ್ತರ ಕಾರ್ಯವೈಖರಿಯನ್ನು ಹತ್ತಿರದಿಂದ ನೋಡಿದ್ದೇನೆ. ಮಳೆ, ಚಳಿ, ಬಿಸಿಲು ಯಾವುದನ್ನೂ ಲೆಕ್ಕಿಸದೇ ಪತ್ರಕರ್ತರು ಸುದ್ದಿ ಸಂಗ್ರಹಿಸಿ ಸಾರ್ವಜನಿಕರಿಗೆ ಮುಟ್ಟಿಸುವ ಕೆಲಸ ಮಾಡುತ್ತಿದ್ದಾರೆ. ಕೆಲವು ಬಾರಿ ಪ್ರಾಣ ಕೂಡ ಲೆಕ್ಕಿಸದೇ ಕೆಲಸ ಮಾಡುವುದೂ ಇದೆ. ಅದರಲ್ಲೂ ಕೋವಿಡ್ ಸಂದರ್ಭದಲ್ಲಂತೂ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ಕರ್ತವ್ಯ ನಿರ್ವಹಿಸಿದ್ದಾರೆ. ಇಂದು ಪತ್ರಕರ್ತರಿಗೆ ಪ್ರಶಸ್ತಿ ಪ್ರದಾನ ಹಾಗೂ ಅಭಿನಂದಿಸುತ್ತಿರುವ ಹಿನ್ನೆಲೆಯಲ್ಲಿ ಅವರಿಗೆ ಇನ್ನೂ ಹೆಚ್ಚಿನ ಕೆಲಸ ಮಾಡಲು ಉತ್ತೇಜನ ದೊರೆಯಲಿದೆ ಎಂದರು.

ಮೈಸೂರಿನ ಪತ್ರಕರ್ತರು ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಸಾರ್ವಜನಿಕರಿಗೆ ಮುಟ್ಟಿಸುತ್ತಿದ್ದಾರೆ.



ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಸಂಘದ ವಿವಿಧ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು.

ಜೊತೆಗೆ ಸರ್ಕಾರ ಹಾಗೂ ಸಂಬಂಧಿಸಿದ ಆಡಳಿತ ವ್ಯವಸ್ಥೆಯ ಗಮನಕ್ಕೆ ತರುವಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದ್ದಾರೆ. ಕೋವಿಡ್ ಸಂದರ್ಭದಲ್ಲಂತೂ ಪತ್ರಕರ್ತರಿಂದ ಲಭ್ಯವಾದ ಮಾಹಿತಿಗಳಿಂದ ಸಾಕಷ್ಟು ಅನುಕೂಲವಾಯಿತು. ಎಷ್ಟೋ ವಿಷಯಗಳು ಜಿಲ್ಲಾಡಳಿತ ಮತ್ತು ಸರ್ಕಾರಕ್ಕೂ ಗೊತ್ತಾಗುವುದಿಲ್ಲ. ಆದರೆ ಪತ್ರಕರ್ತರು ತಮಗೆ ಇರುವ ಮಾಹಿತಿ ಮೂಲಗಳಿಂದ ಮಹತ್ವದ ವಿಷಯಗಳನ್ನು ಕಲೆ ಹಾಕುತ್ತಾರೆ ಎಂದರು.

**ಮಳೆ ಹಾನಿ ಆಧರಿಸಿ ದಸರಾ ರೂಪುರೇಷೆ:** ಕಳೆದ ಎರಡು ವರ್ಷಗಳಲ್ಲಿ ದಸರಾ ಸರಳ ಮತ್ತು ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಯಿತು. ಆದರೆ ಈ ವರ್ಷ ಅದ್ದೂರಿ ದಸರಾ ಆಚರಣೆಗೆ ದಸರಾ ಉನ್ನತ ಸಮಿತಿ ನಿರ್ಧಾರ ಕೈಗೊಂಡಿದೆ. ಆದರೆ ಮಳೆಯಿಂದ ಸಾಕಷ್ಟು ಹಾನಿ ಉಂಟಾಗುತ್ತಿದೆ. ಇದೆಲ್ಲವನ್ನೂ ಗಮನಲ್ಲಿಟ್ಟುಕೊಂಡು ದಸರಾ ಆಚರಣೆಯ ರೂಪುರೇಷೆ ಸಿದ್ಧಗೊಳ್ಳಲಿದೆ ಎಂದು ಸೋಮಶೇಖರ್ ತಿಳಿಸಿದರು.

**ಮೈಸೂರು ಪ್ರವಾಸೋದ್ಯಮಕ್ಕೆ ಉತ್ತೇಜನ:** ಈಗಾಗಲೇ ಮುಖ್ಯಮಂತ್ರಿಗಳು ಮೈಸೂರಿನ ಪ್ರವಾಸೋದ್ಯಮದ ಆಕರ್ಷಣೆಗೆ ಮತ್ತಷ್ಟು ಮೆರುಗು ನೀಡಲು ಉದ್ದೇಶಿಸಿದ್ದಾರೆ. ವಿದೇಶಿಗರ ದಸರಾ ವೀಕ್ಷಣೆಗೆ ಅನುಕೂಲ ಕಲ್ಪಿಸಲು ಸಿದ್ಧತೆ ಮಾಡಲಾಗುತ್ತಿದೆ. ತಮ್ಮೆಲ್ಲರ ಸಹಕಾರದಿಂದ ಮೈಸೂರಿನಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ ಮಾಡುವ ಅವಕಾಶ ಲಭಿಸಿದೆ. ತಾವು ನನ್ನನ್ನು ಪ್ರಶಂಸಿಸಿದಾಗ ಮಾತ್ರವಲ್ಲದೆ, ನ್ಯೂನತೆಗಳನ್ನು ಎತ್ತಿಹಿಡಿದಾಗಲೂ ನಾನು ಸ್ವಾಗತ ಮಾಡಿದ್ದೇನೆ. ನ್ಯೂನತೆ ತಿಳಿಸಿದಾಗ ತಪ್ಪು ತಿದ್ದಿಕೊಳ್ಳಲು ಅನುಕೂಲವಾಗಿದೆ ಎಂದು ಸಚಿವರು ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಈಗ ಸಂಘಕ್ಕೆ ರೇಸ್‌ಕೋರ್ಸ್ ಬಳಿ ನೀಡಿರುವ ನಿವೇಶನವು 9 ಗುಂಟೆ ವಿಸ್ತೀರ್ಣವಿದ್ದು, ಮುಖ್ಯ ರಸ್ತೆಗೆ ಸುಮಾರು 150 ಅಡಿಯಷ್ಟು ಅಂತರವಿದೆ. ಸಂಘದ ಎಲ್ಲಾ ಚಟುವಟಿಕೆಗಳಿಗೆ ಪೂರಕ ವ್ಯವಸ್ಥೆ ಇಲ್ಲಿದೆ. ನಿವೇಶನ ಮಂಜೂರು ಮಾಡಿಸಲು ಸಹಕಾರ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ, ಅಂದಿನ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಸಹಕರಿಸಿದ ಎಲ್ಲಾ ಜನಪ್ರತಿನಿಧಿಗಳಿಗೆ ಸಂಘದ ಪರವಾಗಿ ಕೃತಜ್ಞತೆ ಅರ್ಪಿಸುವುದಾಗಿ ತಿಳಿಸಿದರು.

ಕಟ್ಟಡ ನಿರ್ಮಾಣಕ್ಕೆ ಸಿಎಂ ಅವರಿಂದ ಗುದ್ದಲಿ ಪೂಜೆ ಮಾಡಿಸುವ ಜೊತೆಗೆ ಹೆಚ್ಚು ಅನುದಾನ ಕಲ್ಪಿಸಬೇಕು. ಈ ಕಟ್ಟಡ ನಿರ್ಮಿಸಲು ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ತಮ್ಮ ಅನುದಾನಲ್ಲಿ ತಲಾ 25 ಲಕ್ಷ ಕಲ್ಪಿಸಿಕೊಡುವ ಭರವಸೆ ನೀಡಿದ್ದಾರೆ ಎಂದರು.

ಕೋವಿಡ್ ಸಂದರ್ಭದಲ್ಲಿ ವೈದ್ಯರು, ಪೊಲೀಸರು ಸೇರಿದಂತೆ ಹಲವು ಕ್ಷೇತ್ರದವರು ಹೊರಬಂದು ಕರ್ತವ್ಯ ನಿರ್ವಹಿಸಲೇಬೇಕಿತ್ತು. ಅದೇ ರೀತಿ ಪತ್ರಕರ್ತರೂ ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ಪತ್ರಕರ್ತರಿಗೆ ನೆರವಾದ ಎಲ್ಲಾ ರಾಜಕಾರಣಿಗಳು, ಜನಪ್ರತಿನಿಧಿಗಳು ಹಾಗೂ ಹಿತೈಷಿಗಳಿಗೆ ಕೃತಜ್ಞತೆ ಅರ್ಪಿಸುವುದಾಗಿ ತಿಳಿಸಿದರು.

**ಪತ್ರಕರ್ತರು, ಛಾಯಾಗ್ರಾಹಕರಿಗೆ ಪ್ರಶಸ್ತಿ:** ಇದೇ ವೇಳೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕಾ ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ ಸೇರಿದಂತೆ ವರದಿಗಾರರಾದ ಜೆ.ರವಿಚಂದ್ರ, ಪ್ರತಾಪ್ ಟಿ.ಕೋಡಿನರಸೀಪುರ, ಕೆ.ಕೆ.ಕಾರ್ತಿಕ್, ಜಿ.ಜಯಂತ್, ಎಂ.ಸಿ.ರಾಘವೇಂದ್ರಸ್ವಾಮಿ, ಕ್ಯಾಮರಾಮನ್ ರಾಮು ಅವರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜೊತೆಗೆ ಪತ್ರಕರ್ತರಾದ ಬಿ.ಎಸ್.ಪ್ರಭುರಾಜನ್, ಮಾಚಮ್ಮ ಮಲ್ಲಿಗೆ, ಹೆಚ್.ಪಿ.ಕೃಷ್ಣಶೆಟ್ಟಿ, ಹುಲ್ಲಹಳ್ಳಿ ಮೋಹನ್, ರಾಮ್, ಪತ್ರಿಕಾ ಛಾಯಾಗ್ರಾಹಕರಾದ ಪ್ರಗತಿ ಗೋಪಾಲಕೃಷ್ಣ, ಎಂ.ಎನ್.ಲಕ್ಷ್ಮೀನಾರಾಯಣ ಯಾದವ್, ಕ್ಯಾಮರಾಮನ್ ಕೆ.ವಿ.ಕಿರಣ್‌ಕುಮಾರ್ ಅವರನ್ನು ಅಭಿನಂದಿಸಲಾಯಿತು. ಅಲ್ಲದೆ, ಪ್ರಸಕ್ತ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಇತ್ತೀಚೆಗೆ ನಿಧನ ಹೊಂದಿದ ಪತ್ರಕರ್ತರಾದ ಮೈಸೂರಿನ ಸಿ.ಮಹೇಶ್ವರನ್, ನಂಜನಗೂಡಿನ ಶ್ರೀನಿವಾಸ ಮೂರ್ತಿ, ರವಿಶಂಕರ್ ಅವರ ಕುಟುಂಬಗಳಿಗೆ ಎಸ್.ಟಿ.ಸೋಮಶೇಖರ್ ವೈಯಕ್ತಿಕವಾಗಿ ತಲಾ 50 ಸಾವಿರ ರೂ. ನೆರವು ನೀಡಿದರು. ಶಾಸಕ ಎಲ್.ನಾಗೇಂದ್ರ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಉಪಾಧ್ಯಕ್ಷ ಎಂ.ಎಸ್.ಬಸವಣ್ಣ (ನಗರ), ಕಾರ್ಯದರ್ಶಿ ಪಿ.ರಂಗಸ್ವಾಮಿ (ನಗರ), ಖಜಾಂಚಿ ನಾಗೇಶ್ ಪಾಣತ್ತಲೆ ಮತ್ತಿತರರು ಹಾಜರಿದ್ದರು.

## ಮುಡಾ ಗುಂಪು ಮನೆ ಯೋಜನೆಯಡಿ ಪತ್ರಕರ್ತರಿಗೆ ಪ್ರತ್ಯೇಕ ಬ್ಲಾಕ್

ಮೈಸೂರು,ಆ.29(ಪಿಎಂ)– ಮುಡಾ ನಿರ್ಮಿಸುವ ಉದ್ದೇಶಿತ ಗುಂಪು ಮನೆ ಯೋಜನೆಯಡಿ ಪತ್ರಕರ್ತರಿಗೇ ಪ್ರತ್ಯೇಕ ಬ್ಲಾಕ್ ಒಂದನ್ನು ನೀಡಲು ಉದ್ದೇಶಿಸಲಾಗಿದೆ ಎಂದು ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಸದರಿ ಯೋಜನೆ ಅನುಷ್ಠಾನಕ್ಕೆ ಪ್ರಕ್ರಿಯೆ ಆರಂಭವಾಗಿದೆ. ಕೆಲವೇ ದಿನಗಳಲ್ಲಿ ಇದಕ್ಕೆ ಸರ್ಕಾರದಿಂದ ಅನುಮೋದನೆ ದೊರೆಯಲಿದೆ. ಪತ್ರಕರ್ತರ ಸಂಘದ ಮನವಿಯಂತೆ ಪತ್ರಕರ್ತರಿಗಾಗಿಯೇ ಪ್ರತ್ಯೇಕ ಬ್ಲಾಕ್ ವ್ಯವಸ್ಥೆ ಮಾಡಲಾಗುವುದು ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ಏಳೆಂಟು ಮಹಡಿಯ 1 ಯೂನಿಟ್ ಅನ್ನು ಪತ್ರಕರ್ತರಿಗಾಗಿಯೇ ಮೀಸಲಿಡುವ ಉದ್ದೇಶ ಹೊಂದಿರುವುದು ಸ್ವಾಗತಾರ್ಹ. ಸದರಿ ಯೋಜನೆಯಡಿ ಕೈಗೆಟಕುವ ದರದಲ್ಲಿ ಪತ್ರಕರ್ತರಿಗೆ ಮನೆಗಳನ್ನು ಕೊಡಿಸುವಂತೆ ಉಸ್ತುವಾರಿ ಸಚಿವರಲ್ಲಿ ಮನವಿ ಮಾಡಿದರು.



ಮೈಸೂರಿನ 19ನೇ ವಾರ್ಡ್ ಜಯಲಕ್ಷ್ಮೀಪುರಂನಲ್ಲಿ ನಗರಪಾಲಿಕೆ ಸದಸ್ಯೆ ಭಾಗ್ಯ ಮಹದೇಶ್ ಫಲಾನುಭವಿಗಳಿಗೆ ವೃದ್ಧಾಪ್ಯ, ವಿಧವಾ, ಎಸ್‌ಎಸ್‌ವೈ ವೇತನದ ಮಂಜೂರಾತಿ ಪತ್ರ ವಿತರಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯ ವಿ.ರಮೇಶ್ ಮೇಟಗಳ್ಳಿ, ಪಡುವಾರಹಳ್ಳಿ ಪಾಪಣ್ಣ, ರಮೇಶ್, ಕೃಷ್ಣ, ಮಾದೇಶ್, ಸತೀಶ್, ವಿನಯ್, ಶಿವರಾಜ್, ಮಹದೇವು ಇನ್ನಿತರರು ಉಪಸ್ಥಿತರಿದ್ದರು.




ದಿವಂಗತ ಆರ್.ಮಹದೇವಪ್ಪನವರ 23ನೇ ಪುಣ್ಯಸ್ಮರಣೆ ಅಂಗವಾಗಿ ಮೈಸೂರಿನ ಯರಗನಹಳ್ಳಿಯಲ್ಲಿರುವ ಆರ್.ಮಹದೇವಪ್ಪ ವೃತ್ತದ ಬಳಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಲಾಯಿತು. ನಗರಪಾಲಿಕೆ ಸದಸ್ಯೆ ಶ್ರೀಮತಿ ರಜನಿ ಅಣ್ಣಯ್ಯ, ಅಣ್ಣಯ್ಯ ಕುಟುಂಬ ವರ್ಗ, ಬಂಧುಗಳು ಉಪಸ್ಥಿತರಿದ್ದರು.



ಮೈಸೂರು ಯುವ ಬಳಗದಿಂದ ಗೌರಿ ಹಬ್ಬದ ಪ್ರಯುಕ್ತ 23ನೇ ವಾರ್ಡ್‌ನ ಪೌರಕಾರ್ಮಿಕರಿಗೆ ಶ್ರೀಮತಿ ವೈದೇಹಿ ಆಳ್ವಾರ್ ಬಾಗಿನ ಅರ್ಪಿಸಿದರು. ಈ ವೇಳೆ ಮುಡಾ ಸದಸ್ಯ ನವೀನ್‌ಕುಮಾರ್, ಇಳೈಆಳ್ವಾರ್ ಸ್ವಾಮೀಜಿ, ಸುದರ್ಶನ್ ಶ್ರೀನಿವಾಸ್, ಪ್ರಮೋದ್, ಅಯ್ಯಪ್ಪ, ನವೀನ್ ಇನ್ನಿತರರು ಉಪಸ್ಥಿತರಿದ್ದರು.

# ವಿಜಯನಗರ 3ನೇ ಹಂತ ಬಿ & ಸಿ ಬ್ಲಾಕ್ ನಡುವಿನ ರಸ್ತೆ ನಿರ್ಮಾಣ ದೂರದೃಷ್ಟಿಯಿಂದ ಕೂಡಿರಲಿ

ವಿಜಯನಗರ 3ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದಿಂದ ಮುಡಾ ಆಯುಕ್ತರಿಗೆ ಪತ್ರ; ಮನವಿ





ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಪತ್ರ ಸಲ್ಲಿಸಿದ ವಿಜಯನಗರ 3ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿಕುಮಾರ್ ಹಾಗೂ ಸದಸ್ಯರು.

ಮೈಸೂರು,ಆ.29(ಆರ್‌ಕೆಬಿ)–ವಿಜಯನಗರ 3ನೇ ಹಂತದಲ್ಲಿರುವ ಬಿ ಮತ್ತು ಸಿ ಬ್ಲಾಕ್ ನಡುವೆ ಹಾದು ಹೋಗುವ 80 ಅಡಿ ರಸ್ತೆಯನ್ನು ದೀರ್ಘ ಬಾಳಿಕೆ ಬರುವ ರೀತಿಯಲ್ಲಿ ವೈಜ್ಞಾನಿಕವಾಗಿ ಮರು ನಿರ್ಮಾಣ ಮಾಡುವ ಮೂಲಕ ಜನರ ತೆರಿಗೆ ಹಣ ವ್ಯರ್ಥವಾಗದಂತೆ ಗಮನಹರಿಸಲು 3ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದು, ಈ ಸಂಬಂಧ ಶಾಸಕ ಜಿ.ಟಿ.ದೇವೇಗೌಡರಲ್ಲೂ ಮನವಿ ಮಾಡಿದೆ.

ಈ ಸಂಬಂಧ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಪತ್ರ ಸಲ್ಲಿಸಿದ ಸಂಘದ ಅಧ್ಯಕ್ಷ ರವಿಕುಮಾರ್, ವಿಜಯನಗರ 3ನೇ ಹಂತದಲ್ಲಿರುವ ಖಾಯಂ ನಿವಾಸಿಗಳು ಮತ್ತು ವಾಸದ ಮನೆಗಳ ಮಾಲೀಕರಾದ ನಾವು 80 ಅಡಿ ರಸ್ತೆಯ ಅಗಲೀಕರಣ ಮತ್ತು ಪುನರ್ನಿರ್ಮಾಣದ ಯೋಜನೆಯನ್ನು ಕೈಗೆತ್ತಿಕೊಂಡ ಬಗ್ಗೆ ನಮಗೆ ಸಂತೋಷವಿದೆ. ವಿಜಯನಗರ ಬಿ ಮತ್ತು ಸಿ ಬ್ಲಾಕ್ ನಡುವೆ ಉತ್ತರದಿಂದ ದಕ್ಷಿಣಕ್ಕೆ 1 ಕಿ.ಮೀ. ಉದ್ದದ ಈ ರಸ್ತೆಯಲ್ಲಿರುವ 52 ಖಾಲಿ ವಸತಿ ಮನೆಗಳು, ತಮ್ಮ ಮನೆ ಮತ್ತು ವಾಣಿಜ್ಯ ಸಂಕೀರ್ಣಗಳನ್ನು ವಿವಿಧ ಸಮಯದಲ್ಲಿ ನಿರ್ಮಿಸಿದ್ದರು. ತಮ್ಮ ವಸತಿ ಗೃಹಗಳು ಅಥವಾ ವಾಣಿಜ್ಯ ಕಟ್ಟಡಗಳನ್ನು ನಿರ್ಮಿಸುವಾಗ ಅವರು ತಮ್ಮ ನಿರ್ಮಾಣಗಳಿಗೆ ನೀರು ಮತ್ತು ಒಳಚರಂಡಿ ಹಾಗೂ ವಿದ್ಯುತ್ ಸಂಪರ್ಕಕ್ಕಾಗಿ ಪೈಪ್‌ಗಳನ್ನು ಅಳವಡಿಸಲು ರಸ್ತೆ ಕತ್ತರಿಸಬೇಕಾಗುತ್ತದೆ. ಇದರಿಂದ ರಸ್ತೆಗೆ ಹಾನಿಯಾಗುತ್ತದೆ. ಇದರಿಂದ ರಸ್ತೆ ಹಾಳಾಗುವ ಜೊತೆಗೆ ವಾಹನಗಳ ಸುಗಮ ಸಂಚಾರಕ್ಕೂ ಅಡ್ಡಿಯಾಗಿ, ಅಪಘಾತಗಳಿಗೂ ಕಾರಣವಾಗಬಹುದು. ಹಾಗಾಗಿ ರಸ್ತೆ ನಿರ್ಮಿಸುವಾಗ ದೂರದೃಷ್ಟಿ ಹಾಗೂ ವೈಜ್ಞಾನಿಕ ಯೋಜನೆಯಡಿ ರಸ್ತೆ ಅಗಲೀಕರಣ ಮಾಡುವುದು ಸೂಕ್ತ. ಪ್ರಸ್ತುತ ರಸ್ತೆಗೆ ಜೆಲ್ಲಿ ಹಾಕುವುದು ಇತ್ಯಾದಿ ಶೇ.60ರಷ್ಟು ಕಾಮಗಾರಿ ಆಗಿದೆ. ರಸ್ತೆಯ ಉಳಿದ ಕಾಮಗಾರಿ 15 ದಿನ ಅಥವಾ ತಿಂಗಳ ನಂತರ ಕೈಗೊಳ್ಳುವಂತೆ ಅವರು ಮನವಿ ಮಾಡಿದ್ದಾರೆ. ಈ ವೇಳೆ ಸಂಘದ ಕಾರ್ಯದರ್ಶಿ ಆರ್.ಎಂ.ಚೊಕ್ಕಲಿಂಗಂ, ಖಜಾಂಚಿ ಕೆ.ಟಿ.ಗೋವಿಂದರಾಜು, ವೀಕೇರ್ ಟ್ರಸ್ಟ್‌ನ ಸುಬ್ರಹ್ಮಣಿ ಉಪಸ್ಥಿತರಿದ್ದರು.

## ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.29–ಕೆ.ಆರ್.ನಗರ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಡಿ.ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಪದವಿ ಕೋರ್ಸಿಗಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಬಿ, 3ಎ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ಮೆಟ್ರಿಕ್ ನಂತರದ ಸಾಮಾನ್ಯ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ 2022–23ನೇ ಸಾಲಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ಸೆ.12ರೊಳಗಾಗಿ ಅರ್ಜಿಯನ್ನು ಸಲ್ಲಿಸಲು ತಿಳಿಸಿದೆ. ಆಸಕ್ತ ವಿದ್ಯಾರ್ಥಿಗಳು www.bcwd. karnataka. gov.in ಸಂಪರ್ಕಿಸಿ, ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳು ಆದಲ್ಲಿ bcwd.hostels@karnataka.gov.in ಇ–ಮೇಲ್ ಮುಖಾಂತರ ಅಥವಾ ತಾಲೂಕು ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕೆಆರ್.ನಗರ ತಾಲೂಕು ಇವರನ್ನು ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ ಸಂಖ್ಯೆ: 080–8050370006 ಸಂಪರ್ಕಿಸಬಹುದು

# ಸೆಪ್ಟೆಂಬರ್ 12ರಿಂದ ಕರ್ನಾಟಕ ವಿಧಾನಸಭೆ ಅಧಿವೇಶನ



**ಬೆಂಗಳೂರು:** ಸೆಪ್ಟೆಂಬರ್ 12ರಿಂದ 10 ದಿನಗಳ ಕಾಲ ವಿಧಾನಸಭೆ ಅಧಿವೇಶನ ನಡೆಯಲಿದ್ದು, ಈ ಸಂಬಂಧ ವಿಧಾನಸಭೆ ಕಾರ್ಯದರ್ಶಿ ವಿಶಾಲಾಕ್ಷಿ ಸುತ್ತೋಲೆ ಹೊರಡಿಸಿದ್ದಾರೆ. ಆ.25ರಂದು ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದಿದ್ದ ಸಚಿವ ಸಂಪುಟ ಸಭೆಯಲ್ಲಿ ಸೆ.12ರಿಂದ 10 ದಿನಗಳ ಕಾಲ ವಿಧಾನ ಮಂಡಲ ಅಧಿವೇಶನ ನಡೆಸಲು ತೀರ್ಮಾನ ಕೈಗೊಳ್ಳಲಾಗಿತ್ತು. ಇದೀಗ ಅಧಿವೇಶನ ಆರಂಭದ ಸಿದ್ಧತೆಗಳಿಗೆ ಅಧಿಕೃತವಾಗಿ ಚಾಲನೆ ನೀಡಲಾಗಿದೆ. ವಿಧಾನಸೌಧದಲ್ಲಿ 10 ದಿನಗಳ ಕಾಲ ಅಧಿವೇಶನ ನಡೆಯಲಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ತಿಳಿಸಿದ್ದರು. ರಾಜ್ಯದಲ್ಲಿ ಹಾಲಿ ಅತಿವೃಷ್ಟಿಯಿಂದ ಆಗಿರುವ ಹಾನಿಗೆ ಪರಿಹಾರ, ಹೈಕೋರ್ಟ್ ಆದೇಶದಂತೆ ಭ್ರಷ್ಟಾಚಾರ ನಿಗ್ರಹ ದಳ, ಲೋಕಾಯುಕ್ತದೊಂದಿಗೆ ವಿಲೀನವಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಈ ಸಂಬಂಧ ಅಂತಿಮ ಅಧಿಸೂಚನೆ ಪ್ರಕಟಿಸಲಿದೆ.

**ಅಧಿವೇಶನದಲ್ಲಿ ಕಾಂಗ್ರೆಸ್–ಬಿಜೆಪಿ ಜಟಾಪಟಿ ಸಾಧ್ಯತೆ:** ಇನ್ನು ಸರ್ಕಾರ ವಿರುದ್ಧ ಗುತ್ತಿಗೆದಾರರ ಸಂಘ ಕಮಿಷನ್ ಆರೋಪ ಮಾಡಿದ ನಂತರ ವಿಧಾನಮಂಡಲ ಅಧಿವೇಶನ ಕರೆಯಬೇಕೆಂದು ವಿಪಕ್ಷ ಕಾಂಗ್ರೆಸ್ ತೀವ್ರ ಒತ್ತಾಯಿಸಿತ್ತು. ಇದರ ಬೆನ್ನಲ್ಲೇ ಹಿಜಾಬ್ ವಿವಾದ, ಕರಾವಳಿ ಸರಣಿ ಹತ್ಯೆ, ಸಿದ್ದರಾಮಯ್ಯ ಮೊಟ್ಟೆ ಎಸೆತ ಪ್ರಕರಣ ಸೇರಿದಂತೆ ಹಲವು ವಿಚಾರಗಳು ಚರ್ಚೆಗೆ ಬರುವ ಸಾಧ್ಯತೆ ಇದೆ. ಪ್ರಮುಖವಾಗಿ ಸರ್ಕಾರದ ಮೇಲಿನ ಕಮಿಷನ್ ಆರೋಪ, ಕರಾವಳಿ ಸೇರಿದಂತೆ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಧರ್ಮ ದಂಗಲ್, ಮಳೆ, ಪ್ರವಾಹ ವಿಪತ್ತು ಪರಿಹಾರ ಕುರಿತು ಚರ್ಚೆ, ಕೋಲಾಹಲ ನಡೆಯುವ ಸಾಧ್ಯತೆಯಿದೆ ಎನ್ನಲಾಗಿದೆ.

## ವೈಹೆಚ್‌ಎ ಅಂತಾರಾಷ್ಟ್ರೀಯ ಸಮ್ಮೇಳನಕ್ಕೆ ಮೈಸೂರಿನ ರವಿಕುಮಾರ್ ಆಯ್ಕೆ



ಮೈಸೂರು, ಆ.29(ಆರ್‌ಕೆಬಿ)– ಕತಾರ್‌ನಲ್ಲಿ ನಡೆಯಲಿರುವ 54ನೇ ಅಂತಾರಾಷ್ಟ್ರೀಯ ಯೂತ್ ಹಾಸ್ಟೆಲ್ಸ್ ಸಮ್ಮೇಳನಕ್ಕೆ ಮೈಸೂರು ಯೂತ್ ಹಾಸ್ಟೆಲ್ಸ್ ಅಧ್ಯಕ್ಷ ಎಚ್.ರವಿಕುಮಾರ್ ಆಯ್ಕೆಯಾಗಿದ್ದಾರೆ. ಸೆ.1ರಿಂದ 5ರವರೆಗೆ ಕತಾರ್‌ನ ಡೊಹಾ ನಗರದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ವಿಶ್ವದ ನಾನಾ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ರವಿಕುಮಾರ್ ಅವರು ಕರ್ನಾಟಕದಿಂದ ಮಾತ್ರವಲ್ಲದೆ, ದಕ್ಷಿಣ ಭಾರತದಿಂದ ಭಾಗವಹಿಸುತ್ತಿರುವ ಏಕೈಕ ಪ್ರತಿನಿಧಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಮೈಸೂರು ವೈಹೆಚ್‌ಎಐ ಘಟಕದ ಅಧ್ಯಕ್ಷರಾಗಿ, ರಾಜ್ಯ ಉಪಾಧ್ಯಕ್ಷರಾಗಿ ಹಾಗೂ ನ್ಯಾಷನಲ್ ಕೌನ್ಸಿಲ್ ಸದಸ್ಯರಾಗಿ ನವದೆಹಲಿಯಲ್ಲಿ ಸಲ್ಲಿಸುತ್ತಿರುವ ಸೇವೆಯನ್ನು ಪರಿಗಣಿಸಿ ಸಮ್ಮೇಳನಕ್ಕೆ ಆಯ್ಕೆ ಮಾಡಲಾಗಿದೆ. ಸಮ್ಮೇಳನದಲ್ಲಿ ಭಾರತದ ಸಾಹಸ ಕಲೆ ಹಾಗೂ ಸಂಸ್ಕೃತಿಗಳ ವಿನಿಮಯ ನಡೆಯಲಿದೆ.

# ಶಿಂಷಾ ಸಹಕಾರ ಬ್ಯಾಂಕ್‌ಗೆ 5.64 ಕೋಟಿ ವಂಚನೆ; ಸಿಇಓ ಸೇರಿ ನಾಲ್ವರ ವಿರುದ್ಧ ಕೇಸ್

ಮದ್ದೂರು, ಆ.29– ಇಲ್ಲಿನ ಶಿಂಷಾ ಸಹಕಾರ ಬ್ಯಾಂಕ್‌ಗೆ ಒಟ್ಟು 5.64 ಕೋಟಿ ರೂ. ವಂಚಿಸಿರುವ ಬಗ್ಗೆ ಬ್ಯಾಂಕ್‌ನ ಸಿಇಓ ಸೇರಿ ನಾಲ್ವರು ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ಬ್ಯಾಂಕ್ ಸಿಇಓ ಲಕ್ಷ್ಮೀನಾರಾಯಣಗೌಡ (55), ವ್ಯವಸ್ಥಾಪಕ ವಿ. ಉಮಾಶಂಕರ್ (55), ಕಿರಿಯ ಸಹಾಯಕ ಟಿ.ಗೋಪಿ ಮತ್ತು ಲೆಕ್ಕಿಗ ಬಿ.ಎನ್.ಕುಮಾರ್ (53) ಆರೋಪಕ್ಕೆ ಗುರಿಯಾದವರಾಗಿದ್ದು, ಇವರ ವಿರುದ್ಧ ಬ್ಯಾಂಕ್ ಅಧ್ಯಕ್ಷ ಎಂ.ಚಂದು (61) ಅವರು ಮದ್ದೂರು ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಬ್ಯಾಂಕ್ ಸಿಇಓ ಲಕ್ಷ್ಮೀನಾರಾಯಣಗೌಡ ಕಳೆದ 22 ವರ್ಷದಿಂದ ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದು, 14 ಜನರ ಬೇನಾಮಿ ಹೆಸರಿನಲ್ಲಿ 1,16,55,436 ರೂ. ಸಾಲ ಪಡೆದಿರುವುದು ಸೇರಿದಂತೆ ಒಟ್ಟು 1,98,88,334 ರೂ.ಗಳನ್ನು ವಂಚಿಸಿದ್ದಾರೆ. ಇವರು ಆಭರಣ ಹರಾಜು ಸೇರಿದಂತೆ ಹಲವಾರು ವಿಚಾರಗಳಲ್ಲಿ ಬ್ಯಾಂಕ್‌ಗೆ 1.98 ಕೋಟಿ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಕಳೆದ 22 ವರ್ಷದಿಂದ ಕೆಲಸ ಮಾಡುತ್ತಿರುವ ವ್ಯವಸ್ಥಾಪಕ ವಿ.ಉಮಾಶಂಕರ್ ತಮ್ಮ ಹಾಗೂ ತಮ್ಮ ಕುಟುಂಬದವರ ಹೆಸರಿನಲ್ಲಿ ಸ್ಥಿರಾಸ್ತಿಯನ್ನು ಆಧಾರವಾಗಿಟ್ಟು, ಒಟ್ಟು 26,63,484 ರೂ. ಸಾಲ ಪಡೆದಿದ್ದು, ಸಾಲ ಚುಕ್ತಾವಾಗಿದೆ ಎಂದು ನೋಂದಣಾಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿ, ಬ್ಯಾಂಕ್‌ಗೆ ಆಧಾರವಾಗಿಟ್ಟಿದ್ದ ಸ್ಥಿರಾಸ್ತಿ ಬಿಡುಗಡೆ ಮಾಡಿಕೊಂಡಿದ್ದಾರೆ. ಅಲ್ಲದೆ, ಗ್ರಾಹಕರಿಗೆ ಸಂಬಂಧಿಸಿದಂತೆ 2,84,91,834 ರೂ.ಗಳ ಸಾಲ ಬಾಕಿ ಇರುವಾಗಲೇ ಅದು ತೀರುವಳಿ ಆಗಿದೆ ಎಂದು ದಾಖಲೆ ಸೃಷ್ಟಿಸಿ ಹಣ ದುರುಪಯೋಗಪಡಿಸಿಕೊಂಡಿದ್ದಾರೆ. ಜೊತೆಗೆ ಇವರ ಪತ್ನಿ ಶ್ರೀಮತಿ ವಾಣಿ ಅವರ ಹೆಸರಿನಲ್ಲೂ ಸ್ಥಿರಾಸ್ತಿ ಸಾಲ ಬಾಕಿ 23,27,310 ರೂ. ಇದ್ದು, ಅದೂ ಕೂಡ ತೀರುವಳಿ ಆಗಿದೆ ಎಂದು ದಾಖಲೆ ಸೃಷ್ಟಿಸಿ ವಂಚಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಕಳೆದ 20 ವರ್ಷದಿಂದ ಕೆಲಸ ಮಾಡುತ್ತಿರುವ ಕಿರಿಯ ಸಹಾಯಕ ಟಿ.ಗೋಪಿ ಅವರು ಲಕ್ಷ್ಮೀನಾರಾಯಣ ಗೌಡ ಮತ್ತು ಉಮಾಶಂಕರ್ ಎಸಗಿರುವ ವಂಚನೆಗೆ ಕೈಜೋಡಿಸಿದ್ದು, ಬ್ಯಾಂಕ್‌ಗೆ 30,69,609 ರೂ. ಬಾಕಿದಾರರಾಗಿದ್ದಾರೆ. ಅಲ್ಲದೆ, ಕಳೆದ 20 ವರ್ಷದಿಂದ ಕೆಲಸ ಮಾಡುತ್ತಿರುವ ಲೆಕ್ಕಿಗ ಬಿ.ಎನ್.ಕುಮಾರ್ ಈ ಎಲ್ಲಾ ವಂಚನೆಗಳಿಗೆ ಸಂಪೂರ್ಣ ಸಹಕಾರ ನೀಡಿದ್ದು, ಈ ನಾಲ್ವರು ಸೇರಿ ಬ್ಯಾಂಕ್‌ಗೆ 5,64,40,574 ರೂ. ವಂಚಿಸಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಮದ್ದೂರು ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಹಬ್ಬದ ರಿಯಾಯಿತಿ ಮಾರಾಟ ವಿಸ್ತರಣೆ

ಮೈಸೂರು, ಆ.29– ಮೈಸೂರಿನ ಹೋಟೆಲ್ ಸದರನ್ ಸ್ಟಾರ್ (ಹೋಟೆಲ್ ರಿಗಾಲಿಸ್)ನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬ್ರಾಂಡೆಡ್ ರೆಡಿಮೇಡ್ ಬಟ್ಟೆಗಳ ಮೇಲೆ ಭಾರೀ ರಿಯಾಯಿತಿ ಮಾರಾಟವನ್ನು ಮತ್ತೆ ಮೂರು ದಿನಗಳ ಕಾಲ ವಿಸ್ತರಿಸಲಾಗಿದೆ. ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ಮಾರಾಟವಾಗುತ್ತದೆ. ಮಹಿಳೆಯರು, ಪುರುಷರು ಮತ್ತು ಮಕ್ಕಳ ಶರ್ಟ್, ಪ್ಯಾಂಟ್ಸ್, ಟೀ ಶರ್ಟ್, ಬ್ಲೇಜರ್, ಬರ್‌ಮೋಡಾ, ಕುರ್ತಾಸ್, ಟಾಪ್ಸ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಡ್ರೆಸಸ್, ಜಾಕೆಟ್ಸ್, ಪೈಜಾಮ್‌ಗಳ ಭಾರೀ ಮಾರಾಟವಿದೆ. ವಿವಿಧ ರೀತಿಯ ಪ್ಯಾಂಟಿ ಮತ್ತು ಬಾಗಳು ಲಭ್ಯವಿದೆ. ಬೆಡ್‌ಶೀಟ್ಸ್, ದಿವಾನ್‌ಸೆಟ್, ಸೋಫಾ ಸೆಟ್, ಸೋಫಾ ಕವರ್ಸ್ ಮತ್ತು ಟೇಬಲ್ ಕ್ಲಾತ್ಸ್ ಕೂಡ ರಿಯಾಯಿತಿ ದರಕ್ಕೆ ಲಭ್ಯವಿದೆ.



## ಮನೆಯಲ್ಲಿ ಮಲಗಿದ್ದ ಗೃಹಿಣಿ ಸರ ಕಿತ್ತುಕೊಂಡು ಪರಾರಿಯಾದ ಖದೀಮರು

ಬೆಳಕವಾಡಿ, ಆ.29– ಮನೆಯ ಹಿಂಬಾಗಿಲು ಮುರಿದು ಒಳನುಗ್ಗಿದ ಖದೀಮರು ಮಲಗಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಮಳವಳ್ಳಿ ತಾಲೂಕು ತೆಂಕಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಜಯಮ್ಮ (36) ಮಾಂಗಲ್ಯ ಸರ ಕಳೆದುಕೊಂಡವರು. ಆ.26ರಂದು ಅವರ ಮನೆಯಲ್ಲಿ ಮಖೆ ಹಬ್ಬ ಆಚರಿಸಲಾಗಿತ್ತು. ಈ ಹಬ್ಬಕ್ಕೆ ಸಂಬಂಧಿಕರು ಮನೆಗೆ ಆಗಮಿಸಿದ್ದು, ರಾತ್ರಿ ಜಯಮ್ಮ ಅವರು ತಮ್ಮ ಸಹೋದರಿ ಜೊತೆ ಮನೆಯ ಹಾಲ್‌ನಲ್ಲಿ ಮಲಗಿದ್ದಾರೆ. ಆ.27ರಂದು ಮುಂಜಾನೆ 1.20ರ ಸುಮಾರಿನಲ್ಲಿ ಇಬ್ಬರು ಖದೀಮರು ಅವರ ಮನೆಯ ಹಿಂಬಾಗಿಲನ್ನು ಮೀಟಿ ಒಳನುಗ್ಗಿ ಮಲಗಿದ್ದ ಜಯಮ್ಮ ಅವರ ಕತ್ತಿನಲ್ಲಿದ್ದ 45 ಗ್ರಾಂ ತೂಕದ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದಾರೆ. ಈ ಸಂದರ್ಭದಲ್ಲಿ ಜಯಮ್ಮ ಎಚ್ಚರಗೊಂಡು ಕೂಗಾಡಿದಾಗ ಖದೀಮರು ಓಡಿಹೋಗಿದ್ದಾರೆ. ಈ ಸಂಬಂಧ ಬೆಳಕವಾಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕ್ರೈಂ ಬಾಕ್ಸ್

## ಮನೆ ಬಾಗಿಲು ಮುರಿದು 4 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ವಿರಾಜಪೇಟೆ,ಆ.29–ಮನೆ ಬಾಗಿಲು ಮುರಿದು 4 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಬಗ್ಗೆ ವಿರಾಜಪೇಟೆ ತಾಲೂಕು ಅಮ್ಮತ್ತಿ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ಬೆಳೆಗಾರ ದೇವನಿರ ಎ. ಅಚ್ಚಯ್ಯ (72) ಅವರು ಆ.20ರಂದು ಮನೆ ಬೀಗ ಹಾಕಿಕೊಂಡು ಮೈಸೂರಿನ ಮಗಳ ಮನೆಗೆ ತೆರಳಿದ್ದು, ಆ.27ರಂದು ಮಧ್ಯಾಹ್ನ ಹಿಂದಿರುಗಿದಾಗ ಮನೆ ಬಾಗಿಲು ಮುರಿದಿರುವುದು ಕಂಡುಬಂದಿದೆ. ಖದೀಮರು ಮನೆಯ ಬೆಡ್‌ರೂಂನಲ್ಲಿದ್ದ ಗಾಡ್ರೇಜ್ ಬೀರುವನ್ನು ಮುರಿದು 4 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ವಿರಾಜಪೇಟೆ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ಅರ್ಧ ಬೆಲೆಗೆ ಚಿನ್ನದ ಕಾಯಿನ್ ನೀಡುವುದಾಗಿ ಹೇಳಿ, 3 ಲಕ್ಷ ವಂಚನೆ

ನಂಜನಗೂಡು,ಆ.29–ಅರ್ಧ ಬೆಲೆಗೆ ಚಿನ್ನದ ಕಾಯಿನ್ ನೀಡುವುದಾಗಿ ನಂಬಿಸಿ ತಮಿಳುನಾಡು ವ್ಯಕ್ತಿಗೆ ನಕಲಿ ಚಿನ್ನದ ಕಾಯಿನ್ ನೀಡಿ 3 ಲಕ್ಷ ರೂ. ವಂಚಿಸಿದ ಘಟನೆ ನಂಜನಗೂಡು ಪಟ್ಟಣದಲ್ಲಿ ನಡೆದಿದೆ. ತಮಿಳುನಾಡಿನ ತಿರುಪೂರು ಜಿಲ್ಲೆ ಅವಿನಾಶಿ ತಾಲೂಕಿನ ತುಲಕಮುತ್ತೂರು ಗ್ರಾಮದ ಸೆಂದಿಲ್ (39) ವಂಚನೆಗೊಳಗಾದವನಾಗಿದ್ದು, ಇವರ ಮೊಬೈಲ್‌ಗೆ ಆ.11ರಂದು 8147672093ನಿಂದ ಕರೆ ಮಾಡಿದ ವ್ಯಕ್ತಿ ತಮ್ಮ ಪಕ್ಕದ ಮನೆಯಲ್ಲಿರುವ ಅಜ್ಜನ ಬಳಿ ಚಿನ್ನದ ಕಾಯಿನ್‌ಗಳಿವೆ. ಅದನ್ನು ಅರ್ಧ ಬೆಲೆಗೆ ಮಾರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದ ಮೇರೆಗೆ ಸೆಂದಿಲ್ ಆ.14ರಂದು ನಂಜನಗೂಡಿನ ತಾಲೂಕು ಕಚೇರಿ ಬಳಿ ಬಂದಾಗ ಅಪರಿಚಿತ ವ್ಯಕ್ತಿ ಅವರಿಗೆ ಒಂದು ಕಾಯಿನ್ ನೀಡಿ, ಅದರ ಅಸಲಿಯತ್ತನ್ನು ಪರೀಕ್ಷಿಸಿಕೊಳ್ಳುವಂತೆ ತಿಳಿಸಿದ್ದಾನೆ.

ಸೆಂದಿಲ್ ಅವರು ಆ.15ರಂದು ತಮ್ಮ ಊರಿನ ಜ್ಯುವೆಲರಿ ಶಾಪ್‌ನಲ್ಲಿ ಪರೀಕ್ಷಿಸಿ ಅದು ಅಸಲಿ ಚಿನ್ನ ಎಂಬುದನ್ನು ಖಚಿತಪಡಿಸಿಕೊಂಡಿದ್ದಾರೆ. ಅಪರಿಚಿತ ವ್ಯಕ್ತಿ ಮತ್ತೆ ಕರೆ ಮಾಡಿದ ಮೇರೆಗೆ ಆ.18ರಂದು ಸಂಜೆ ನಂಜನಗೂಡಿನ ದತ್ತಾತ್ರೇಯ ಸೇವಾ ಸಮಿತಿ ಬಳಿ ಬಂದಾಗ ಅವರಿಂದ 3 ಲಕ್ಷ ರೂ. ಪಡೆದ ವ್ಯಕ್ತಿ ಒಂದು ಕೈ ಚೀಲವನ್ನು ನೀಡಿ, ಇದರಲ್ಲಿ 250 ಗ್ರಾಂನಷ್ಟು ಚಿನ್ನದ ಕಾಯಿನ್‌ಗಳಿವೆ ಎಂದು ತಿಳಿಸಿ ತೆರಳಿದ್ದಾನೆ. ನಂತರ ಅದನ್ನು ಪರೀಕ್ಷಿಸಿದಾಗ ನಕಲಿ ಚಿನ್ನ ಎಂಬುದು ಗೊತ್ತಾಗಿದೆ. ಮತ್ತೆ ಸೆಂದಿಲ್ ಅಪರಿಚಿತ ವ್ಯಕ್ತಿಯ ಮೊಬೈಲ್‌ಗೆ ಕರೆ ಮಾಡಿದಾಗ ಅದು ಸ್ವಿಚ್‌ಆಫ್ ಆಗಿದೆ. ಈ ಸಂಬಂಧ ನಂಜನಗೂಡು ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನಕ್ಕರೆ ಅದೇ ಸ್ವರ್ಗ

ತಂದೆ : "ಏ ಪುಟ್ಟಿ, ಈಗ ಗಂಟೆ ಎಷ್ಟಾಯ್ತು?"
ಪುಟ್ಟಿ : "ನಂಗೆ ಗೊತ್ತಿಲ್ಲಪ್ಪ"
ತಂದೆ : "ಮನೆಗೆ ಹೋಗಿ ಚಿಕ್ಕ ಮುಳ್ಳು, ದೊಡ್ಡ ಮುಳ್ಳು ಎಲ್ಲಿದೇಂತ ನೋಡ್ಕೊಂಡು ಬಾ"
ಪುಟ್ಟಿ : (ಒಳಗೆ ಹೋಗಿ ನಂತರ ಬಂದು) "ಎರಡೂ ಮುಳ್ಳು ಗಡಿಯಾರದಲ್ಲೇ ಇದೆಯಪ್ಪಾ

ಮೈಸೂರು ಮಿತ್ರ
ಮಂಗಳವಾರ, 30 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ *M.A.*

## ಅಮೃತವಾಹಿನಿ

ಸವಾಲುಗಳು ಎದುರಾದಾಗಲೇ ನೀವೇ ಕಂಡಿರದ ಯೋಗ್ಯತೆ ನಿಮ್ಮಲ್ಲಿರುವುದನ್ನು ತಿಳಿಯುವಿರಿ. – ಡೋರಾ ಅಲ್ಬರ್ಟ್

## ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಧಾನ್ಯ ಹೆಚ್ಚಿದವನಿಗೆ ಮಾನ್ಯವೂ ಹೆಚ್ಚು

## ನಿಮ್ಮ ಪತ್ರಗಳು

### ಈ ಬಾರಿ ಪರಿಸರಸ್ನೇಹಿ ಗಣಪ ಇರಲಿ!

ಮಾನ್ಯರೆ,

ಈಗ ಗೌರಿ ಗಣೇಶ ಹಬ್ಬ ಬಂದಿದೆ. ಈ ಸುಸಂದರ್ಭದಲ್ಲಿ ಪ್ರತಿ ಮನೆಯಲ್ಲದೆ ಗ್ರಾಮ, ನಗರ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶಮೂರ್ತಿ ಕೂರಿಸಿ ಸಂಭ್ರಮಿಸುವ ಭಕ್ತಸಮೂಹ ದೊಡ್ಡದಿದೆ. ಇತ್ತೀಚೆಗೆ ಜನರು ಭಕ್ತಿಭಾವದ ಜೊತೆಗೆ ಆಡಂಬರದ ಪೂಜೆಯನ್ನು ಮಾಡುತ್ತಿದ್ದಾರೆ. ಬಹುದೊಡ್ಡ ಗಾತ್ರದ ಮತ್ತು ರಾಸಾಯನಿಕ ಬಣ್ಣಯುಕ್ತ ಹೊಳೆಯುವ ಗಣೇಶನನ್ನು ಕೂರಿಸುತ್ತಾರೆ. ಈ ವೇಳೆ ಭಾರೀ ಧ್ವನಿವರ್ಧಕಗಳನ್ನು ಬಳಸಿ, ಶಬ್ದಮಾಲಿನ್ಯ, ವಾಯುಮಾಲಿನ್ಯ ಉಂಟಾಗುವಷ್ಟು ಪಟಾಕಿ ಸಿಡಿಸುವುದು ತಪ್ಪಬೇಕಿದೆ. ಇದರಿಂದ ವೃದ್ಧರಿಗೆ, ಪುಟಾಣಿಗಳಿಗೆ, ವಿವಿಧ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಅಪಾಯಕಾರಿ ಎಂಬುದನ್ನು ಅರಿಯಬೇಕು.

ಇನ್ನು ಮಣ್ಣು ಮತ್ತು ಪರಿಸರ ಸ್ನೇಹಿ ಬಣ್ಣಗಳಿಂದ ಮಾಡಿದ ಮೂರ್ತಿಯ ಹೊರತಾಗಿ ಪ್ಲಾಸ್ಟರ್ ಆಫ್ ಪ್ಯಾರಿಸ್, ಥರ್ಮಕೋಲ್, ರಾಸಾಯನಿಕ ಬಣ್ಣ ಬಳಿದ ಮೂರ್ತಿ ಗಳು, ಅಂಟು ವಸ್ತುಗಳಿಂದ, ಪ್ಲಾಸ್ಟಿಕ್‌ನಿಂದ ಮಾಡಿದ ಮೂರ್ತಿಗಳೆಲ್ಲವೂ ತೀವ್ರ ಹಾನಿಕರ ಮತ್ತು ವಿಷಕಾರಿ. ಕಾರಣ ಇವುಗಳು ನೀರಲ್ಲಿ ಕರಗುವುದಿಲ್ಲ. ಸಂಯೋಜಿತ ಬಣ್ಣಗಳಲ್ಲಿ ಅಪಾಯಕಾರಿ ಲೋಹಗಳಾದ ಸತು, ಕ್ರೋಮಿಯಂ, ಸೀಸ, ನಿಕ್ಕಲ್, ಕ್ಯಾಡ್ಮಿಯಂ ಸತು ಇತ್ಯಾದಿಗಳಿರುತ್ತವೆ. ಇವುಗಳು ಮನುಷ್ಯರು, ಪ್ರಾಣಿ ಸಸ್ಯಗಳಿಗೆ ತೀವ್ರ ಹಾನಿಕರ. ಇನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಲ್ಲಿ ಕ್ಯಾನ್ಸರ್ ಕಾರಕ ಅಸ್‌ಬೆಸ್ಟಾಸ್ ಇರುತ್ತದೆ. ಇದಕ್ಕೆ ಬಳಿಯುವ ಆಯಿಲ್ ಪೇಂಟ್‌ಗಳಲ್ಲೂ ರಾಸಾಯನಿಕ ಗಳಿದ್ದು, ಗಣಪತಿ ವಿಸರ್ಜನೆ ಮಾಡಿದ ಕೆರೆ, ನದಿ ನೀರನ್ನು ಬಳಸುವುದರಿಂದ ಆರೋಗ್ಯದ ಮೇಲೆ ಅಲ್ಪಾವಧಿ ಮತ್ತು ದೀರ್ಘಾವಧಿ ಪರಿಣಾಮ ಬೀರಬಹುದು! ಆದಕಾರಣ ನಮ್ಮನ್ನು ಸಲಹುತ್ತಿರುವ ಪರಿಸರಕ್ಕೆ ಕ್ಷೋಭೆಯಾಗದಂತೆ ಗಣೇಶನ ಮೂರ್ತಿಯನ್ನು ಸಿದ್ಧಪಡಿಸಿ ಪೂಜಿಸುವುದು ನಮ್ಮ ಕೆಲಸವಾಗಬೇಕಿದೆ.

ನಾವೆಲ್ಲರೂ ಪರಿಸರ ಕಾಪಾಡಿದರೆ ಪರಿಸರ ನಮ್ಮನ್ನು ಅಷ್ಟೇ ಚೆನ್ನಾಗಿ ಕಾಪಾಡಿಕೊಳ್ಳುತ್ತೆ ಎನ್ನುವುದನ್ನು ನೆನಪಿನಲ್ಲಿ ಇಡೋಣ. ಈ ಬಾರಿಯ ಗಣೇಶನ ಹಬ್ಬದಲ್ಲಿ ಎಲ್ಲರೂ ಪರಿಸರ ಸ್ನೇಹಿ ಗಣಪನ ಮೊರೆ ಹೋಗುವ ಮೂಲಕ ಪರಿಸರ ಸ್ನೇಹಿಯಾಗಿ ಸಂಭ್ರಮಿಸೋಣ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

### ನಾವಿಕನಿಲ್ಲದ ದೋಣಿಯಂತಾಗಿರುವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್

ಮಾನ್ಯರೆ,

ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಹಿರಿಯ ನಾಯಕ, ಮಾಜಿ ಕೇಂದ್ರ ಸಚಿವ ಗುಲಾಂ ನಬಿ ಆಜಾದ್ ಪಕ್ಷದ ಎಲ್ಲಾ ಸ್ಥಾನಮಾನಗಳಿಗೆ ರಾಜೀನಾಮೆ ನೀಡುವ ಮೂಲಕ ಮುಳುಗುತ್ತಿರುವ ಹಡಗಿನಂತಿರುವ ಕಾಂಗ್ರೆಸ್ ಪಕ್ಷಕ್ಕೆ ಮತ್ತೊಂದು ಆಘಾತ ನೀಡಿದ್ದಾರೆ. ನಿಜ, ಯಾವುದೇ ಒಂದು ನಿರ್ದಿಷ್ಟ ವ್ಯಕ್ತಿಯಿಂದ ಪಕ್ಷದ ಅಳಿವು ಉಳಿವನ್ನು ನಿರ್ಧರಿಸಲಾಗದು. ಆದರೆ, ಸರಿ ಸುಮಾರು 5 ದಶಕಗಳ ಕಾಲದಿಂದಲೂ ಪಕ್ಷದ ನಿಷ್ಠಾವಂತ ನಾಯಕನಾಗಿದ್ದು, ಕೇಂದ್ರ ಸಚಿವ ಸ್ಥಾನ ಸೇರಿದಂತೆ ಹತ್ತು ಹಲವು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದ ಗುಲಾಂ ನಬಿ ಆಜಾದ್ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಪ್ರಬಲ ನಾಯಕ ಎಂಬುದನ್ನು ತಳ್ಳಿಹಾಕಲಾಗದು. ಇತ್ತೀಚಿನ ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದ ಒಬ್ಬೊಬ್ಬ ನಾಯಕರು, ಪಕ್ಷದ ನಾಯಕತ್ವವನ್ನು ವಿರೋಧಿಸಿ ಆ ಪಕ್ಷಕ್ಕೆ ರಾಜೀನಾಮೆ ನೀಡಿ ಹೊರಬರುತ್ತಿದ್ದಾರೆ.

ಇತ್ತೀಚೆಗಷ್ಟೇ, ಮತ್ತೋರ್ವ ಹಿರಿಯ ನಾಯಕ ಹಾಗೂ ಮಾಜಿ ಕೇಂದ್ರ ಸಚಿವ ಕಪಿಲ್ ಸಿಬಲ್ ಕಾಂಗ್ರೆಸ್ ತೊರೆದು ಬೇರೊಂದು ಪಕ್ಷ ಸೇರಿದ್ದಾರೆ. 137 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ಹಾಗೂ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂಚೂಣಿಯಲ್ಲಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಇಂದು ನಾವಿಕನಿಲ್ಲದ ದೋಣಿಯಂತಾಗಿದೆ ಪಕ್ಷದ ಅಧ್ಯಕ್ಷೆ ಶ್ರೀಮತಿ ಸೋನಿಯಾ ಗಾಂಧಿಯವರನ್ನು ನಿರಂತರವಾಗಿ ಅನಾರೋಗ್ಯ ಕಾಡುತ್ತಿದೆ. ಅತ್ತ ರಾಹುಲ್ ಗಾಂಧಿ ಸಹ ಪಕ್ಷದ ಅಧ್ಯಕ್ಷ ಸ್ಥಾನವನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ ಎಂಬ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದೆ.

ಕೆಲವು ಮೂಲಗಳ ಪ್ರಕಾರ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಇಂದಿರಾ ಗಾಂಧಿ ಕುಟುಂಬಕ್ಕೆ ಸೇರದ ವ್ಯಕ್ತಿಯನ್ನು ಆಯ್ಕೆ ಮಾಡಲು ತೆರೆಯ ಹಿಂದೆ ಕಸರತ್ತು ನಡೆಯುತ್ತಿದೆ ಎಂಬ ವರದಿ ನಿಜವೋ ಸುಳ್ಳೋ ಗೊತ್ತಿಲ್ಲ. ದೇಶದ ಎಲ್ಲಾ ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಮಾತ್ರ ಆ ಪಕ್ಷಕ್ಕೆ ಸ್ವಲ್ಪ ಭದ್ರ ನೆಲೆ ಇದೆ. ಮುಂದಿನ ವರ್ಷ ಇಲ್ಲಿನ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಯ ಕಾವು ಈಗಾಗಲೇ ಹೊತ್ತಿ ಉರಿಯುತ್ತಿದೆ. ಚುನಾವಣೆ ಸಮೀಪವಾಗುತ್ತಿದ್ದಂತೆಯೇ ಪಕ್ಷಾಂತರ ಪರ್ವ ಮತ್ತೆ ಶುರುವಾಗಲಿದೆ. ಒಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಯಾವ ರಾಜಕೀಯ ಚಕ್ರವ್ಯೂಹ ರಚಿಸುತ್ತದೆ. ದ್ರೋಣಾಚಾರ್ಯರು ಯಾರು ಮುಂತಾದ ವಿಚಾರಗಳು ಕುತೂಹಲಕಾರಿಯಾಗಿದೆ.

–ಡಾ.ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

### ಕಸದಿಂದ ತುಂಬಿರುವ ರಸ್ತೆ

ಮಾನ್ಯರೆ,

ಪಾಂಡವಪುರ ತಾಲೂಕಿನ ವಿದ್ಯಾರ್ಥಿ ನಿಲಯದ ರಸ್ತೆಯ ಸುತ್ತ ಮುತ್ತ ಕಸ ರಾಶಿ ರಾಶಿ ಬಿದ್ದಿದ್ದು, ಇಲ್ಲಿಯ ವಾತಾವರಣ ದುರ್ವಾಸನೆಯಿಂದ ಕೂಡಿದೆ. ಇಲ್ಲಿ ಸುತ್ತಮುತ್ತ ವಿದ್ಯಾರ್ಥಿನಿಲಯ ಇರುವುದರಿಂದ ಇಲ್ಲಿ ತಂಗಿರುವ ವಿದ್ಯಾರ್ಥಿಗಳು ಸೊಳ್ಳೆಗಳು, ನಾಯಿಗಳ ಕಾಟದಿಂದ ಆತಂಕಗೊಂಡಿದ್ದಾರೆ. ಸ್ಥಳೀಯ ಸಂಸ್ಥೆಗಳ ಆಡಳಿತಾಧಿಕಾರಿಗಳು ಕಸವಿಲೇವಾರಿ ಮಾಡಿಸಿ ಇಲ್ಲಿ ಸ್ವಚ್ಛತೆ ಕಾಪಾಡಬೇಕೆಂದು ಮನವಿ.

– ಸಂಗೀತ. ಡಿ, ಮಹಾರಾಣಿ ಕಲಾ ಕಾಲೇಜು, ಮೈಸೂರು.

### ಗಣೇಶಮೂರ್ತಿ ತಯಾರಕ ಕಲಾವಿದರನ್ನು ಗೌರವಿಸಿ

ಮಾನ್ಯರೆ,

ಗಣೇಶನ ಹಬ್ಬ ಬಂದರೆ ಸಾಕು, ವಯಸ್ಸಿನ ಅಂತರವಿಲ್ಲದೆ ಪ್ರತಿಯೊಬ್ಬರೂ ಹಲವಾರು ಬಡಾವಣೆಯಲ್ಲಿ ಗಣೇಶ ಮೂರ್ತಿಯನ್ನು ಪ್ರತ್ಯೇಕವಾಗಿ ಕೂರಿಸಿ, ಸಂಭ್ರಮಿಸುತ್ತಾರೆ. ಕಲಾವಿದನ ಕೈ ಚಳಕದಲ್ಲಿ ಗಣೇಶನ ಮೂರ್ತಿಯು ಅತ್ಯದ್ಭುತವಾಗಿ ಅರಳುತ್ತದೆ. ಈ ಸಂದರ್ಭದಲ್ಲಿ ಅನೇಕ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿ ಅನೇಕ ಗಣ್ಯರಿಗೆ ಸನ್ಮಾನಿಸುತ್ತಾರೆ. ಆದರೆ ಗಣೇಶನನ್ನು ತಯಾರಿಸಿದ ಕಲಾವಿದರಿಗೂ ಗೌರವ ನೀಡಿ ಸನ್ಮಾನಿಸಿ. ಇದರಿಂದ ಅವರು ಪ್ರೇರಣೆಗೊಂಡು ವಿವಿಧ ಬಗೆಯ ಸಾಂಪ್ರದಾಯಿಕ ಭಕ್ತಿ ಪ್ರಧಾನ ಗಣೇಶನನ್ನು ರೂಪಿಸಲು ಸ್ಫೂರ್ತಿ ಬರುತ್ತದೆ. ಇದರಿಂದ ಆಸ್ತಿಕ ಮಹಾಶಯರಿಗೆ ಉತ್ತಮ ಗಣೇಶಮೂರ್ತಿಗಳು ಲಭ್ಯವಾಗುತ್ತವೆ. ಆದ್ದರಿಂದ ಇಂತಹ ಸೂಕ್ತ ಸಮಯದಲ್ಲಿ ಗಣೇಶ ಮೂರ್ತಿಯ ಕಲಾವಿದರನ್ನು ಗೌರವಿಸಬೇಕಾಗಿ ಮನವಿ.

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ಡಾ. ಗುಬ್ಬಿಗೂಡು ರಮೇಶ್
ಮೊ : 9742934512

ದೀಪ ಸಾಲು

# ಕಪ್ಪು ಹಣದ ಬಣ್ಣ ಬೆಳ್ಳಗಾಗುವ ಸಮಯ....?

ನಾವು ತಿನ್ನುವ ರಾಗಿ ಮುದ್ದೆ ಕಪ್ಪು, ಹಾಲು ಕೊಡುವ ಕಾಮಧೇನು ಕಪ್ಪು, ಘಮ್ಮೆನ್ನುವ ಕಸ್ತೂರಿ ಕಪ್ಪು, ಕಣ್ಣ ಕಾಡಿಗೆ ಕಪ್ಪು, ಕಣ್ಣಾಲಿಗಳು ಕಪ್ಪು, ತಲೆಕೂದಲು ಕಪ್ಪು, ಓಡಾಡುವ ರಸ್ತೆ ಕಪ್ಪು, ಹಾರಾಡುವ ಬಾನಾಡಿ ಕಪ್ಪು ಸರಿ! ಆದರೆ ಚಲಾವಣೆಯಲ್ಲಿರುವ ಹಣ ಯಾಕೆ ಕಪ್ಪು? ಕಪ್ಪು ಹಣ ಅಂದರೆ ಏನು? ಎಲ್ಲಿದೆ ಈ ಕಪ್ಪು ಹಣ? ಅದರ ಹೆಸರೇಕೆ 'Black money'?. 140 ಕೋಟಿ ಭಾರತೀಯರಲ್ಲಿ ತಾವೂ ಒಬ್ಬರಾಗಿ ಬೆಳೆದು ಜೀವನ ಕಟ್ಟಿಕೊಂಡು ಇಲ್ಲಿ ಉದ್ಯಮ ನಡೆಸಿ, ಇಲ್ಲಿ ರಾಜಕಾರಣ ಮಾಡಿ, ಇಲ್ಲಿ ವ್ಯಾಪಾರ ಮಾಡಿ ಸಂಪಾದಿಸಿದ ಸಾವಿರಾರು ಕೋಟಿಗೆ ತೆರಿಗೆ ಕಟ್ಟದೆ ಸರ್ಕಾರಕ್ಕೆ ವಂಚಿಸಿ, ರಾಮನ ಲೆಕ್ಕ, ಕೃಷ್ಣನ ಲೆಕ್ಕ ತೋರಿಸಿ ಸಂಪಾದಿಸಿದ ದುಡ್ಡೇ! ಬ್ಲಾಕ್‌ಮನಿ.

ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯ ಠೇವಣಿದಾರರ ಮಹತ್ವದ ಮಾಹಿತಿಯನ್ನೂ ಮೊದಲ ಬಾರಿಗೆ ಸ್ವಿಜರ್‌ಲ್ಯಾಂಡ್ ಭಾರತದ ಜತೆಗೆ ಈ ಹಿಂದೆ ಒಮ್ಮೆ ವಿನಿಮಯ ಮಾಡಿಕೊಂಡಿತ್ತು. ಸ್ವಿಜರ್ ಲ್ಯಾಂಡ್‌ನ ತೆರಿಗೆ ಇಲಾಖೆ ಜಗತ್ತಿನ 75 ದೇಶಗಳಿಗೆ ಸ್ವಿಸ್ ಬ್ಯಾಂಕ್ ಖಾತೆದಾರರ ಒಟ್ಟು 31ಲಕ್ಷ ಖಾತೆಗಳ ವಿವರಗಳನ್ನು ಹಂಚಿಕೊಳ್ಳಲು ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿತ್ತು. ಹಾಗೆ ನೋಡಿದರೆ ಸ್ವಿಜರ್ ಲ್ಯಾಂಡ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಪ್ರಖರವಾದ ವಿಸ್ತ್ರತ ವಲಯವನ್ನು ಹೊಂದಿಸಿಕೊಂಡಿದೆ. ಆದರೆ ಆ ದೇಶಕ್ಕೆ ಅದು ಅನಿವಾರ್ಯವೇನಲ್ಲ. ಸುಂದರ ನಿಸರ್ಗತಾಣಗಳನ್ನು ಹೊಂದಿರುವ ಅದರ ಪ್ರಧಾನ ಆರ್ಥಿಕತೆ ನಿಂತಿರುವುದು ಪ್ರವಾಸೋದ್ಯಮದ ಮೇಲೆ. ಆದರೆ ಪ್ರವಾಸೋದ್ಯಮಕ್ಕಿಂತ ಬ್ಯಾಂಕಿಂಗ್ ಸೆಕ್ಟರ್‌ನ ಪಾರಮ್ಯವೇ ಆ ದೇಶದ ಹೆಗ್ಗಳಿಕೆಯೆಂಬಂತೆ ಇಂದು ಆಗಿಹೋಗಿದೆ. ದುರದೃಷ್ಟವೆಂದರೆ ಬ್ಯಾಂಕಿಂಗ್ ಕ್ಷೇತ್ರದ ಸೇವೆ ಆ ದೇಶಕ್ಕೆ ಪ್ರಖ್ಯಾತಿ ತಂದುಕೊಡುವುದರ ಜೊತೆಗೆ ಒಂದು ರೀತಿಯಲ್ಲಿ ಕುಖ್ಯಾತಿಯನ್ನು ತಂದುಬಿಟ್ಟಿತ್ತು. ವಿಶ್ವದ ಶ್ರೀಮಂತರೆಲ್ಲಾ ತಮ್ಮ ತಮ್ಮ ದೇಶಗಳಲ್ಲಿ ದುಡಿದ ದುಡ್ಡಿಗೆ ತೆರಿಗೆ ವಂಚಿಸಿ ಸ್ವಿಸ್ ಬ್ಯಾಂಕಿನಲ್ಲಿ ಠೇವಣಿ ಇಟ್ಟು ಕಾಪಾಡಿಕೊಳ್ಳುತ್ತಾರೆ. ಹಾಗೆ ಠೇವಣಿ ಇಟ್ಟ ಠೇವಣಿದಾರರ ಖಾತೆ ಮತ್ತಿತರ ವಿವರಗಳನ್ನು ಅಲ್ಲಿನ ಬ್ಯಾಂಕುಗಳು ಗೌಪ್ಯವಾಗಿಡುತ್ತಿದ್ದವು. ಶ್ರೀಮಂತ ಗ್ರಾಹಕರು ಸ್ವಿಸ್ ಬ್ಯಾಂಕಿನ ಮುಂದೆ ಈ ಕಾರಣಕ್ಕಾಗಿಯೇ ಸರತಿಯ ಸಾಲಿನಲ್ಲಿ ನಿಂತಿರುತ್ತಿದ್ದರು. ಆದುದರಿಂದಲೇ ಸ್ವಿಜರ್‌ಲ್ಯಾಂಡ್ 'ತೆರಿಗೆ ಕಳ್ಳರ ಸ್ವರ್ಗ' ಎಂಬ ಹಣೆಪಟ್ಟಿ ಹಚ್ಚಿಕೊಳ್ಳಬೇಕಾಯ್ತು. ಅದೇನೋ ಕನ್ನಡದಲ್ಲೊಂದು ಗಾದೆ ಇದೆ "ಉಣ್ಣಲಿಲ್ಲ ತಿನ್ನಲಿಲ್ಲ ಮಾರಿಗುಡಿ ದೆವ್ವ ಅಟ್ಟಾಡಿಸಿಕೊಂಡು .....ಅದೊಂದು ಪದ ಹಾಕಿಲ್ಲ ನೀವೇ ಬಿಟ್ಟ ಪದವನ್ನು ತುಂಬಿಸಿಕೊಳ್ಳಿ, ಹಾಗಾಯ್ತು ಆ ದೇಶದ ಕತೆ. ಕಡೆಗೂ ಸ್ವಿಜರ್‌ಲ್ಯಾಂಡ್ ಸರ್ಕಾರ automatic information exchange fact ಅಡಿಯಲ್ಲಿ ಒಪ್ಪಂದ ಮಾಡಿಕೊಂಡು ಭಾರತ ಸೇರಿದಂತೆ 75 ದೇಶಗಳಿಗೆ ಆಯಾಯ ದೇಶಗಳ ಠೇವಣಿದಾರರ ವಿವರಗಳನ್ನು ಶೇರ್ ಮಾಡಲು ಒಪ್ಪಿತ್ತು. ಅಲ್ಲಿಗೆ ತೆರಿಗೆ ವಂಚಿಸಿದ ಠೇವಣಿದಾರರ ಮೇಲೆ ಆಯಾಯ ದೇಶಗಳ ಆರ್ಥಿಕ ಸಂಸ್ಥೆಗಳು ಕ್ರಮ ಜರುಗಿಸಬಹುದು.ಹಾಗಂತ ಸ್ವಿಸ್ ಬ್ಯಾಂಕ್‌ನಲ್ಲಿರುವ ಎಲ್ಲಾ ಠೇವಣಿಗಳು ತೆರಿಗೆ ವಂಚಿಸಿದ ಖಾತೆಗಳು ಎಂತಲೇ ಅರ್ಥವಲ್ಲ. ಆದರೂ ಹಾಗೆ ತೆರಿಗೆ ವಂಚಿಸಿದ ಸಾವಿರಾರು ಖಾತೆಗಳು ಸಿಗಬಹುದು. ಹಾಗೆ ಸಿಕ್ಕ ಠೇವಣಿದಾರರಿಂದ ವಸೂಲಿಮಾಡಿದ ಹಣ ಭಾರತದ ಆರ್ಥಿಕಾಭಿವೃದ್ಧಿಯನ್ನು ಹೆಚ್ಚಿಸಬಹುದು. 2014ರಿಂದ ಇವತ್ತಿನವರೆಗೂ ರಾಜಕಾರಣದ ಅಂಗಳದಲ್ಲಿ ಆಟದ ಚೆಂಡಿನಂತೆ ಈ ಬ್ಲಾಕ್ ಮನಿ ಪುಟಿಯುತ್ತದೆ. ಇಷ್ಟು ವರ್ಷ ಸ್ವಿಜರ್‌ಲ್ಯಾಂಡ್‌ನ ಬ್ಯಾಂಕುಗಳಲ್ಲಿ ಹಣ ಇಟ್ಟರೆ ಅದು ಗೌಪ್ಯವಾಗಿರುತ್ತದೆ ಎಂಬ ಮಾತು ನಂತರದ ದಿನಗಳಲ್ಲಿ ಸುಳ್ಳಾಯಿತು. ಜಾರಿ ನಿರ್ದೇಶನಾಲಯ ತೆಗೆದುಕೊಳ್ಳುವ ಅಗತ್ಯ ಕ್ರಮಗಳ ಮೇಲೆ ಕಪ್ಪು ಹಣದ ಬಣ್ಣ ಬೆಳ್ಳಗಾಗುವ ಸಮಯ ಯಾವಾಗ ಎಂಬ ತವಕ ವಿಶ್ವದ ಎಲ್ಲಾ ನಾಗರಿಕರಲ್ಲಿ ಮನೆಮಾಡಿತ್ತು.

ಈ ದೇಶದ ನೆಲ, ಜನದ ಬಗ್ಗೆ ಕನಿಷ್ಠ ಪ್ರೀತಿಯ ಅಪ್ರೋಚೆ ಇಲ್ಲದ ಈ ಶ್ರೀಮಂತ ಜನ ತಮ್ಮ ಸಾರ್ವಜನಿಕ ಜೀವನದಲ್ಲಿ ಇಷ್ಟು ದಿನ ಮಾಡಿದ್ದೇನು? ನಮ್ಮಲ್ಲಿ 'ಹುಲಿ ಬಂತು ಹುಲಿ' ಕತೆಯ ಹಾಗೆ ಈ ಕಪ್ಪು ಹಣದ ಕಥೆ. ಏಕೆಂದರೆ ಸುಮಾರು ದಶಕಗಳಿಂದಲೂ ಕಪ್ಪು ಹಣದ ಹಣವಂತರ ಬಗ್ಗೆ ಜನ ಕೇವಲ ಮಾತಾಡಿಕೊಳ್ಳುತ್ತಿದ್ದರು. 2014ರ ಲೋಕಸಭಾ ಚುನಾವಣೆಯ ಸಮಯದಲ್ಲಿ ಈ ಕಪ್ಪುಹಣವನ್ನು ವಾಪಸ್ಸು ತರುತ್ತೇವೆಂಬ ಭರವಸೆ ಕೊಟ್ಟಿದ್ದ ಕೇಂದ್ರ ಸರ್ಕಾರ ಮೊದಲಿಗೆ ಮೂವರ ಹೆಸರನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು.

ಡಾಬರ್ ಗ್ರೂಪ್ ಆಫ್ ಕಂಪನಿಯ ಪ್ರದೀಪ್ ಬರ್ಮನ್ ದೇಶದ ಜನರ ತಲೆಗೆ ಎಣ್ಣೆ ಸವರಿ ದುಡಿದ ದುಡ್ಡಿಗೆ ತೆರಿಗೆ ಕಟ್ಟದೆ ಸಾವಿರಾರು ಕೋಟಿ ಸಂಪಾದಿಸಿದ್ದರು. ಭೂತಾಯಿಯ ಬಸಿರ ಬಗೆದು ಗಣಿಯ ದಾಹ ತೀರಿಸಿಕೊಂಡ ಗೋವಾ ಮೂಲದ ಗಣಿ ಉದ್ಯಮಿ ರಾಧಾ ಎಸ್ ತಿಂಬ್ಲೊ, ರಾಜ್‌ಕೋಟ್ ಮೂಲದ ಆಭರಣ ವ್ಯಾಪಾರಿ ಪಂಕಜ್ ಚೆಮನ್ ಲಾಲ್ ಲೋಧ್ಯ ಹೆಸರು ಬಹಿರಂಗಗೊಂಡಿತ್ತು. ಭಾರತದಲ್ಲಿ ಚಿನ್ನದ ವ್ಯಾಪಾರ ಮಾಡಿ ಸಾವಿರಾರು ಕೋಟಿ ಕೋಟಿ ಸಂಗ್ರಹಿಸುತ್ತಿದ್ದ ಲೋಧ್ಯರಂಥವರ ಜೊತೆಗೆ ಮತ್ತಷ್ಟು ಜನ ಸೇರಿಕೊಳ್ಳುವ ದಿನ ಆಗ ದೂರವಿರಲಿಲ್ಲ. ನಿಮಗೆ ಗೊತ್ತಾ? ಚಿನ್ನ ಪ್ರಾಕೃತಿಕ ಸಂಪತ್ತು, ಭೂಮಿಯಲ್ಲಿ ಸಿಗುವಂಥದ್ದು. ನಮಗೆ ಗೊತ್ತಿರುವ ಹಾಗೆ ಹಟ್ಟಿ ಚಿನ್ನದ ಗಣಿ, ಕೆ.ಜಿ.ಎಫ್–ಚಿನ್ನದ ಗಣಿ ಹಾಗೂ ಇನ್ನೊಂದೆರಡು ಸಣ್ಣ ಸಣ್ಣ ಜಾಗಗಳಲ್ಲಿ ಚಿನ್ನ ದೊರೆಯುತ್ತದೆಂಬ ಮಾಹಿತಿ ಬಿಟ್ಟರೆ ಬೇರೆಲ್ಲೂ ಚಿನ್ನ ಸಿಗುತ್ತಿರಲಿಲ್ಲ.

ಕೆ.ಜಿ.ಎಫ್–ಚಿನ್ನದ ಗಣಿಯಲ್ಲಿ ಭೂಮಿ ತೋಡಿ ತೋಡಿ ಆಳಕ್ಕೆ ಹೋದರೂ ಯಥೇಚ್ಛವಾಗಿಯೇನೂ ಚಿನ್ನ ಸಿಗುತ್ತಿಲ್ಲ. ಆದರೆ ಇಡೀ ಇಂಡಿಯಾದ ಯಾವುದೇ ಚಿನ್ನದ ಅಂಗಡಿಗಳಿಗೆ ಹೋದರೂ ನೂರಾರು ಕೆ.ಜಿ.ಗಳಲ್ಲಿ ಚಿನ್ನದ ಆಭರಣಗಳು ಡಿಸ್‌ಪ್ಲೇ ಆಗಿರುತ್ತವೆ. ಅದಲ್ಲದೆ ದೊಡ್ಡ ದೊಡ್ಡ ಚಿನ್ನದ ವ್ಯಾಪಾರಿಗಳು ಸಾವಿರಾರು ಕೆ.ಜಿ. ಚಿನ್ನದ ಬಾರ್‌ಗಳನ್ನು ಸಣ್ಣ ಸಣ್ಣ ಚಿನ್ನದ ಕೆಲಸಗಾರರಿಗೆ ಕೊಟ್ಟು ಆಭರಣ ಮಾಡಿಸಿ ಮಾರಾಟ ಮಾಡುತ್ತಾರೆ. ಭೂಮಿಯಲ್ಲಿ ಈ ಪರಿಯ ಚಿನ್ನವೇ ಸಿಗುತ್ತಿಲ್ಲವಲ್ಲ. ಹಾಗಾದರೆ ಇಷ್ಟೊಂದು ಚಿನ್ನ ಎಲ್ಲಿಂದ ಬಂತು?

> **ಗಾತ್ರದಲ್ಲಿ ಚಿಕ್ಕ ಗುಬ್ಬಿ ಕೂಡ ತನ್ನ ಮರಿಗಳಿಗೆ ಆ ದಿನದ ಹಸಿವಿಗೆ ಗುಟುಕು ಕೊಟ್ಟು ರೆಕ್ಕೆ ಬಲಿತ ಮೇಲೆ ಹಾರಿ ಆಹಾರ ಹುಡುಕುವುದನ್ನು ಕಲಿಸುತ್ತದೆ. ಹುಲಿಯಂಥ ವನ್ಯಮೃಗ ಕೂಡ ಹೊಟ್ಟೆ ತುಂಬಿದ ಮೇಲೆ ತನ್ನ ಕಣ್ಣೆದುರೆ ಹರಿಣಗಳು ಓಡಾಡುತ್ತಿದ್ದರೂ ಬೇಟೆಯಾಡುವುದಿಲ್ಲ. ಮತ್ತೆ ಹಸಿವಾಗುವ ತನಕ ಅವಕ್ಕೆ ದುರಾಸೆ ಇಲ್ಲ, ದಾಹ ಇಲ್ಲ. ಆದರೆ ಅವುಗಳನ್ನೇ ಹಿಡಿದು ಪಳಗಿಸಬಲ್ಲ ಬುದ್ಧಿ ಇರುವ ಈ ಮನುಷ್ಯನಿಗೆ ಜೀವನದಲ್ಲಿ ಎಲ್ಲವೂ ಸಾಕಾಗುವುದು ಯಾವಾಗ? ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಲ್ಲರಿಗೂ ದಕ್ಕುವುದು ಯಾವಾಗ?**

ನಿಜಕ್ಕೂ ಇದು ಚಿನ್ನವೇನಾ? ಅಥವಾ...... ಗೊತ್ತಿಲ್ಲಾ..! ಏಕೆಂದರೆ ಹೊರದೇಶಗಳಿಂದಲೂ ಅಷ್ಟು ಪ್ರಮಾಣದಲ್ಲಿ ಚಿನ್ನ ತರಬೇಕೆಂದರೆ ಆ ಚಿನ್ನದಷ್ಟೇ ದುಬಾರಿ ಬೆಲೆಯ ತೆರಿಗೆ ಕಟ್ಟಬೇಕು. ಹಾಗಾದರೆ ಇದೇನಿದು? ಎನ್ನುವ ಪ್ರಶ್ನೆ ಕಾಡುತ್ತದೆ. ಈ ವಿಷಯದಲ್ಲಿ ಕುತೂಹಲಕ್ಕೆ ನನ್ನ ಪರಿಚಯದ ದೊಡ್ಡ ಚಿನ್ನದ ವ್ಯಾಪಾರಿಯೊಬ್ಬರನ್ನು ಕೇಳಿದೆ ಅದಕ್ಕವರು ಸುಮ್ಮನಿರಿ ಸಾರ್ ಅದೆಲ್ಲಾ ಟ್ರೇಡ್ ಸೀಕ್ರೇಟ್ ಅಂತ ಹೇಳಿ ನಕ್ಕು ಸುಮ್ಮನಾದರು. ಹೋಗಲಿ ಬಿಡಿ ಚಿನ್ನವೋ ಚಿನ್ನದ ಥರದ ಇನ್ನೇನೋ! ಒಟ್ಟಿನಲ್ಲಿ ನಮ್ಮ ಹೆಣ್ಣು ಮಕ್ಕಳು ಧರಿಸಿ ಖುಷಿಯಾಗಿರಲಿ. ಆದ್ದರಿಂದಲೇ ಹಳೇ ಚಿನ್ನಕ್ಕೆ ತುಂಬಾ ಬೆಲೆ ಬಂದಿರುವುದು. ಇರಲಿ ಇದನ್ನು ತುಂಬಾ ಪರೀಕ್ಷಿಸುವುದು ಬೇಡ. ಆದರೆ ಪಂಕಜ್ ಚೆಮನ್ ಲಾಲ್, ಲೋಧ್ಯಾ ಥರದವರು ಇದರಿಂದ ಸಾವಿರಾರು ಕೋಟಿ ಸಂಗ್ರಹಿಸಿ ಕಪ್ಪು ಹಣದ ಕಂಕಣ ಕಟ್ಟಿಕೊಂಡರಲ್ಲ. ಇನ್ನು ರಾಧಾ ಸತೀಶ್ ತಿಂಬ್ಲೋ ಗೋವಾದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿರುವುದಕ್ಕೆ 2012ರಲ್ಲಿ ಸುಪ್ರೀಂಕೋರ್ಟ್ ನೇಮಿಸಿ ಸಿದ್ಧಪಡಿಸಿದ್ದ ವರದಿಯಲ್ಲಿ ಉಲ್ಲೇಖವಿದೆ. ಇನ್ನು ಕಪ್ಪು ಹಣದ ವಿಚಾರದಲ್ಲಿ ಪಕ್ಷರಾಜಕಾರಣ ಕೂಡ ಕೆಲಸ ಮಾಡುತ್ತದೆ. ಏಕಾಏಕೀ ಕಪ್ಪುಹಣದ ಈ ಕಪ್ಪುಮುಖದವರ ಹೆಸರುಗಳನ್ನೂ ಒಂದೇ ಕಂತಿನಲ್ಲಿ ಕೇಂದ್ರ ಸರ್ಕಾರ ಕೂಡ ಪ್ರಕಟಿಸಲಿಲ್ಲ. ವಿದೇಶೀ ಬ್ಯಾಂಕುಗಳಲ್ಲಿ ಭಾರತೀಯರು ಹೊಂದಿರುವ ಬ್ಯಾಂಕ್ ಖಾತೆಯ ಕಪ್ಪು ಹಣದ ವಿವರಗಳನ್ನು ಸಾರ್ವಜನಿಕವಾಗಿ ಘೋಷಿಸಲು ಕಾನೂನಿನ ತೊಡಕಿದೆ ಎಂದು ಒಮ್ಮೆ ವಿತ್ತ ಸಚಿವರಾಗಿದ್ದ ಅರುಣ್‌ಜೇಟ್ಲಿ ಹೇಳಿದ್ದರು, ಹಾಗಾದರೆ ಆ ಕಾನೂನಿನ ತೊಡಕೇನು? ಅದು ಸಂವಿಧಾನದ 21ನೇ ವಿಧಿಯ ಮೂಲಭೂತ ಹಕ್ಕುಗಳಲ್ಲೊಂದಾದ ಖಾಸಗೀತನದ ಹಕ್ಕಿನ ಉಲ್ಲಂಘನೆ. ಇದೊಂದೇ ಅಲ್ಲ, ವಿಷಯ ಬೇರೇನೇ ಇದೆ. ತೆರಿಗೆ ವಂಚನೆ ಮತ್ತು ವಿದೇಶಿ ಠೇವಣಿಗಳಿಗೆ ಸಂಬಂಧಿಸಿದಂತೆ 1995ರಲ್ಲಿ ಡಬಲ್ ಟ್ಯಾಕ್ಸ್ ಅವೈಡೆನ್ಸ್(D.T.A.A) ಒಪ್ಪಂದಕ್ಕೆ ಭಾರತ ಜರ್ಮನಿಯಲ್ಲಿ ಸಹಿ ಹಾಕಿತ್ತು.

ಕಪ್ಪುಹಣ ಕುರಿತಂತೆ ಯು.ಪಿ.ಎ ಸರ್ಕಾರ ಸ್ವಿಸ್ ಬ್ಯಾಂಕಿಗೆ ಪ್ರಸ್ತಾವನೆ ಸಲ್ಲಿಸಿ ಸ್ವಿಸ್ ಬ್ಯಾಂಕಿನಲ್ಲಿರುವ ಭಾರತೀಯರ ಸರಿಸುಮಾರು 700 ಕ್ಕೂ ಹೆಚ್ಚು ಠೇವಣಿಗಳ ಮಾಹಿತಿ ಕೋರಿತ್ತು. ಆದರೆ ಸ್ವಿಸ್ ಬ್ಯಾಂಕುಗಳು ಈ ಪ್ರಸ್ತಾವನೆಯನ್ನೇ ತಿರಸ್ಕರಿಸಿದ್ದವು. ಎನ್.ಡಿ.ಎ. ಅಧಿಕಾರಕ್ಕೆ ಬಂದ ಮೇಲೆ (ಎಸ್.ಐ.ಟಿ.) ವಿಶೇಷ ತನಿಖಾ ತಂಡ ರಚಿಸುವ ಮೂಲಕ ಭಾರೀ ನಿರೀಕ್ಷೆ ಮೂಡಿಸಿತ್ತು. ಕೇಂದ್ರ ಸರ್ಕಾರದ 10 ಇಲಾಖೆಗಳ ಮುಖ್ಯಸ್ಥರು ಈ ತಂಡದಲ್ಲಿದ್ದರು. ಇದು ರಚನೆಯಾಗಿ 5 ತಿಂಗಳು ಕಳೆದರೂ ನಿರೀಕ್ಷಿತ ಪ್ರಗತಿ ಕಂಡಿರಲಿಲ್ಲ. ಆಗ ಕೇಂದ್ರದ ತೆರಿಗೆ, ಹಣಕಾಸು, ಗುಪ್ತಚರ ಮತ್ತಿತರ ಇಲಾಖೆಗಳ ವಿವಿಧ ಮೂಲಗಳಿಂದ ಮಾಹಿತಿ ಸಂಗ್ರಹಿಸಿ ಕಪ್ಪು ಹಣ ಖಾತೆದಾರರ ಪಟ್ಟಿ ತಯಾರಿಸಿ ತನಿಖೆ ಪ್ರಾರಂಭಿಸಲಾಗಿತ್ತು. ಇಷ್ಟೆಲ್ಲಾ ಆದ ಮೇಲೆ ಸ್ವಿಸ್ ಬ್ಯಾಂಕಿನ ಅಧಿಕಾರಿಗಳು ಕೆಲವು ಮಾಹಿತಿಗಳನ್ನು ಕೇಂದ್ರ ಹಣಕಾಸು ಸಚಿವಾಲಯದೊಂದಿಗೆ ಹಂಚಿಕೊಳ್ಳಲು ಒಪ್ಪಿದ್ದರು. ಇದರ ನಡುವೆಯೇ ಅಕೌಂಟುಗಳಲ್ಲಿರುವ ಠೇವಣಿ ಹಣವನ್ನು ವಾಪಸ್ಸು ಪಡೆಯುವಂತೆ ಭಾರತೀಯ ಖಾತೆದಾರರಿಗೆ ಸೂಚಿಸಿದ್ದವು. ಕಪ್ಪುಹಣದ ಮಾಹಿತಿಯನ್ನು ಅವು ಈಗಾಗಲೇ ಕೇಂದ್ರ ವಿತ್ತ ಸಚಿವಾಲಯಕ್ಕೆ ಮಾಹಿತಿ ನೀಡಲು ಒಪ್ಪಿದ್ದ ಕಾರಣ ತಮ್ಮ ಖಾತೆದಾರರಿಗೆ ಅನುಕೂಲ ಮಾಡಿಕೊಡಲು ಅವು ಮುಂದಾಗಿದ್ದವು. ಡಿಸೆಂಬರ್ 31ರೊಳಗೆ ತಮ್ಮ ಹಣವನ್ನು ವಿತ್‌ಡ್ರಾ ಮಾಡುವಂತೆ ಸ್ವಿಸ್ ಬ್ಯಾಂಕ್ ಅಧಿಕಾರಿಗಳು ದೆಹಲಿ ಹಾಗೂ ಮುಂಬೈ ಮೂಲದ ನಾಲ್ವರಿಗೆ e-mail ಮಾಡಿದ್ದವು. ಈ ಹಿನ್ನೆಲೆಯಲ್ಲಿ ಮತ್ತೆ ಐವತ್ತು ಹೆಸರುಗಳು ಆಗ ಕೇಂದ್ರದ ಪರಿಶೀಲನೆಯಲ್ಲಿದ್ದವು.

ನೀವೇನೆ ಹೇಳಿ ಅವರು ಎಷ್ಟೇ ದೊಡ್ಡವರಿರಲಿ ಬ್ಲಾಕ್‌ಮನಿ ವಿವಾದಕ್ಕೆ ಇತಿಶ್ರೀ ಹಾಡಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಯಾರೇ ಆಗಲಿ ಇಲ್ಲಿ ರಾಜಕಾರಣ ಮಾಡಬಾರದು. ಹಾಗಂತ ಸ್ವತಃ ಸ್ವಿಜರ್ ಲ್ಯಾಂಡ್‌ನ ಗೃಹ ಸಚಿವಾಲಯ ಈ ಹಿಂದೆಯೇ ಹೇಳಿತ್ತು. ಯಾರನ್ನೋ ಗುರಿಯಾಗಿಸಿಕೊಂಡು ನಮ್ಮ ದೇಶದ ಬ್ಯಾಂಕಿಂಗ್ ವ್ಯವಸ್ಥೆಯ ರಹಸ್ಯ ಮಾಹಿತಿಗಳನ್ನು ದುರುಪಯೋಗಪಡಿಸಿಕೊಳ್ಳುವಂತಿಲ್ಲ ಎಂದು ತಿಳಿಸಿ ಆ ಷರತ್ತಿನೊಂದಿಗೇ ಕೆಲ ಮಾಹಿತಿಗಳನ್ನು ಆ ದೇಶ ಹಂಚಿಕೊಳ್ಳಲು ಹೊರಟಿತ್ತು. ಸ್ವಿಜರ್‌ಲ್ಯಾಂಡ್ ಜಗತ್ತಿನ ಭೂಪಟದಲ್ಲಿ ವಿಸ್ತೀರ್ಣದಲ್ಲಿ ಚಿಕ್ಕದು. ಬ್ಯಾಂಕ್, ಹಣ, ಆರ್ಥಿಕ ವಹಿವಾಟೇ ಅದರ ಬೆನ್ನೆಲುಬಲ್ಲ. ಹಾಲು ಮಾರಿಕೊಂಡು, ಮಾಂಸ ಮಾರಿಕೊಂಡು ಬದುಕುವ ದೇಶ ಡೆನ್ಮಾರ್ಕ್, ತಂತ್ರಜ್ಞಾನವನ್ನು ನಂಬಿ ಬದುಕುವ ಜಪಾನ್, ಪ್ರವಾಸಿಗರ ಸೇವೆಯಿಂದಲೇ ಬದುಕುವ ಪಟ್ಟಾಯ, ಥೈಲ್ಯಾಂಡ್, ಸಿಂಗಾಪೂರ್‌ಗಳು ತಮ್ಮ ತಮ್ಮ ದೇಶದ ದುಡ್ಡನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಥಿರತೆಯ ದೃಷ್ಟಿಯಿಂದ ಭದ್ರಮಾಡಿಕೊಂಡಿವೆ. ಕೃಷಿ, ವಿಜ್ಞಾನ, ಬಾಹ್ಯಾಕಾಶ ಸಂಶೋಧನೆ, ಕೈಗಾರಿಕೆ ಏನೆಲ್ಲಾ ವೃತ್ತಿಗಳನ್ನು ಮೈಗೂಡಿಸಿಕೊಂಡ ನಾವು ಡಾಲರ್ ಮುಂದೆ ಉಠ್‌ಬೈಸ್ ಹೊಡೆದು ಸುಸ್ತಾಗಿ ಕಡೆಗೆ ನಮ್ಮ ನೋಟು ಬದಲಾವಣೆ, ಡಿಜಿಟಲೀಕರಣ ಆನ್‌ಲೈನ್ ವ್ಯವಹಾರ ಎಲ್ಲಾದಕ್ಕೂ ಲೆಕ್ಕ ಶೀರ್ಷಿಕೆಯ ಪಕ್ಕಾ ಮಾಹಿತಿಗಳಿಂದಾಗಿ ಭಾರತ ಈಗ fluctuationನ ಆತಂಕದಿಂದ ದೂರವಾಗಿದೆ. ವಿಶ್ವದ ಏಳು, ಎಂಟನೇ ಕ್ರಮಾಂಕದ ಅರ್ಥಶಾಸ್ತ್ರಜ್ಞರೆಲ್ಲಾ ನಮ್ಮವರೇ. ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಅರ್ಥಶಾಸ್ತ್ರಜ್ಞರೂ ನಮ್ಮವರೇ. ಆದರೆ ಹಣ ಕಪ್ಪಾಗುವುದನ್ನು ತಡೆಯಲು economy ಸೂತ್ರಗಳನ್ನೇನಾದರೂ ಮಾಡಬೇಕಲ್ಲವೇ? ಹಾಗೆ ಮಾಡದೇ ಹೋದರೆ ಆಗ ಪತ್ತೆ ಹಚ್ಚಿರುವ 627 ಮಂದಿಯ ಪಟ್ಟಿ ಹನುಮಂತನ ಬಾಲದ ಹಾಗೆ ದೊಡ್ಡದಾಗುತ್ತಲೆ ಇರುತ್ತದೆ.

ಬಡ ಸರ್ಕಾರಿ ನೌಕರನೊಬ್ಬ ಒಂದು ಬ್ಯಾಂಕಿನಲ್ಲಿ ಸಾಲ ಪಡೆದು ಇನ್ನೊಂದು ಬ್ಯಾಂಕಿನಲ್ಲಿ ಮತ್ತೆ ಸಾಲಕ್ಕಾಗಿ ಅರ್ಜಿ ಹಾಕಿ ಪ್ರಯತ್ನಿಸಿದರೆ ಅವನ ಹೆಸರನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡುತ್ತಿದ್ದಂತೆ ಅವನ ಡೀಟೆಲ್ಸ್ ಎಲ್ಲಾ ಅಪ್‌ಡೇಟ್ ಆಗಿಬಿಡುವ ಸಾಫ್ಟ್‌ವೇರ್‌ಗಳು ಈಗ ಬ್ಯಾಂಕಿಂಗ್ ಸಿಸ್ಟಮ್‌ನಲ್ಲಿ ಆಕ್ಟಿವ್ ಆಗಿವೆ Globalization ಅಂತೆಲ್ಲಾ ಮಾತನಾಡುವ ಮಂದಿ ದೊಡ್ಡವರ ವಿಷಯದಲ್ಲೂ ಈ ಬಗೆಯ transparency ತರುವುದು ಒಳ್ಳೆಯದಲ್ಲವೇ? ಗಾತ್ರದಲ್ಲಿ ಚಿಕ್ಕ ಗುಬ್ಬಿ ಕೂಡ ತನ್ನ ಮರಿಗಳಿಗೆ ಆ ದಿನದ ಹಸಿವಿಗೆ ಗುಟುಕು ಕೊಟ್ಟು ರೆಕ್ಕೆ ಬಲಿತ ಮೇಲೆ ಹಾರಿ ಆಹಾರ ಹುಡುಕುವುದನ್ನು ಕಲಿಸುತ್ತದೆ. ಹುಲಿಯಂಥ ವನ್ಯಮೃಗ ಕೂಡ ಹೊಟ್ಟೆ ತುಂಬಿದ ಮೇಲೆ ತನ್ನ ಕಣ್ಣೆದುರೆ ಹರಿಣಗಳು ಓಡಾಡುತ್ತಿದ್ದರೂ ಬೇಟೆಯಾಡುವುದಿಲ್ಲ. ಮತ್ತೆ ಹಸಿವಾಗುವ ತನಕ ಅವಕ್ಕೆ ದುರಾಸೆ ಇಲ್ಲ, ದಾಹ ಇಲ್ಲ. ಆದರೆ ಅವುಗಳನ್ನೇ ಹಿಡಿದು ಪಳಗಿಸಬಲ್ಲ ಬುದ್ಧಿ ಇರುವ ಈ ಮನುಷ್ಯನಿಗೆ ಜೀವನದಲ್ಲಿ ಎಲ್ಲವೂ ಸಾಕಾಗುವುದು ಯಾವಾಗ? ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಲ್ಲರಿಗೂ ದಕ್ಕುವುದು ಯಾವಾಗ?

ಭಾರತ ದೇಶದ ಬಡವರ ದುಡ್ಡನ್ನು ಇನ್ಯಾವುದೋ ದೇಶದ ಬ್ಯಾಂಕಿನಲ್ಲಿಟ್ಟು ಆ ದೇಶದ ಅಭಿವೃದ್ಧಿಗೆ ಸಹಕರಿಸುವ ಇವರನ್ನು ಏನನ್ನೋಣ? ವಿದೇಶಗಳಲ್ಲಿರುವ ಅಂದಾಜು ಲಕ್ಷ ಲಕ್ಷ ಕೋಟಿ ಕಪ್ಪುಹಣವನ್ನು ಆ ಖಾತೆದಾರರು ಮನಸ್ಸು ಮಾಡಿದ್ದರೆ ಭಾರತದಲ್ಲಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನು ತೆರೆಯಬಹುದಿತ್ತು. ಕೋಟ್ಯಾಂತರ ಉದ್ಯೋಗ ಸೃಷ್ಟಿಸಬಹುದಾಗಿತ್ತು. ಭಾರತದ ಬಡತನ, ನಿರುದ್ಯೋಗಕ್ಕೆ ಅದು ದೊಡ್ಡ ಕೊಡುಗೆಯಾಗುತ್ತಿತ್ತು. ಜೊತೆಗೆ ಅವರ ಬಂಡವಾಳ ಹೂಡಿಕೆಯೂ ಸೇಫ್ ಆಗುತ್ತಿತ್ತು. ಸಂಪಾದನೆಯಾದರೆ ದುಡ್ಡು ಇಲ್ಲದಿದ್ದರೆ ಆಸ್ತಿ, ಎರಡೂ ಉಳಿಯುತ್ತಿತ್ತು. ಈಗ ಅವರ ದುಡ್ಡಿಗೆ ಮತ್ತು ಬ್ಯಾಂಕಿಗೆ ಅವರೇ ಬಾಡಿಗೆ ಕಟ್ಟಬೇಕು. ಈಗ ಬಾಡಿಗೆಯೂ ಇಲ್ಲ, ಬಂಕವೂ ಇಲ್ಲ. ಕಸ್ಟಂಸ್‌ನ ಸುಂಕವೂ ಇಲ್ಲದಂತೆ ಇವರ ಹಣ ಭಾರತಕ್ಕೆ ಬರುತ್ತದೆ. ಆದರೆ ಆ ದುಡ್ಡನ್ನು ತರುವ ಧೀಮಂತಿಕೆಯನ್ನು ತೋರಬೇಕಷ್ಟೇ. 136 ಕೋಟಿ ಭಾರತೀಯರನ್ನು ಹೊತ್ತುನಿಂತ ತಾಯಿಯನ್ನು ವಿಶ್ವದ ಭೂಪಟದಲ್ಲಿ ಸ್ಥಿರ ಅರ್ಥವ್ಯವಸ್ಥೆಯ ಚಿರಸ್ಥಾಯಿಯಾಗಿ ನಿಲ್ಲಿಸಬೇಕೆಂಬುದೇ ಜನರ ನಿರೀಕ್ಷೆ ಏನಂತೀರಿ?

# ಸಂಪಾಜೆ ವ್ಯಾಪ್ತಿಯಲ್ಲಿ ಭಾರೀ ಮಳೆ: ಪಯಸ್ವಿನಿ ನದಿಯಲ್ಲಿ ಮತ್ತೆ ಪ್ರವಾಹ







ಮಡಿಕೇರಿ, ಆ.29– ಭಾನುವಾರ ರಾತ್ರಿ ಇಡೀ ಕೊಡಗಿನ ಸಂಪಾಜೆ ವ್ಯಾಪ್ತಿಯಲ್ಲಿ ಭಾರೀ ಮಳೆ ಸುರಿದ ಪರಿಣಾಮ ಪಯಸ್ವಿನಿ ನದಿಯಲ್ಲಿ ಮತ್ತೊಮ್ಮೆ ಪ್ರವಾಹ ಉಂಟಾಗಿದೆ. ಈ ಬಾರಿಯ ಮಳೆಗಾಲದಲ್ಲಿ ನಾಲ್ಕನೇ ಬಾರಿಗೆ ಕೊಯನಾಡಿನಲ್ಲಿ ಅಪಾಯದ ಸ್ಥಿತಿ ಎದುರಾಗಿದ್ದು, ಸೋಮವಾರ ಬೆಳಗ್ಗೆ 5 ಗಂಟೆಯಲ್ಲಿ ವ್ಯಾಪ್ತಿಯ ಸುಮಾರು 9ಕ್ಕೂ ಅಧಿಕ ಮನೆಗಳಿಗೆ ಪ್ರವಾಹದ ನೀರು ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

ಕೊಯನಾಡು ಕಿಂಡಿ ಅಣೆಕಟ್ಟೆಗೆ ಭಾರೀ ಗಾತ್ರದ ಮರದ ದಿಮ್ಮಿಗಳು ನೀರಿನಲ್ಲಿ ಕೊಚ್ಚಿ ಬಂದು ನೀರಿನ ಹರಿವಿಗೆ ತಡೆ ಒಡ್ಡಿವೆ. ಪರಿಣಾಮ ಏಕಾಏಕಿ ಪ್ರವಾಹ ನೀರು ಉಕ್ಕಿ ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಸಿದೆ. ಗಾಢ ನಿದ್ದೆಯಲ್ಲಿದ್ದ ಮನೆ ಮಂದಿ ಪ್ರವಾಹದಿಂದ ಹೌಹಾರಿದ್ದು, ಮನೆ ತೊರೆದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ನೀರಿನಿಂದ ಗೃಹ ಬಳಕೆ ವಸ್ತುಗಳಿಗೆ ಭಾರೀ ಹಾನಿಯಾಗಿದ್ದು, ಕೆಸರು ನೀರಿನಿಂದ ತೊಯ್ದು ಹೋಗಿವೆ. ಪ್ರವಾಹ ಸಂತ್ರಸ್ತರನ್ನು ಸಮೀಪದ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಗೊಳಿಸಲಾಗಿದೆ. ಘಟನಾ ಸ್ಥಳಕ್ಕೆ ಮಡಿಕೇರಿ ತಹಸೀಲ್ದಾರ್ ಮಹೇಶ್ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ತೆರಳಿ ಪರಿಶೀಲನೆ ನಡೆಸಿದ್ದಾರೆ.

ಕೊಯನಾಡು ಕಿಂಡಿ ಅಣೆಕಟ್ಟು ಪ್ರವಾಹದ ನೀರಿನಲ್ಲಿ ವಿಶೇಷಚೇತನ ವ್ಯಕ್ತಿಯೊಬ್ಬರು ಸಿಲುಕಿಕೊಂಡಿದ್ದು, ಗ್ರಾಮಸ್ಥರು ಅವರನ್ನು ರಕ್ಷಿಸಿದ್ದಾರೆ. ಮನೆಯಲ್ಲಿ ಸಾಕಿದ್ದ ಹಂದಿ ಕೋಳಿ ಸೇರಿದಂತೆ ಸಾಕು ಪ್ರಾಣಿಗಳು ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋಗಿವೆ. ಸತತ ಪ್ರವಾಹಕ್ಕೆ ಇಲ್ಲಿ ನಿರ್ಮಿಸಲಾಗಿರುವ ಕಿಂಡಿ ಅಣೆಕಟ್ಟೆಯೇ ಕಾರಣ ಎಂದು ಸ್ಥಳೀಯರು ದೂರಿದ್ದಾರೆ.

**ಸೇತುವೆ ಧ್ವಂಸ:** ಸಂಪಾಜೆ ಸಮೀಪದ ಚೆರಾವು–ಮುಂಡಡ್ಕ ಸಂಪರ್ಕ ಕಲ್ಪಿಸುವ ಕಾಲು ಸೇತುವೆ ಪ್ರವಾಹದಲ್ಲಿ ಕೊಚ್ಚಿ ಹೋಗಿದೆ. ಕಳೆದ ರಾತ್ರಿ ಭಾರೀ ಮಳೆ ಸಂದರ್ಭ ಬೃಹತ್ ಮರದ ದಿಮ್ಮಿಗಳು ಕೊಚ್ಚಿ ಬಂದು ಕಾಲು ಸೇತುವೆಗೆ ಅಪ್ಪಳಿಸಿದ ಪರಿಣಾಮ ಸೇತುವೆ ಕುಸಿದು ಬಿದ್ದಿದೆ. ಇದರಿಂದಾಗಿ ಚೆರಾವು–ಮುಂಡಡ್ಕ ಸಂಪರ್ಕ ಕಡಿತಗೊಂಡಿದೆ. ಶೀಘ್ರವಾಗಿ ಸೇತುವೆ ಮರು ನಿರ್ಮಿಸಿ ಕೊಡುವಂತೆ ಈ ಭಾಗದ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಚೆಂಬು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಂಬಳೆ, ದಬ್ಬಡ್ಕ, ಅನ್ಯಾಳ, ಕೂಡಡ್ಕ, ನಾಕಲ್‌ಮೊಟ್ಟೆ ಗ್ರಾಮಗಳು ಮಳೆ ಅಬ್ಬರಕ್ಕೆ ಸಂಪೂರ್ಣ ನಲುಗಿ ಹೋಗಿವೆ. ನಾಕಲ್‌ಮೊಟ್ಟೆ ಗ್ರಾಮದ ಸೇತುವೆ ಮೇಲೆ ಪ್ರವಾಹ ಉಕ್ಕಿ ಹರಿದಿದ್ದು, ಇಲ್ಲಿಯೂ ಬೃಹತ್ ಮರದ ದಿಮ್ಮಿಗಳು ಸೇತುವೆ ತಡೆಗೋಡೆಗೆ ಬಂದು ಅಪ್ಪಳಿಸಿವೆ. ಇನ್ನು ಚೆಂಬು–ದಬ್ಬಡ್ಕ ಗ್ರಾಮದ ರಸ್ತೆ ಕೊಚ್ಚಿ ಹೋಗಿದ್ದು ಸಂಪರ್ಕ ಕಡಿತಗೊಂಡಿದೆ.

**ಸಂಗಮ ಜಲಾವೃತ:** ಭಾಗಮಂಡಲ ವ್ಯಾಪ್ತಿಯಲ್ಲಿಯೂ ಭಾರೀ ಮಳೆ ಸುರಿದ ಪರಿಣಾಮ ತ್ರಿವೇಣಿ ಸಂಗಮ ಜಲಾವೃತವಾಗಿದೆ. ಭಾಗಮಂಡಲ ಭಗಂಡೇಶ್ವರ ದೇವಾಲಯ ಆವರಣ ಮುಂಭಾಗ ಕಾವೇರಿ ನದಿ ಪ್ರವಾಹದ ನೀರು ಭಾಗಮಂಡಲ–ಮಡಿಕೇರಿ ರಸ್ತೆ ಮೇಲೆ ನೀರು ಹರಿಯುತ್ತಿದೆ. ವಾಹನ ಸಂಚಾರ ಎಂದಿನಂತೆ ಸಾಗಿದೆ. ಭಾಗಮಂಡಲ–ಅಯ್ಯಂಗೇರಿ ರಸ್ತೆ ಮೇಲೆ ಪ್ರವಾಹ ನೀರು ಹರಿಯುತ್ತಿದ್ದು, ರಸ್ತೆ ಸಂಚಾರ ಬಂದ್ ಆಗಿದೆ.

**ಭೂ ಕುಸಿತ:** ಭಾರೀ ಮಳೆಗೆ ಭಾಗಮಂಡಲ–ಕರಿಕೆ ರಸ್ತೆಯಲ್ಲಿ ಭೂ ಕುಸಿತವಾಗಿದ್ದು, ಕೆಲ ಕಾಲ ರಸ್ತೆ ಸಂಚಾರ ಬಂದ್ ಆಗಿತ್ತು. ಗುಡ್ಡ ಸಹಿತ ಮರಗಳು ರಸ್ತೆಗೆ ಅಡ್ಡಲಾಗಿ ಬಿದ್ದಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಮರಗಳನ್ನು ತೆರವು ಮಾಡಿದ್ದಾರೆ. ಸ್ಥಳೀಯ ಪಂಚಾಯಿತಿ ವತಿಯಿಂದ ಮಣ್ಣು ತೆರವು ಮಾಡಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುವ ಬಗ್ಗೆ ವರದಿಯಾಗಿದೆ. ಮಡಿಕೇರಿ–ಮಂಗಳೂರು ರಸ್ತೆಯ ದೇವರಕೊಲ್ಲಿ ಬಳಿಯೂ ಸಣ್ಣ ಪ್ರಮಾಣದ ಭೂ ಕುಸಿತವಾಗಿದೆ. ಹೆದ್ದಾರಿಗೆ ಮರ ಸಹಿತ ಮಣ್ಣು ಕುಸಿದ ಪರಿಣಾಮ ಕೆಲ ಕಾಲ ಹೆದ್ದಾರಿ ಸಂಚಾರ ಅಸ್ತವ್ಯಸ್ತವಾಗಿತ್ತು. ಮಣ್ಣು ಮತ್ತು ಮರಗಳನ್ನು ತೆರವು ಮಾಡುವ ಮೂಲಕ ಹೆದ್ದಾರಿ ಸಂಚಾರವನ್ನು ಸುಗಮಗೊಳಿಸಲಾಗಿದೆ.

**ಜಿಲ್ಲಾಧಿಕಾರಿ ಭೇಟಿ:** ಕೊಯನಾಡು ಕಿಂಡಿ ಅಣೆಕಟ್ಟುವಿನಲ್ಲಿ ಸಿಲುಕಿಕೊಂಡಿರುವ ಬೃಹತ್ ಮರಗಳ ದಿಮ್ಮಿಗಳನ್ನು ತೆರವು ಮಾಡುವ ಕಾರ್ಯಾಚರಣೆ ನಡೆಸಲಾಗುತ್ತಿದೆ. ಅರಣ್ಯ ಇಲಾಖೆ ಸಿಬ್ಬಂದಿಗಳು ಕ್ರೇನ್ ಸಹಾಯದಿಂದ ಮರದ ದಿಮ್ಮಿಗಳನ್ನು ಹೊರ ತೆಗೆಯುತ್ತಿದ್ದು, ಸರಾಗವಾಗಿ ನೀರು ಹರಿಯುವಂತೆ ಮಾಡುತ್ತಿದ್ದಾರೆ.

ಪ್ರಸ್ತುತ ಸ್ಥಳದಲ್ಲಿ ನೀರಿನ ಪ್ರಮಾಣ ಇಳಿಕೆಯಾಗಿದ್ದು, ಪರಿಸ್ಥಿತಿ ಸಹಜ ಸ್ಥಿತಿಗೆ ಬಂದಿದೆ. ಪ್ರವಾಹ ಪೀಡಿತ ಪ್ರದೇಶಕ್ಕೆ ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅರಣ್ಯ ಇಲಾಖೆ ಕಾರ್ಯಾಚರಣೆ ವೀಕ್ಷಿಸಿದ ಜಿಲ್ಲಾಧಿಕಾರಿಗಳು, ಡಿಎಫ್‌ಓ ಪೂವಯ್ಯ ಅವರೊಂದಿಗೆ ಚರ್ಚೆ ನಡೆಸಿದರು. ಬಳಿಕ ಅಲ್ಲೇ ಸಮೀಪದಲ್ಲಿರುವ ಅರಣ್ಯ ಇಲಾಖೆ ಸಸ್ಯ ಕ್ಷೇತ್ರಕ್ಕೆ ತೆರಳಿ ಹಾನಿಗೀಡಾದ ಸಸಿ ಮಡಿಗಳನ್ನು ಪರಿಶೀಲನೆ ನಡೆಸಿದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com*

# ಮೈಸೂರು ಕೆಸರೆ ಸಿವೇಜ್ ಟ್ರೀಟ್‌ಮೆಂಟ್ ಪ್ಲಾಂಟ್‌ಗೆ ಸೇರಿದ ಜಾಗ ಕಂಡವರ ಪಾಲಾಗುವ ಸಾಧ್ಯತೆ

● ಸ್ಥಳೀಯರ ಅನುಮಾನ ● ಪಾಲಿಕೆಗೆ ದೂರು ನೀಡಿದರೂ ಕನಿಷ್ಠ ಸ್ಥಳ ಪರಿಶೀಲನೆ ನಡೆಸದ ಅಧಿಕಾರಿಗಳು





ಮೈಸೂರು, ಆ.29– ಮೈಸೂರಿನ ಕೆಸರೆ ಸಿವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ (ಎಸ್‌ಟಿಪಿ) ವ್ಯಾಪ್ತಿಯ ಕೋಟ್ಯಾಂತರ ರೂ. ಮೌಲ್ಯದ ಜಾಗ ಕಂಡವರ ಪಾಲಾಗುವ ಬಲವಾದ ಅನುಮಾನವನ್ನು ಸ್ಥಳೀಯರು ವ್ಯಕ್ತಪಡಿಸಿದ್ದಾರೆ.

ಒಳಚರಂಡಿ ನೀರನ್ನು ಸಂಗ್ರಹಿಸಿ, ಎಸ್‌ಟಿಪಿಗೆ ಪಂಪ್ ಮಾಡುವ ವೆಟ್‌ವೆಲ್ ಘಟಕದ ಬಳಿಯ ಖಾಲಿ ಜಾಗವನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಸಿರುವುದು ಸ್ಥಳೀಯರ ಅನುಮಾನಕ್ಕೆ ಪುಷ್ಠಿ ನೀಡಿದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದರೂ ಕನಿಷ್ಠ ಸ್ಥಳ ಪರಿಶೀಲನೆ ನಡೆಸದಿರುವುದು ಸಾರ್ವಜನಿಕರನ್ನು ಕೆರಳಿಸಿದೆ.

ಎಸ್‌ಟಿಪಿ ನಿರ್ಮಾಣದ ಉದ್ದೇಶಕ್ಕಾಗಿ ಸುಮಾರು 65–70 ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದ್ದು, ಇದರಲ್ಲಿ ಸುಮಾರು 25–30 ಎಕರೆಯಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗಿದೆ. 1998–2002ರ ನಡುವೆ ಎಸ್‌ಟಿಪಿ ನಿರ್ಮಿಸಲಾಗಿದ್ದು, ಉಳಿದ ಜಾಗವನ್ನು ಸಂರಕ್ಷಿಸಲಾಗಿತ್ತು. ರಿಂಗ್ ರಸ್ತೆ ನಿರ್ಮಾಣದ ಬಳಿಕ ತೆಂಗಿನ ತೋಟಕ್ಕೆ ಪ್ರತ್ಯೇಕವಾಗಿ ಕಾಂಪೌಂಡ್ ವ್ಯವಸ್ಥೆ ಮಾಡಲಾಯಿತು. ಒಂದು ಭಾಗದಲ್ಲಿ ಎಸ್‌ಟಿಪಿ ಕ್ವಾಟ್ರರ್ಸ್ ನಿರ್ಮಿಸಲಾಗಿದೆ. ಇನ್ನುಳಿದ ಜಾಗದ ಸಂರಕ್ಷಿಸುವ ನಿಟ್ಟಿನಲ್ಲಿ ಅಲ್ಲಿಗೂ ಫೆನ್ಸಿಂಗ್ ಅಳವಡಿಸಲಾಗಿದೆ. ಇದೆಲ್ಲದರ ನಡುವೆಯೂ ಸರ್ಕಾರಿ ಭೂಮಿ ಕಬಳಿಸುವ ಪ್ರಯತ್ನ ನಡೆದಿದೆ.

ಬನ್ನಿಮಂಟಪದ ಕಡೆಯಿಂದ ಚರಂಡಿ ನೀರು ಹರಿದು ಬರುವ ಸ್ಥಳದಲ್ಲಿ ವೆಟ್‌ವೆಲ್ ಘಟಕ ಸ್ಥಾಪಿಸಲಾಗಿದೆ. ಕಲುಷಿತ ನೀರನ್ನು ಇಲ್ಲಿ ಸಂಗ್ರಹಿಸಿ ನಂತರ ನಿಗದಿತ ಪ್ರಮಾಣದಲ್ಲಿ ಎಸ್‌ಟಿಪಿ ಘಟಕಕ್ಕೆ ಪಂಪ್ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವತಿಯಿಂದ 2002ರಲ್ಲಿ ಐದಾರು ಎಕರೆ ಭೂಸ್ವಾಧೀನಪಡಿಸಿಕೊಂಡು ನಂತರ ನಗರ ಪಾಲಿಕೆಗೆ ಹಸ್ತಾಂತರಿಸಲಾಗಿತ್ತು. ಘಟಕ ಸ್ಥಾಪನೆ ಬಳಿಕ ಉಳಿದ ಜಾಗಕ್ಕೆ ಫೆನ್ಸಿಂಗ್ ಅಳವಡಿಸಲಾಗಿತ್ತು. ಆದರೆ ಕೆಲ ದಿನಗಳಿಂದ ಯಾರೋ ಖಾಸಗಿ ವ್ಯಕ್ತಿ ಈ ಜಾಗವನ್ನು ಸ್ವಚ್ಛ ಮಾಡಿಸುತ್ತಿದ್ದಾರೆ. ನಗರ ಪಾಲಿಕೆಗೆ ವಿಷಯ ತಿಳಿಸಿದ್ದರೂ ಸ್ಥಳಕ್ಕೆ ಬಂದು ಪರಿಶೀಲಿಸಿಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.

ರಿಂಗ್ ರಸ್ತೆ ಹಾಗೂ ಎಸ್‌ಟಿಪಿ ಘಟಕದ ನಡುವಿನ ಜಾಗದಲ್ಲೂ ಖಾಸಗಿಯವರು ಶೆಡ್ ನಿರ್ಮಿಸಿಕೊಂಡು ಬಹಳ ದಿನಗಳಾಗಿವೆ. ಪಾಲಿಕೆ ಅಧಿಕಾರಿಗಳು ಅದನ್ನು ತೆರವುಗೊಳಿಸುವುದಿರಲಿ ಕನಿಷ್ಠ ಶೆಡ್ ನಿರ್ಮಿಸಿದ್ದರ ಬಗ್ಗೆ ಪ್ರಶ್ನೆಯನ್ನೂ ಮಾಡಿಲ್ಲ. ರಿಂಗ್ ರಸ್ತೆ ನಿರ್ಮಾಣದ ವೇಳೆ ಒಂದು ಕಡೆ ಫೆನ್ಸಿಂಗ್ ಮುರಿದಿತ್ತು. ಅದನ್ನು ದುರಸ್ತಿಪಡಿಸುವಷ್ಟರಲ್ಲಿ ಅನಧಿಕೃತವಾಗಿ ಶೆಡ್ ನಿರ್ಮಿಸಿಕೊಳ್ಳಲಾಗಿದೆ ಎಂದು ಆರೋಪಿಸಿದ್ದಾರೆ.

ಕೆಸರೆ ಎಸ್‌ಟಿಪಿಗೆ ಸೇರಿದ ಬಹಳಷ್ಟು ಜಾಗವನ್ನು ಹೀಗೆ ಖಾಸಗಿಯವರು ಅತಿಕ್ರಮಿಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಯನ್ನು ಸಂರಕ್ಷಿಸಿಕೊಳ್ಳುವಲ್ಲಿ ಸ್ಥಳೀಯ ಸಂಸ್ಥೆ ವಿಫಲವಾಗಿದೆ. ಉದ್ದೇಶಕ್ಕೆ ಬಳಕೆಯಾಗಿ ಉಳಿದ ಜಾಗ ಅನ್ಯರ ಪಾಲಾಗುತ್ತಿದೆ. ಕೋಟ್ಯಾಂತರ ರೂ. ಸರ್ಕಾರಿ ಭೂಮಿ ಕಬಳಿಸುವ ಪ್ರಯತ್ನ ನಡೆದಿದ್ದರೂ ಅಧಿಕಾರಿಗಳು ಕಣ್ಣು–ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ಇದರ ಹಿಂದೆ ರಾಜಕೀಯ ನಾಯಕರ ಪ್ರಭಾವವೂ ಇರಬಹುದು. ಆದ್ದರಿಂದಲೇ ಅಧಿಕಾರಿಗಳು ಮೌನ ವಹಿಸಿರಬೇಕು ಎಂದು ಆಕ್ರೋಶ ಹೊರಹಾಕಿದ್ದಾರೆ.

ಜಾಗವನ್ನು ಅತಿಕ್ರಮಿಸಿಕೊಳ್ಳುವಾಗ ಕ್ರಮ ಕೈಗೊಳ್ಳದೆ ಕೈಮೀರಿದ ಮೇಲೆ ಕಸರತ್ತು ನಡೆಸಿದರೆ ಏನು ಪ್ರಯೋಜನ?. ಸಮಸ್ಯೆಯನ್ನು ಆರಂಭದಲ್ಲೇ ಪರಿಹರಿಸಿಕೊಳ್ಳಬೇಕೇ ಹೊರತು ಅದು ಜಟಿಲವಾಗುವವರೆಗೆ ಕಾಯಬಾರದು. ಎಸ್‌ಟಿಪಿ ವ್ಯಾಪ್ತಿಯ ಜಾಗದಲ್ಲಿ ಖಾಸಗಿ ವ್ಯಕ್ತಿ ಅಕ್ರಮವಾಗಿ ಏನಾದರೂ ನಿರ್ಮಾಣ ಮಾಡಿದರೆ ಮತ್ತಷ್ಟು ಸಮಸ್ಯೆ ಎದುರಿಸಬೇಕಾಗುತ್ತದೆ. ಎಸ್‌ಟಿಪಿ ಸಂಬಂಧಿತ ಇತರೆ ಉದ್ದೇಶಗಳಿಗೂ ಸ್ಥಳಾವಕಾಶ ಕೊರತೆ ಉಂಟಾಗುತ್ತದೆ. ಅಕ್ರಮ ನಿರ್ಮಾಣ ಮಾಡಿದ ವ್ಯಕ್ತಿ ನಕಲಿ ದಾಖಲೆಗಳನ್ನು ಸೃಷ್ಟಿಸಿಕೊಂಡು ಅಡ್ಡಿ ಮಾಡಬಹುದು. ಸಾರ್ವಜನಿಕರ ಕೋಟ್ಯಾಂತರ ರೂ. ತೆರಿಗೆ ಹಣದಲ್ಲಿ ಸ್ವಾಧೀನಪಡಿಸಿಕೊಂಡ ಜಾಗವನ್ನು ಕಳೆದುಕೊಳ್ಳುವುದಕ್ಕಿಂತ ಅವಮಾನ ಮತ್ತೊಂದಿರುವುದಿಲ್ಲ. ಎಸ್‌ಟಿಪಿ ಜಾಗ ಅತಿಕ್ರಮವಾಗುತ್ತಿರುವ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ಪತ್ರ ಬರೆದು ಮಾಹಿತಿ ನೀಡಿದ್ದರೂ ನಿರ್ಲಕ್ಷ್ಯ ವಹಿಸಿರುವುದು ಏಕೆಂಬುದೇ ತಿಳಿಯುತ್ತಿಲ್ಲ ಎಂದು ಸಾರ್ವಜನಿಕರು ವಿಷಾದ ವ್ಯಕ್ತಪಡಿಸಿದ್ದಾರೆ.

### ಕೂಡಲೇ ಸ್ಥಳ ಪರಿಶೀಲನೆ ನಡೆಸಲಿ...

ಎಸ್‌ಟಿಪಿ ವ್ಯಾಪ್ತಿಯ ವೆಟ್‌ವೆಲ್ ಘಟಕದ ಬಳಿ 2–3 ಎಕರೆಯಷ್ಟು ಜಾಗವನ್ನು ಅತಿಕ್ರಮಿಸಿಕೊಳ್ಳುವ ಪ್ರಯತ್ನ ಬಹಳ ದಿನದಿಂದ ನಡೆದಿತ್ತು. ಕೆಲ ದಿನಗಳಿಂದ ಅಲ್ಲಿ ಸ್ವಚ್ಛತಾ ಕಾರ್ಯ ನಡೆಸಲಾಗುತ್ತಿದೆ. ನಮಗೆ ತಿಳಿದಂತೆ ಆ ಜಾಗ ಪಾಲಿಕೆಗೆ ಸೇರಿದ್ದಾಗಿದೆ. ಆದರೆ ಸ್ವಚ್ಛ ಮಾಡಿಸುತ್ತಿರುವವರು ಪಾಲಿಕೆಯವರಲ್ಲ, ಖಾಸಗಿಯವರು. ಅವರು ಯಾರೆಂಬುದೂ ತಿಳಿದಿಲ್ಲ. ಈ ಬಗ್ಗೆ ವಿಷಯ ತಿಳಿಸಿದರೂ ಪಾಲಿಕೆ ಅಧಿಕಾರಿಗಳು ತಿರುಗಿ ನೋಡಿಲ್ಲ. ಕೋಟ್ಯಾಂತರ ರೂ. ಮೌಲ್ಯದ ಸರ್ಕಾರಿ ಭೂಮಿ ಪರರ ಪಾಲಾಗುವುದನ್ನು ನೋಡಲಾಗದು. ಒಂದು ವೇಳೆ ಅದು ಖಾಸಗಿ ಜಾಗವಾಗಿದ್ದರೆ ಆ ಬಗ್ಗೆ ಪಾಲಿಕೆ ಸ್ಪಷ್ಟಪಡಿಸಿಕೊಳ್ಳಬೇಕು. ಹಾಗಾಗಿ ಕೂಡಲೇ ಪಾಲಿಕೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಮುಂದಿನ ಕ್ರಮ ವಹಿಸಬೇಕು. -ಸ್ಥಳೀಯರು

## ಪೆನ್ಷನ್ ಅಕೌಂಟ್‌ಗೆ ಕೆವೈಸಿ ಅಪ್‌ಡೇಟ್ ನೆಪದಲ್ಲಿ ನಿವೃತ್ತ ಅಧಿಕಾರಿಯ ಖಾತೆಯಿಂದ 4.14 ಲಕ್ಷ ರೂ. ಕನ್ನ

- ಪ್ರತಿ ನಿತ್ಯವೂ ವರದಿಯಾಗುತ್ತಿರುವ ಆನ್‌ಲೈನ್ ವಂಚನೆ
- ಪಾರ್ಟ್‌ಟೈಂ ಜಾಬ್ ಆಸೆ ತೋರಿಸಿ ಅಧ್ಯಾಪಕರಿಗೂ 1.43 ಲಕ್ಷ ಮೋಸ

ಮೈಸೂರು, ಆ.29– ಆರ್‌ಟಿಓ ನಿವೃತ್ತ ಅಧಿಕಾರಿಯ ಪೆನ್ಷನ್ ಅಕೌಂಟ್‌ಗೆ ಕೆವೈಸಿ ಅಪ್‌ಡೇಟ್ ಮಾಡಲು ತಿಳಿಸಿ ಆನ್‌ಲೈನ್ ಮೂಲಕ 4.14 ಲಕ್ಷ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿರುವ ಬಗ್ಗೆ ವರದಿಯಾಗಿದೆ.

ಕೆ.ಆರ್.ನಗರ ನಿವಾಸಿ, ಆರ್‌ಟಿಓ ನಿವೃತ್ತ ಅಧಿಕಾರಿ ಜಲೀಲ್ ಅಹಮದ್(70) ವಂಚನೆಗೆ ಒಳಗಾದವರಾಗಿದ್ದು, ಇವರ ಮೊಬೈಲ್‌ಗೆ 9163038380 ಸಂಖ್ಯೆಯಿಂದ ಕರೆ ಮಾಡಿದ ವ್ಯಕ್ತಿಯು ತಾನು ಎಸ್‌ಬಿಐ ಬ್ರಾಂಚ್‌ನಿಂದ ಮಾತನಾಡುವುದಾಗಿ ತಿಳಿಸಿ, ಅವರ ಪೆನ್ಷನ್ ಅಕೌಂಟ್‌ಗೆ ಕೆವೈಸಿ ಅಪ್‌ಡೇಟ್ ಮಾಡುವಂತೆ ಲಿಂಕ್ ಒಂದನ್ನು ವಾಟ್ಸ್‌ಅಪ್‌ಗೆ ಕಳುಹಿಸಿದ್ದಾನೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿ ಕೆವೈಸಿ ಅಪ್‌ಡೇಟ್ ಮಾಡುತ್ತಿದ್ದಂತೆಯೇ ಅವರ ಬ್ಯಾಂಕ್ ಅಕೌಂಟ್‌ನಿಂದ 4,14,957 ರೂ. ಅಕ್ರಮವಾಗಿ ವರ್ಗಾವಣೆ ಆಗಿದೆ. ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಅಧ್ಯಾಪಕರೊಬ್ಬರಿಗೆ ಪಾರ್ಟ್‌ಟೈಂ ಜಾಬ್ ನೀಡುವುದಾಗಿ ನಂಬಿಸಿ ಆನ್‌ಲೈನ್ ಮೂಲಕ 1.43 ಲಕ್ಷ ರೂ. ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳಲಾಗಿದೆ. ಮೈಸೂರಿನ ಹೂಟಗಳ್ಳಿ ನಿವಾಸಿ, ಅಧ್ಯಾಪಕ ಹೆಚ್.ಎಸ್.ಶ್ರೀಕಾಂತ್(35) ಅವರ ಮೊಬೈಲ್‌ಗೆ ಕರೆ ಮಾಡಿದ ವ್ಯಕ್ತಿ ಪಾರ್ಟ್‌ಟೈಂ ಜಾಬ್ ನೀಡುವುದಾಗಿ ಲಿಂಕ್ ಒಂದನ್ನು ವಾಟ್ಸ್‌ಅಪ್‌ಗೆ ರವಾನೆ ಮಾಡಿದ್ದಾನೆ. ಅವರು ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಟೆಲಿಗ್ರಾಂ ಪೇಜ್ ಒಂದು ತೆರೆದುಕೊಂಡಿದೆ. ಅದರಲ್ಲಿ ತಿಳಿಸಿದಂತೆ ಟಾಸ್ಕ್ ನಿರ್ವಹಿಸಿದಾಗ ಶ್ರೀಕಾಂತ್ ಅವರ ಖಾತೆಯಿಂದ 1,43,549 ರೂ. ವರ್ಗಾವಣೆಯಾಗಿದೆ. ಈ ಸಂಬಂಧ ಮೈಸೂರು ನಗರ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಸ್‌ನಲ್ಲಿ ಗೃಹಿಣಿಯ ವ್ಯಾನಿಟಿ ಬ್ಯಾಗ್‌ನಿಂದ 5.52 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಆ.29– ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಗೃಹಿಣಿಯೊಬ್ಬರ ವ್ಯಾನಿಟಿ ಬ್ಯಾಗ್‌ನಿಂದ 5.52 ಲಕ್ಷ ರೂ. ಮೌಲ್ಯದ 138 ಗ್ರಾಂ. ಚಿನ್ನಾಭರಣ ದೋಚಿದ ಬಗ್ಗೆ ವರದಿಯಾಗಿದೆ. ಚಾಮರಾಜನಗರ ಭ್ರಮರಾಂಭ ಬಡಾವಣೆ ನಿವಾಸಿ, ಜ. ಭಾರತಿ(58) ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಆ.20ರಂದು ಸಂಜೆ ಚಾಮರಾಜನಗರದಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮೈಸೂರಿಗೆ ಆಗಮಿಸಿದ್ದರು. ಅವರು ಮೈಸೂರಿಗೆ ತಲುಪಿದ ನಂತರ ವ್ಯಾನಿಟಿ ಬ್ಯಾಗ್ ಚೆಕ್ ಮಾಡಿದಾಗ ಅದರಲ್ಲಿ ಬಾಕ್ಸ್‌ನಲ್ಲಿ ಇಟ್ಟಿದ್ದ ಚಿನ್ನಾಭರಣ ಕಾಣೆಯಾಗಿರುವುದು ಗೊತ್ತಾಗಿದೆ. ತಾವು ಬಸ್‌ನಲ್ಲಿ ಪ್ರಯಾಣಿಸುವಾಗ ಸುಮಾರು 40–45 ವರ್ಷ ವಯಸ್ಸಿನ ಮಹಿಳೆಯೊರ್ವಳು ತಮ್ಮ ಬಳಿ ನಿಂತಿದ್ದು, ಆಕೆ ಪದೇ ಪದೆ ತನ್ನ ಗಮನವನ್ನು ಬೇರೆಡೆ ಸೆಳೆಯುತ್ತಿದ್ದಳು. ಆಕೆಯೇ ವ್ಯಾನಿಟಿ ಬ್ಯಾಗ್ ಜಿಪ್‌ಅನ್ನು ಎಳೆದು ಚಿನ್ನಾಭರಣವಿದ್ದ ಬಾಕ್ಸ್ ಕಳವು ಮಾಡಿರಬಹುದೆಂದು ಆ.26ರಂದು ಭಾರತಿ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಕೆಆರ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

## ಪತಿಯಿಂದ ಮಚ್ಚಿನಿಂದ ಕೊಚ್ಚಿ ಪತ್ನಿ ಹತ್ಯೆ

ಮೈಸೂರು, ಆ.29– ವ್ಯಕ್ತಿಯೋರ್ವ ತನ್ನ ಪತ್ನಿಯನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿದ ಘಟನೆ ಮೈಸೂರಿನ ಬನ್ನಿಮಂಟಪ ಸಿ ಲೇಔಟ್‌ನಲ್ಲಿ ವರದಿಯಾಗಿದೆ.

ಮೂಲತಃ ಚಾಮರಾಜನಗರ ಜಿಲ್ಲೆ ಯಳಂದೂರು ತಾಲೂಕು ಮದ್ದೂರು ಗ್ರಾಮದ ರಾಜೇಶ್ (35) ಎಂಬಾತನೇ ತನ್ನ ಪತ್ನಿ ರಾಧಾ(29) ಅವರನ್ನು ಕೊಚ್ಚಿ ಕೊಲೆ ಮಾಡಿದವನಾಗಿದ್ದು, ಈ ದಂಪತಿ ಬನ್ನಿಮಂಟಪ ಸಿ ಲೇಔಟ್‌ನಲ್ಲಿರುವ ಶ್ರೀಮತಿ ಹೆಚ್.ಬಿ.ಮಮತಾ ಎಂಬುವರ ಮನೆಯ ಕಾರ್‌ಶೆಡ್‌ನಲ್ಲಿ ವಾಸವಿದ್ದರು. ರಾಧಾ, ಮಮತಾ ಅವರ ಮನೆಗೆಲಸ ಮಾಡಿಕೊಂಡಿದ್ದರು. ಪತ್ನಿ ಮೇಲೆ ಅನುಮಾನಗೊಂಡಿದ್ದ ರಾಜೇಶ್ ಪದೇ ಪದೆ ಆಕೆಯೊಂದಿಗೆ ಜಗಳವಾಡುತ್ತಿದ್ದ ಎನ್ನಲಾಗಿದ್ದು, ಕಳೆದ ವರ್ಷ ಪತ್ನಿ ಮೇಲೆ ಈತ ಮಾರಣಾಂತಿಕ ಹಲ್ಲೆ ನಡೆಸಿದ್ದು, ಆ ಸಂದರ್ಭದಲ್ಲಿ ಮಮತಾ ಅವರೇ ರಾಧಾಳಿಗೆ ಚಿಕಿತ್ಸೆ ಕೊಡಿಸಿದ್ದರು ಎಂದು ಹೇಳಲಾಗಿದೆ.

ಪತ್ನಿಯ ಜೊತೆ ಜಗಳ ಮಾಡಿಕೊಂಡು ಊರಿಗೆ ಹೋಗಿದ್ದ ರಾಜೇಶ್ ಆ.25ರಂದು ಹಿಂತಿರುಗಿದ್ದು, ಆ.27ರಂದು ಬೆಳಗ್ಗೆ 6.30ರ ಸುಮಾರಿನಲ್ಲಿ ಆತನ ಮಗ ಮಮತಾ ಅವರ ಮನೆಗೆ ಓಡಿಬಂದು ತಾಯಿಯನ್ನು ತನ್ನ ತಂದೆ ಹೊಡೆಯುತ್ತಿದ್ದಾನೆ ಎಂದು ತಿಳಿಸಿದ್ದಾನೆ. ಆಗ ಮಮತಾ ಅವರು ಕಾರ್‌ಶೆಡ್‌ಗೆ ಹೋದಾಗ ರಾಜೇಶ್ ಕೈಯಲ್ಲಿ ಮಚ್ಚು ಹಿಡಿದು ಹೊರಬಂದಿದ್ದಾನೆ. ನೆರೆಹೊರೆಯವರನ್ನು ಕರೆದುಕೊಂಡು ಶೆಡ್ ಪ್ರವೇಶಿಸಿದ ಮಮತಾ ರಕ್ತಸಿಕ್ತವಾಗಿ ಬಿದ್ದಿದ್ದ ರಾಧಾ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಾಗಲೇ ಅಷ್ಟರಲ್ಲಿ ಆಕೆ ಸಾವನ್ನಪ್ಪಿದ್ದರು. ಈ ಸಂಬಂಧ ಎನ್‌ಆರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬೀಗ ಒಡೆದು 7 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಮೈಸೂರು, ಆ.29– ಹಾಡಹಗಲೇ ಮನೆ ಬೀಗ ಒಡೆದು 7 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಾಯ್ಡುನಗರದಲ್ಲಿ ವರದಿಯಾಗಿದೆ. ನೀರಾವರಿ ಇಲಾಖೆಯಲ್ಲಿ ಶೀಘ್ರಲಿಪಿಗಾರರಾಗಿ ಕೆಲಸ ಮಾಡುತ್ತಿರುವ ಎಲ್.ಶಿವಮ್ಮ(48) ಅವರು ಆ.27ರಂದು ಬೆಳಗ್ಗೆ ಕೆಲಸಕ್ಕೆ ಹೋಗಿದ್ದು, ಅವರ ಪುತ್ರಿ ಮಧ್ಯಾಹ್ನ 1.45ರ ಸುಮಾರಿನಲ್ಲಿ ಶಾಲೆಯಿಂದ ಮನೆಗೆ ಬಂದಾಗ ಬೀಗ ಮುರಿದಿರುವುದು ಗೊತ್ತಾಗಿದೆ. ಮನೆಯ ಬೀರುವಿನಲ್ಲಿದ್ದ 7 ಲಕ್ಷ ರೂ. ಮೌಲ್ಯದ 178 ಗ್ರಾಂ ಚಿನ್ನಾಭರಣ ಹಾಗೂ ಸಾವಿರ ರೂ. ನಗದು ಕಳವು ಮಾಡಿದ್ದಾರೆ. ಈ ಸಂಬಂಧ ಎನ್‌ಆರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿಕ್ಷಣ ಸಚಿವರ ಸಂಬಂಧಿ ಎಂದು ಹೇಳಿಕೊಂಡು

## ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಬಳಿ ಹಣಕ್ಕೆ ಡಿಮ್ಯಾಂಡ್: ಪೊಲೀಸರಿಗೆ ದೂರು

ಮೈಸೂರು, ಆ.29(ಎಸ್‌ಪಿಎನ್)– ಶಿಕ್ಷಣ ಸಚಿವರ ಸಂಬಂಧಿ ಎಂದು ಹೇಳಿಕೊಂಡು ಅಪರಿಚಿತ ವ್ಯಕ್ತಿಯೊಬ್ಬ ಹಣಕ್ಕಾಗಿ ಪೀಡಿಸುತ್ತಿದ್ದಾನೆ ಎಂದು ಆರೋಪಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಂಟಿ ನಿರ್ದೇಶಕಿ ಭಾರತಿ ಅವರು ಲಕ್ಷ್ಮೀಪುರಂ ಪೊಲೀಸರಿಗೆ ಸೋಮವಾರ ದೂರು ನೀಡಿದ್ದಾರೆ.



ಕೆಲ ದಿನಗಳ ಹಿಂದೆ ರಘುನಾಥ್ ಎಂಬ ಹೆಸರಿನ ಅಪರಿಚಿತ ವ್ಯಕ್ತಿ ತನ್ನ ಕಚೇರಿಗೆ ಆಗಮಿಸಿ, ನನ್ನ ಮೊಬೈಲ್‌ಗೆ ಕರೆ ಮಾಡಿ, ನಾನು ಶಿಕ್ಷಣ ಸಚಿವರ ಸಂಬಂಧಿಯಾಗಿದ್ದು, ನಿಮ್ಮ ಹುದ್ದೆಗೆ ಬೇರೊಬ್ಬರವರು ವರ್ಗವಾಗಿ ಬರಲು ಪ್ರಯತ್ನಿಸುತ್ತಿದ್ದಾರೆ. ನೀವು ಇದೇ ಹುದ್ದೆಯಲ್ಲಿ ಮುಂದುವರೆಯಲು ಬೇಕಾದರೆ, ಇಂತಿಷ್ಟು ಹಣ ನೀಡಬೇಕು. ಇಲ್ಲದಿದ್ದರೆ, ಬೇರೆಯವರು ಈ ಹುದ್ದೆಗೆ ವರ್ಗಾವಣೆ ಮಾಡಿಸಿಕೊಂಡು ಬರುತ್ತಾರೆ ಎಂದು ಹಣದ ಬೇಡಿಕೆ ಇಟ್ಟಿದ್ದಾನೆ.

ಈತನ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಪೊಲೀಸರಲ್ಲಿ ಮನವಿ ಮಾಡಿದ್ದು, ಕಚೇರಿಗೆ ಬಂದಿದ್ದ ವ್ಯಕ್ತಿಯ ಚಲನ-ವಲನ ದೃಶ್ಯಗಳು ಸಿಸಿಟಿವಿ ಸೆರೆಯಾಗಿರುವ ಫುಟೇಜ್ ಬಗ್ಗೆಯೂ ಉಲ್ಲೇಖಿಸಿ, ಲಕ್ಷ್ಮೀಪುರಂ ಠಾಣೆಯಲ್ಲಿ ದೂರು ನೀಡಿದ್ದಾರೆ.

ಅಲ್ಲದೆ, ಈ ವ್ಯಕ್ತಿ ಮೈಸೂರು, ಕೊಡಗು, ಚಿಕ್ಕಮಗಳೂರಿನಲ್ಲೂ ಇದೇ ರೀತಿ ಕೆಲ ಅಧಿಕಾರಿಗಳನ್ನು ಮೊಬೈಲ್ ಮೂಲಕ ಸಂಪರ್ಕಿಸಿ, ಹಣದ ಬೇಡಿಕೆ ಸಲ್ಲಿಸಿದ್ದಾನೆ ಎಂಬ ಮಾತುಗಳು ಶಿಕ್ಷಣ ಇಲಾಖೆ ಅಧಿಕಾರಿಗಳ ವಲಯದಲ್ಲಿ ಕೇಳಿ ಬರುತ್ತಿದೆ.




ಮೈಸೂರು ಚಾಮರಾಜಪುರಂನ ಬಿಜೆಪಿ ಕಚೇರಿಯಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಉಚಿತವಾಗಿ ಹೊಲಿಗೆ ಯಂತ್ರವನ್ನು ಸೋಮವಾರ ವಿತರಿಸಲಾಯಿತು. ಈ ವೇಳೆ ಬಿಜೆಪಿ ನಗರ ಘಟಕದ ಅಧ್ಯಕ್ಷ ಟಿ.ಎಸ್.ಶ್ರೀವತ್ಸ, ಉಪಾಧ್ಯಕ್ಷ ಗೋಪಾಲರಾಜ ಅರಸು, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಒಬಿಸಿ ಮೋರ್ಚಾದ ಅಧ್ಯಕ್ಷ ಜೋಗಿ ಮಂಜು, ಎಸ್ಸಿ ಮೋರ್ಚಾದ ಪ್ರಧಾನ ಕಾರ್ಯದರ್ಶಿ ಜಯರಾಮ್, ಸೋಮಶೇಖರ್, ಸ್ವಾಮಿ, ಸತೀಶ್ ಇದ್ದರು.

## ಮೈವಿವಿಯಲ್ಲಿ ಅನೇಕ ಸಾಧಕರು ಅಧ್ಯಯನ ಮಾಡಿದ ಹೆಗ್ಗಳಿಕೆ

ಸಂಜೆ ಕಾಲೇಜು ವಾರ್ಷಿಕೋತ್ಸವ, ಹಿರಿಯ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಡಾ.ದೇವರಾಜೇಗೌಡ ಸಂತಸ



ಮೈಸೂರು, ಆ.29(ಎಸ್‌ಪಿಎನ್)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅನೇಕ ಸಾಧಕರು ವ್ಯಾಸಂಗ ಮಾಡಿದ್ದಾರೆ ಎಂಬುದು ಇಂದಿನ ವಿದ್ಯಾರ್ಥಿಗಳಿಗೆ ದಾರಿದೀಪವಾಗಲಿ ಎಂದು ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಡಾ.ಹೆಚ್.ಸಿ.ದೇವರಾಜೇಗೌಡ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಸಂಜೆ ಕಾಲೇಜಿನ ವಾರ್ಷಿಕೋತ್ಸವ ಮತ್ತು ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡಿಗೆ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮೈಸೂರು ವಿವಿ ಹಲವು ಸಾಧಕರನ್ನು ಹುಟ್ಟು ಹಾಕಿದೆ. ಅದರಲ್ಲಿ ರಾಜಕೀಯದಲ್ಲಿ ಗುರುತಿಸಿಕೊಂಡಿದ್ದ ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಎಸ್.ಎಂ.ಕೃಷ್ಣ, ಎಸ್.ಬಂಗಾರಪ್ಪ ಸೇರಿದಂತೆ ಹಲವು ಸಾಧಕರು ನಮ್ಮ ವಿವಿಯ ವಿದ್ಯಾರ್ಥಿಗಳು ಎಂದು ಹೇಳಿಕೊಳ್ಳಲು ಸಂತೋಷವಾಗುತ್ತದೆ ಎಂದು ತಿಳಿಸಿದರು.

ಹಿರಿಯ ವಿದ್ಯಾರ್ಥಿಗಳು ಅಂತಿಮ ವರ್ಷದ ಪದವಿಯನ್ನು ಮುಗಿಸಿದ್ದಾರೆ. ಅದರಲ್ಲಿ ಕೆಲವರು ಮುಂದಿನ ವ್ಯಾಸಂಗಕ್ಕೆ, ಇನ್ನು ಕೆಲವರು ಉದ್ಯೋಗಕ್ಕೆ ತಯಾರಿ ನಡೆಸಿದ್ದಾರೆ. ಅಲ್ಲದೆ, ಸಂಜೆ ಕಾಲೇಜಿನಲ್ಲಿ ವ್ಯಾಸಂಗ ಮಾಡುವ ಬಹುತೇಕ ವಿದ್ಯಾರ್ಥಿಗಳು ಬೆಳಗ್ಗೆ ಉದ್ಯೋಗ ಮುಗಿಸಿ, ಸಂಜೆ ವೇಳೆಯಲ್ಲಿ ಅಧ್ಯಯನ ನಡೆಸುತ್ತಿರುವುದು ಸಂತೋಷ ಸಂಗತಿ ಎಂದರು.

ಸಂಜೆ ಕಾಲೇಜಿನ ವಿದ್ಯಾರ್ಥಿಗಳಿಗೂ ಬೆಳಗ್ಗೆ ಓದುವ ವಿದ್ಯಾರ್ಥಿಗಳಿಗೂ ಸಾಕಷ್ಟು ವ್ಯತ್ಯಾಸಗಳಿವೆ. ಸಂಜೆ ಕಾಲೇಜಿನ ವಿದ್ಯಾರ್ಥಿಗಳು ವೃತ್ತಿ ಜೊತೆಗೆ ಕಷ್ಟಪಟ್ಟು ವ್ಯಾಸಂಗ ಮಾಡುತ್ತಿದ್ದಾರೆ. ಹಾಗಾಗಿ ವಿದ್ಯಾರ್ಥಿಗಳು ಕಷ್ಟಪಟ್ಟು ವ್ಯಾಸಂಗ ಮಾಡಿ ತಮ್ಮ ಮುಂದಿನ ಜೀವನ ರೂಪಿಸಿಕೊಳ್ಳುವಂತೆ ಮನವಿ ಮಾಡಿದರು.

ಈ ವೇಳೆ ಕಲಾವಿದ ಚಂದನ್ ಆಚಾರ್, ಪಠೇತರ ಚಟುವಟಿಕೆ ಸಮಿತಿ ಸಂಚಾಲಕ ಹಾಗೂ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ರಾಚಯ್ಯ ಸೇರಿದಂತೆ ಅಧ್ಯಾಪಕರು, ಅಧ್ಯಾಪಕೇತರರು, ಸಂಶೋಧಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕೇರಳದಲ್ಲಿ ಭಾರಿ ಮಳೆ: ಭೂಕುಸಿತದಿಂದ ಒಂದೇ ಕುಟುಂಬದ ಐವರು ಸಾವು

ಇಡುಕ್ಕಿ: ಇಲ್ಲಿನ ಹಳ್ಳಿಯೊಂದರಲ್ಲಿ ಭಾರಿ ಮಳೆಯಿಂದ ಸೋಮವಾರ ನಸುಕಿನಲ್ಲಿ ಉಂಟಾದ ಭೂಕುಸಿತದಿಂದಾಗಿ ಒಂದೇ ಕುಟುಂಬದ ಐವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ತೋಡುಪುಳ ಸಮೀಪದ ಕಂಜರ್ ಗ್ರಾಮದಲ್ಲಿ ಈ ಘಟನೆ ವರದಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರನ್ನು ನಿವಾಸಿಗಳಾದ ತಂಕಮ್ಮ (80), ಆಕೆಯ ಮಗ ಸೋಮನ್ (52), ಆತನ ಪತ್ನಿ ಶಾಜಿ (50), ಅವರ ಮಕ್ಕಳಾದ ಶಿಮಾ (30) ಮತ್ತು ದೇವಾನಂದ್ (5) ಎಂದು ಗುರುತಿಸಲಾಗಿದೆ.

ಬೆಳಗಿನ ಜಾವ 2.30ರ ಸುಮಾರಿಗೆ ಕುಟುಂಬದ ಮನೆಯಲ್ಲಿ ದುರಂತ ಸಂಭವಿಸಿದೆ. ರಕ್ಷಣಾ ಸಿಬ್ಬಂದಿ ಐವರ ಮೃತದೇಹಗಳನ್ನು ಹೊರತೆಗೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕೇರಳದ ಗುಡ್ಡಗಾಡು ಪ್ರದೇಶಗಳಲ್ಲಿ ಕಳೆದ ಎರಡು ದಿನಗಳಿಂದ ಭಾರಿ ಮಳೆಯಾಗುತ್ತಿದೆ. ಕೇರಳ ಮತ್ತು ಲಕ್ಷದ್ವೀಪದ ಕರಾವಳಿಯಲ್ಲಿ ಸೆಪ್ಟೆಂಬರ್ 1 ರವರೆಗೆ ಮೀನುಗಾರಿಕೆಯನ್ನು ಅಧಿಕಾರಿಗಳು ನಿಷೇಧಿಸಿದ್ದಾರೆ.

## ವಿದ್ಯಾರ್ಥಿಗಳು ಭವ್ಯಭಾರತ ಕಟ್ಟುವ ಶಿಲ್ಪಿಗಳಾಗಬೇಕು

ಎಂಎಲ್‌ಸಿ ಸಿ.ಎನ್. ಮಂಜೇಗೌಡ



ಸಮಾರಂಭದಲ್ಲಿ ಎಂಎಲ್‌ಸಿ ಮಂಜೇಗೌಡ ಹಾಗೂ ಐಪಿಎಸ್ ಅಧಿಕಾರಿ ರವಿ ಡಿ. ಚೆನ್ನಣ್ಣನವರ್ ಅವರನ್ನು ಸನ್ಮಾನಿಸಲಾಯಿತು

ಮೈಸೂರು, ಆ.29– ವಿದ್ಯಾರ್ಥಿಗಳು ಭವ್ಯಭಾರತ ಕಟ್ಟುವ ಶಿಲ್ಪಿಗಳಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಕರೆ ನೀಡಿದರು.

ಕರ್ನಾಟಕ ರಾಜ್ಯ ನಾಯಕರ ಯುವಸೇನೆ. ರವಿ ಡಿ.ಚೆನ್ನಣ್ಣನವರ್ ಅಭಿಮಾನಿ ಬಳಗ, ಸತೀಶ್ ಜಾರಕಿ ಹೋಳಿ ಅಭಿಮಾನಿ ಬಳಗದ ವತಿಯಿಂದ ವಿಜಯನಗರ 2ನೇ ಹಂತದಲ್ಲಿರುವ ವಾಲ್ಮೀಕಿ ಭವನದಲ್ಲಿ ನಡೆದ ಪ್ರತಿಭಾ ಪುರಸ್ಕಾರ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಸಂಗೊಳ್ಳಿ ರಾಯಣ್ಣ, ಬಸವಣ್ಣ, ಕಿತ್ತೂರು ರಾಣಿ ಚೆನ್ನಮ್ಮ, ಅಂಬೇಡ್ಕರ್‌ರವರ ಬಗ್ಗೆ ಎಲ್ಲರಿಗೂ ಗೊತ್ತಿದೆ ಆದರೆ ನಿಮ್ಮ ತಾತ, ಮುತ್ತಾತರ ಹೆಸರೇ ನಿಮಗೆ ಗೊತ್ತಿರುವುದಿಲ್ಲ. ಏಕೆಂದರೆ ಅವರು ಸಮಾಜ ನೆನೆಯುವಂತಹ ಕೆಲಸಗಳನ್ನು ಮಾಡಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಜೀವನದಲ್ಲಿ ಗುರಿ ಇಟ್ಟುಕೊಂಡರೆ ಸಾಲದು, ಶ್ರಮವಹಿಸಿ ಸಾಧನೆ ಮಾಡಬೇಕು. ರವಿ ಡಿ. ಚೆನ್ನಣ್ಣನವರ್‌ರಂತಹ ಅಧಿಕಾರಿಗಳನ್ನು ಮಾದರಿಯಾಗಿಟ್ಟುಕೊಂಡು ಚೆನ್ನಾಗಿ ಓದಿ, ಐಎಎಸ್, ಐಪಿಎಸ್, ಕೆಎಎಸ್ ಅಧಿಕಾರಿಗಳಾಗಿ ಆಯ್ಕೆಯಾಗಿ ಉತ್ತಮ ಸಮಾಜವನ್ನು ನಿರ್ಮಾಣ ಮಾಡಬೇಕು. 'ರೀಡರ್ ಇಸ್ ಎ ಲೀಡರ್' ಎಂಬಂತೆ ಪುಸ್ತಕಗಳನ್ನು ಹೆಚ್ಚಾಗಿ ಓದಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಜ್ಞಾನ ಬಂಡಾರವನ್ನು ತುಂಬಿಕೊಳ್ಳಬೇಕು ಎಂದು ಸಲಹೆ ನೀಡದರು.

ಸಮಾರಂಭದಲ್ಲಿ ಮಾಜಿ ಸಚಿವ ಸತೀಶ್ ಜಾರಕಿಹೋಳಿ ಶಾಸಕ, ಅನಿಲ್ ಚಿಕ್ಕಮಾದು, ಐಪಿಎಸ್ ಅಧಿಕಾರಿ ರವಿ ಡಿ.ಚೆನ್ನಣ್ಣನವರ್ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಡಿ. ರವಿಶಂಕರ, ನಗರ ಪಾಲಿಕೆ ಸದಸ್ಯ ಲೋಕೇಶ್ ಪಿಯ, ಕಾಟೂರು ದೇವರಾಜ್ ಹಾಗೂ ಪದಾಧಿಕಾರಿಗಳು ಹಾಜರಿದ್ದರು.

# ನವರಾತ್ರಿಗೆ 5 ದಿನ ಮುನ್ನ ರಾಜಮಾರ್ಗದಲ್ಲಿ ದೀಪಾಲಂಕಾರಕ್ಕೆ ಮನವಿ

ಬೆಳಕಿಗೆ ಗಜಪಡೆ ಒಗ್ಗಲೆಂಬ ಉದ್ದೇಶದಿಂದ ಅರಣ್ಯ ಇಲಾಖೆ ಕೋರಿಕೆ

–ಎಂ.ಟಿ.ಯೋಗೇಶ್ ಕುಮಾರ್

ಮೈಸೂರು, ಆ.29– ಮೈಸೂರು ದಸರಾ ಮಹೋತ್ಸವದ ಆಕರ್ಷಕ ಜಂಬೂಸವಾರಿ ಸಾಗುವ ರಾಜಮಾರ್ಗಕ್ಕೆ ನವರಾತ್ರಿಗೆ 5 ದಿನ ಮುಂಚಿತವಾಗಿ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡುವಂತೆ ಅರಣ್ಯ ಇಲಾಖೆ ಅಧಿಕಾರಿಗಳು ಜಿಲ್ಲಾಡಳಿತವನ್ನು ಕೋರಿದ್ದಾರೆ.

ಕೊರೊನಾ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷ ಅರಮನೆ ಆವರಣಕ್ಕೆ ಮಾತ್ರ ಜಂಬೂಸವಾರಿ ಸೀಮಿತವಾಗಿತ್ತು. ಪರಿಣಾಮ ಅರಮನೆ ಅಂಗಳದಿಂದ ಬನ್ನಿಮಂಟಪದವರೆಗಿನ ರಾಜಮಾರ್ಗದಿಂದ ಗಜಪಡೆ ದೂರ ಉಳಿದಿತ್ತು. ಈ ಬಾರಿ ರಾಜಮಾರ್ಗದಲ್ಲಿ ತಾಲೀಮು ನಡೆಸಲಾಗುತ್ತಿದೆಯಾದರೂ ಜಗಮಗಿಸುವ ವಿದ್ಯುತ್ ದೀಪಾಲಂಕಾರಕ್ಕೆ ಒಗ್ಗಿಸುವುದು ಮುಖ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅರಣ್ಯ ಅಧಿಕಾರಿಗಳು ಈ ವಿಶೇಷ ಮನವಿ ಮಾಡಿದ್ದಾರೆ.

ಈ ಬಾರಿ ಸಾಂಸ್ಕೃತಿಕ ಕಾರ್ಯಕ್ರಮಗಳು, ದಸರಾ ವಸ್ತು ಪ್ರದರ್ಶನ, ಫಲ–ಪುಷ್ಪ ಪ್ರದರ್ಶನ, ಕ್ರೀಡೆ, ಆಹಾರ ಮೇಳ, ಮಹಿಳಾ ದಸರಾ ಹೀಗೆ ಹತ್ತಾರು ಕಾರ್ಯಕ್ರಮಗಳನ್ನು ಆಯೋಜಿಸುವುದರಿಂದ ಸಹಜವಾಗಿ ಹೆಚ್ಚು ಪ್ರವಾಸಿಗರು ಆಗಮಿಸುತ್ತಾರೆ. ಹಾಗೆಯೆ ವಿದ್ಯುತ್ ದೀಪಾಲಂಕಾರ ಸವಿಯಲು ಜನ ಸಾಗರವೇ ಹರಿದು ಬರುವ ನಿರೀಕ್ಷೆಯಿದೆ. ಬನ್ನಿಮಂಟಪದಿಂದ ವಾಪಸ್ಸಾಗುವಾಗ ಇಂತಹ ವೈಭವದ ಸನ್ನಿವೇಶದ ನಡುವೆ ಗಜಪಡೆ ಹೆಜ್ಜೆ ಹಾಕಿ 3 ವರ್ಷವಾಗಿದೆ. ಹಾಗಾಗಿ, ವಿದ್ಯುತ್ ದೀಪಾಲಂಕೃತ ಮಾರ್ಗದಲ್ಲಿ ಹೆಚ್ಚಿನ ತಾಲೀಮು ನಡೆಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಜಂಬೂಸವಾರಿ ಮಾರ್ಗಕ್ಕೆ ಮಾತ್ರ 5 ದಿನ ಮುಂಚಿತವಾಗಿ ದೀಪಾಲಂಕಾರ ಮಾಡುವಂತೆ ಕೇಳಲಾಗಿದೆ.

ಈಗಾಗಲೇ ಮೊದಲ ತಂಡದ ಆನೆಗಳು ಸಂಜೆ ವೇಳೆ ತಾಲೀಮಿನಲ್ಲಿ ಪಾಲ್ಗೊಳ್ಳುತ್ತಿದ್ದು, ಬೀದಿ ದೀಪ, ವಾಹನಗಳ ಲೈಟ್‌ಗೆ ಒಗ್ಗಿಕೊಂಡಿವೆ. ವಾಹನಗಳ ಓಡಾಟ, ಬೆಳಕಿನ ಪ್ರಜ್ವಲತೆಗೆ ವಿಚಲಿತಗೊಳ್ಳದೆ ಸಹಜವಾಗಿ ವರ್ತಿಸುತ್ತಿವೆ. ಆದರೂ ಮೊದಲ ಬಾರಿಗೆ ದಸರಾಗೆ ಆಗಮಿಸಿರುವ ಆನೆಗಳಿಗೆ ಇನ್ನೂ ಹೆಚ್ಚಿನ ತಾಲೀಮು ಅಗತ್ಯವಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ರಾಜಮಾರ್ಗದ ದೀಪಾಲಂಕಾರಕ್ಕೆ ಕೋರಿದ್ದಾರೆ. ಗಜಪಡೆಯ ಹಿತದೃಷ್ಟಿಯಿಂದ ಜಿಲ್ಲಾಡಳಿತ ಸಕಾರಾತ್ಮಕವಾಗಿ ಸ್ಪಂದಿಸುವ ನಿರೀಕ್ಷೆ ಇದೆ.

**ಮೂರನೇ ಹಂತದ ತಾಲೀಮು:** ದಸರಾ ಗಜಪಡೆಗೆ ಈಗಾಗಲೇ ಎರಡು ಹಂತದ ಭಾರ ಹೊರಿಸುವ ತಾಲೀಮು ಪೂರ್ಣಗೊಂಡಿದ್ದು, ಇಂದಿನಿಂದ ಮೂರನೇ ಹಂತದ ತಾಲೀಮು ಆರಂಭಿಸಲಾಗಿದೆ. ಜಂಬೂಸವಾರಿ ಸಮೀಪಿಸುತ್ತಿರುವುದರಿಂದ ಚಿನ್ನದ ಅಂಬಾರಿ ತೂಕದ ಪ್ರಮಾಣದಷ್ಟು ಭಾರ ಹೊರಿಸಿ ತಾಲೀಮು ನಡೆಸಲಾಗುತ್ತದೆ. ಮೂರನೇ ಹಂತದ ತಾಲೀಮಲ್ಲಿ 750 ಕೆ.ಜಿ ತೂಕದ ಮರಳಿನ ಮೂಟೆಗಳನ್ನಿಟ್ಟು ಜಂಬೂಸವಾರಿ ಮಾರ್ಗದಲ್ಲಿ ಹೆಜ್ಜೆ ಹಾಕಿಸಲಾಗುತ್ತದೆ.

**ಸೆ.5ರಿಂದ ಮರದ ಅಂಬಾರಿ:** ಮೂರನೇ ಹಂತದ ಭಾರ ಹೊರುವ ತಾಲೀಮು ಸೆ.4ರಂದು ಪೂರ್ಣಗೊಳ್ಳಲಿದ್ದು, ಸೆ.5ರಿಂದ ಮರದ ಅಂಬಾರಿ ಹೊರಿಸಿ 4ನೇ ಹಂತದ ತಾಲೀಮು ನಡೆಸಲಾಗುತ್ತದೆ ಮೊದಲ ತಂಡದಲ್ಲಿ ಆಗಮಿಸಿರುವ ಅಭಿಮನ್ಯು, ಗೋಪಾಲಸ್ವಾಮಿ, ಧನಂಜಯ, ಭೀಮ ಹಾಗೂ ಮಹೇಂದ್ರ ಆನೆಗಳಿಗೆ ಮರದ ಅಂಬಾರಿ ಹೊರಿಸುವ ತಾಲೀಮು ನಡೆಸಲು ಅರಣ್ಯ ಅಧಿಕಾರಿಗಳು ನಿರ್ಧರಿಸಿದ್ದಾರೆ.

**ಸೆ.7ಕ್ಕೆ ಎರಡನೇ ತಂಡ:** ದಸರಾ ಗಜಪಡೆಯ 2ನೇ ತಂಡವನ್ನು ಸೆ.7ರಂದು ಕರೆತರಲು ಅರಣ್ಯ ಇಲಾಖೆ ನಿರ್ಧರಿಸಿದೆ. ದುಬಾರೆ ಕ್ಯಾಂಪ್‌ನಿಂದ ವಿಕ್ರಮ್(59 ವರ್ಷ), ಶ್ರೀರಾಮ(40) ಹಾಗೂ ವಿಜಯ(63) ಮತ್ತು ರಾಂಪುರ ಕ್ಯಾಂಪ್‌ನಿಂದ ಪಾರ್ಥಸಾರಥಿ(18) ಆನೆಗಳನ್ನು ಅಂದು ಕರೆತರಲಾಗುತ್ತದೆ.



### ಗಣೇಶ ಚತುರ್ಥಿ ವಿಶೇಷ ಪೂಜೆ

ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಗಜಪಡೆಗೆ ಸಂಪ್ರದಾಯದಂತೆ ಗಣೇಶ ಚತುರ್ಥಿಯಂದು ವಿಶೇಷ ಪೂಜೆ ಸಲ್ಲಿಸಲಾಗುವುದು. ಅರಮನೆ ಆವರಣದಲ್ಲಿರುವ ಶ್ರೀ ಕೋಡಿ ಸೋಮೇಶ್ವರ ದೇವಸ್ಥಾನದ ಬಳಿ ಅರಣ್ಯ ಇಲಾಖೆ ವತಿಯಿಂದ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಆನೆಗಳಿಗೆ ಪೂಜೆ ನೆರವೇರಿಸಲಿದ್ದಾರೆ. ಅಂದು ತಾಲೀಮಿಗೆ ವಿನಾಯ್ತಿ ನೀಡಿ ಎಲ್ಲಾ ಆನೆಗಳಿಗೂ ವಿಶ್ರಾಂತಿ ನೀಡಲಾಗುತ್ತದೆ.

ಸೆ.5ರಿಂದ ಮರದ ಅಂಬಾರಿ ತಾಲೀಮು ನಡೆಸಲು ಸಿದ್ಧತೆ ನಡೆಸಲಾಗಿದೆ. ಸೆ.7ಕ್ಕೆ ಎರಡನೇ ತಂಡದಲ್ಲಿ 4 ಆನೆಗಳನ್ನು ಕರೆತರುವ ಆಲೋಚನೆಯಿದೆ. ಈ ಬಾರಿ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸುತ್ತಿರುವುದರಿಂದ ವಿದ್ಯುತ್ ದೀಪಾಲಂಕಾರ ನೋಡಲು ಹೆಚ್ಚಿನ ಸಂಖ್ಯೆಯಲ್ಲಿ ಜನ ಬರುತ್ತಾರೆ. ಹಾಗಾಗಿ ನವರಾತ್ರಿಗೂ 5 ದಿನ ಮುನ್ನವೇ ಜಂಬೂಸವಾರಿ ಮಾರ್ಗದಲ್ಲಿ ದೀಪಾಲಂಕಾರದ ವ್ಯವಸ್ಥೆ ಮಾಡಿಕೊಡುವಂತೆ ಕೇಳಿಕೊಂಡಿದ್ದೇವೆ. ಇದರಿಂದ ಆನೆಗಳಿಗೆ ದೀಪಾಲಂಕಾರ ಹಾಗೂ ಜನಜಂಗುಳಿಯ ಅಭ್ಯಾಸವಾದರೆ ಜಂಬೂಸವಾರಿಯಲ್ಲಿ ಆನೆಗಳು ಸರಾಗವಾಗಿ ಸಾಗಲಿದೆ. ಏಕಾಏಕಿ ದೀಪಾಲಂಕಾರದ ಬೆಳಕಿನೊಂದಿಗೆ ಜನಜಂಗುಳಿ ಕಂಡರೆ ಗಾಬರಿಯಾಗುವ ಸಾಧ್ಯತೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದವರೆಗೆ ಹೆಚ್ಚುವರಿಯಾಗಿ 5 ದಿನ ದೀಪಾಲಂಕಾರದ ವ್ಯವಸ್ಥೆಗೆ ಕೋರಲಾಗಿದೆ.

-ಡಾ.ವಿ.ಕರಿಕಾಳನ್, ಡಿಸಿಎಫ್

# ಸೆ.28ರಿಂದ 5 ದಿನ ಶ್ರೀರಂಗಪಟ್ಟಣ ದಸರಾ

## ಅಚ್ಚುಕಟ್ಟಾಗಿ ಕಾರ್ಯಕ್ರಮಗಳ ಆಯೋಜಿಸಲು ಅಧಿಕಾರಿಗಳಿಗೆ ಸಚಿವ ಗೋಪಾಲಯ್ಯ ಸೂಚನೆ

ಮಂಡ್ಯ ಆ.29– ಐತಿಹಾಸಿಕ ಶ್ರೀರಂಗಪಟ್ಟಣ ದಸರಾ ಮಹೋತ್ಸವವು ಸೆ.28ರಿಂದ ಅ.2 ರವರೆಗೆ ಐದು ದಿನಗಳ ಕಾಲ ನಡೆಯಲಿದೆ. ಜಿಲ್ಲೆಯ ಇಲಾಖಾಧಿಕಾರಿಗಳು ಜವಾಬ್ದಾರಿಯಿಂದ ದಸರಾ ಮಹೋತ್ಸವ ಆಚರಿಸಲು ಸಿದ್ಧತೆ ಕೈಗೊಳ್ಳಬೇಕು ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ ತಿಳಿಸಿದರು.

ಶ್ರೀರಂಗಪಟ್ಟಣದ ದಸರಾ ಮಹೋತ್ಸವ ಆಚರಣೆ ಸಂಬಂಧ ನಗರದ ಜಿಲ್ಲಾ ಪಂಚಾಯಿತಿ ಕಾವೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಬನ್ನಿಮಂಟಪ, ಕಲ್ಯಾಣಿಗಳಲ್ಲಿ ಹಾಗೂ ಎಲ್ಲಾ ಐತಿಹಾಸಿಕ ಸ್ಥಳಗಳಲ್ಲಿ ಸಂಪೂರ್ಣ ಸ್ವಚ್ಛಗೊಳಿಸಲು ಸೂಚಿಸಿದರು. ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಹಾಗೂ ಇನ್ನಿತರ ಮೂಲ ಸೌಕರ್ಯಗಳ ಕುರಿತು ವ್ಯವಸ್ಥಿತವಾಗಿ ಕ್ರಮವಹಿಸಿ ಎಂದರು.

ದಸರಾದಲ್ಲಿ ಆಯೋಜಿಸುವ ಕಾರ್ಯಕ್ರಮ ವೈವಿಧ್ಯಮಯವಾಗಿರಲಿ. ಜನರಿಗೆ ಮಾಹಿತಿ ಹಾಗೂ ಮನರಂಜನೆ ಎರಡು ಸಹ ದೊರಕಬೇಕು. ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿ, ಉದ್ಘಾಟನೆಯ ದಿನದಂದು 3ರಿಂದ 5ಆನೆ ಕರೆತರಬೇಕು. ಪೊಲೀಸ್ ಬ್ಯಾಂಡ್ ವ್ಯವಸ್ಥೆ, ವಿನೂತನ ಸ್ತಬ್ಧಚಿತ್ರ ರಚಿಸಬೇಕು ಎಂದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಈ ಬಾರಿ ದಸರಾ ಉದ್ಘಾಟನೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಥವಾ ಸಿಎಫ್‌ಟಿಆರ್‌ಐ ನಿರ್ದೇಶಕರನ್ನು ಆಹ್ವಾನಿಸಬೇಕು. ದಸರಾದಲ್ಲಿ ಕಾರ್ಯ ನಿರ್ವಹಿಸುವ ಗುತ್ತಿಗೆದಾರರಿಗೆ ಬಿಲ್‌ಗಳ ಪಾವತಿ ನಿಧಾನವಾಗುತ್ತಿದೆ. ಈ ಬಾರಿ ಕಲಾವಿದರು ಕಾರ್ಯಕ್ರಮ ನೀಡಿದ ತಕ್ಷಣ ಅವರಿಗೆ ಸಂಭಾವನೆ ಪಾವತಿಸಿ ಎಂದರು.

ಸಭೆಯಲ್ಲಿ ಶಾಸಕರಾದ ಎಂ.ಶ್ರೀನಿವಾಸ್, ಸುರೇಶ್‌ಗೌಡ, ಜಿಪಂ ಸಿಇಓ ಶಾಂತ ಎಲ್. ಹುಲ್ಮನಿ, ಎಸ್‌ಪಿ ಎನ್.ಯತೀಶ್, ಪಾಂಡವಪುರ ಉಪವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ, ಧಾರ್ಮಿಕ ಕ್ರಿಯಾ ಸಮಿತಿಯ ಸಂಸ್ಥಾಪಕ ಭಾನುಪ್ರಕಾಶ್ ಶರ್ಮಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



**"** ಕಳೆದ ಬಾರಿ ದಸರಾ ಆಚರಣೆಗಾಗಿ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಿಂದ 50 ಲಕ್ಷ ರೂ, ಪ್ರವಾಸೋದ್ಯಮ ಇಲಾಖೆಯಿಂದ 25ಲಕ್ಷ ರೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ 20 ಲಕ್ಷ ರೂ ಹಾಗೂ ಇತರೆ ಸಂಸ್ಥೆಗಳಿಂದ ಬಂದ ಅನುದಾನ ಕ್ರೋಢೀಕರಿಸಿ 1.5 ಕೋಟಿ ರೂ.ನಲ್ಲಿ 3 ದಿನಗಳ ಕಾಲ ವಿಜೃಂಭಣೆಯಿಂದ ಆಚರಿಸಲಾಗಿತ್ತು. ಈ ಬಾರಿ ಮೈಸೂರು ಜಿಲ್ಲಾಧಿಕಾರಿಗಳಿಂದ ಒಂದು ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇತರೆ ಇಲಾಖೆಯ ಅನುದಾನ ಪಡೆದು ವಿಜೃಂಭಣೆಯ ದಸರಾ ಆಚರಿಸಲು ಅಧಿಕಾರಿಗಳು ರೂಪುರೇಷೆ ಸಿದ್ಧಪಡಿಸಿಕೊಳ್ಳಬೇಕು.**

**– ಕೆ.ಗೋಪಾಲಯ್ಯ, ಜಿಲ್ಲಾ ಉಸ್ತುವಾರಿ ಸಚಿವರು.**

### ದಸರಾ ಕಾರ್ಯಕ್ರಮಗಳ ಮಾಹಿತಿಗೆ ಡಿಸಿ ಸೂಚನೆ

ದಸರಾ ಮಹೋತ್ಸವಕ್ಕೆ ಎಲ್ಲಾ ಇಲಾಖೆ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿ ಸಂಬಂಧಪಟ್ಟಂತಹ ಕಾರ್ಯಕ್ರಮಗಳ ಕುರಿತು ಸಂಪೂರ್ಣ ಮಾಹಿತಿ ಪಟ್ಟಿ ಮಾಡಿ ವರದಿ ನೀಡಬೇಕು ಎಂದು ಜಿಲ್ಲಾಧಿಕಾರಿ ಎಸ್.ಅಶ್ವತಿ ಹೇಳಿದರು.

ಸಚಿವರ ಸಭೆ ನಂತರ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ರೈತ ದಸರಾದಲ್ಲಿ ಹಾಲು ಕರೆಯುವ ಸ್ಪರ್ಧೆ, ರಾಸುಗಳ ಸ್ಪರ್ಧೆ ಸೇರಿದಂತೆ ಇನ್ನಿತರ ಸ್ಪರ್ಧೆ ಏರ್ಪಡಿಸುವುದು ಕೃಷಿ, ತೋಟಗಾರಿಕೆ, ಮೀನುಗಾರಿಕೆ, ರೇಷ್ಮೆ ಇಲಾಖೆಗಳು ರೈತರಿಗೆ ಉಪಯೋಗವಾಗುವಂತಹ ಕರಕುಶಲ ತಯಾರಿಕೆ ತರಬೇತಿ ಹಾಗೂ ವಸ್ತು ಪ್ರದರ್ಶನಕ್ಕೆ ಸ್ಥಳ ನಿರ್ಮಾಣ ಮಾಡಿ ರೈತರಿಗೆ ಕೃಷಿಯ ಬೆಳೆಗಳ ಬಗ್ಗೆ ಹೊಸ ಆವಿಷ್ಕಾರ ಪರಿಚಯಿಸಬೇಕು ಎಂದರು.

ಕ್ರೀಡಾ ಇಲಾಖೆಯಿಂದ ಚೆಸ್, ಕುಸ್ತಿ, ವಾಲಿಬಾಲ್, ಕಬಡ್ಡಿ, ವಾಟರ್ ಸ್ಪೋರ್ಟ್ಸ್, ಬೋಟಿಂಗ್ ಹೀಗೆ ವಿವಿಧ ಕ್ರೀಡೆಗಳನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಏರ್ಪಡಿಸಬೇಕು. ಮಕ್ಕಳ ದಸರಾದಲ್ಲಿ ಅಣುಕು ಪ್ರದರ್ಶನ, ವಿಚಾರ ಸಂಕಿರಣ, ಸಂಸ್ಕೃತಿಕ ಕಾರ್ಯಕ್ರಮ ಹಾಗೂ ಮಹಿಳಾ ದಸರಾದಲ್ಲಿ ರಂಗೋಲಿ ಸ್ಪರ್ಧೆ, ವಿವಿಧ ಶೈಲಿಯ ನೃತ್ಯಗಳು ಸೇರಿದಂತೆ ಇನ್ನಿತರೆ ಕಾರ್ಯಕ್ರಮ ಪ್ರಸ್ತುತ ಪಡಿಸಲು ಸಿದ್ಧತೆ ಮಾಡಿಕೊಳ್ಳಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪೂಜಾ ಕುಣಿತ ಸ್ಪರ್ಧೆ ಆಯೋಜಿಸಬೇಕು ಎಂದರು.

## ಬೆಂಗಳೂರಿನಿಂದ ಮೇಲುಕೋಟೆಗೆ ಉಚಿತ ಬಸ್




ಮೇಲುಕೋಟೆ, ಆ.29– ಬೆಂಗಳೂರಿನಿಂದ ಮೇಲುಕೋಟೆಗೆ, ಮತ್ತೆ ಚೆಲುವನಾರಾಯಣ ಸ್ವಾಮಿ ಸನ್ನಿಧಿಯಿಂದ ಬೆಂಗಳೂರಿಗೆ ಪ್ರತಿದಿನ 2 ಬಸ್‌ಗಳು ಉಚಿತವಾಗಿ ಸಂಚರಿಸಲಿವೆ.

ಬೆಂಗಳೂರಿನ ಶ್ರೀನಗರದಿಂದ ಪ್ರತಿದಿನ ಬೆಳಗ್ಗೆ 7 ಗಂಟೆಗೆ ಹೊರಡುವ ಒಂದು ಬಸ್ ಬೆಳ್ಳೂರು ಕ್ರಾಸ್, ನಾಗಮಂಗಲ ಮಾರ್ಗವಾಗಿ ಮೇಲುಕೋಟೆಗೆ ಬೆಳಗ್ಗೆ 11 ಗಂಟೆಗೆ ತಲುಪಲಿದೆ. ಭಕ್ತರು ಚೆಲುವನಾರಾಯಣಸ್ವಾಮಿ ಮತ್ತು ಯೋಗನರಸಿಂಹಸ್ವಾಮಿ ದರ್ಶನ ಪಡೆದು ಬಸ್‌ಗೆ ಮರಳಲು ಮಧ್ಯಾಹ್ನ 3 ಗಂಟೆಗಳ ಕಾಲ ಅವಕಾಶ ನೀಡಲಾಗಿದ್ದು, ಮೇಲುಕೋಟೆಯಿಂದ ಮಧ್ಯಾಹ್ನ 3ಕ್ಕೆ ಹೊರಡುವ ಬಸ್ ಅದೇ ಮಾರ್ಗದಲ್ಲಿ ಸಂಚರಿಸಿ ರಾತ್ರಿ 7ಕ್ಕೆ ಶ್ರೀನಗರ ತಲುಪಲಿದೆ.

ಮತ್ತೊಂದು ಬಸ್ ರಾಮನಗರ, ಮಂಡ್ಯ, ಶಿವಳ್ಳಿ, ಜಕ್ಕನಹಳ್ಳಿ ಮಾರ್ಗವಾಗಿ ಬೆಳಗ್ಗೆ 11.30ಕ್ಕೆ ಮೇಲುಕೋಟೆ ತಲುಪಲಿದೆ. ಮತ್ತೆ ಮಧ್ಯಾಹ್ನ 3 ಗಂಟೆಗೆ ಇದೇ ಮಾರ್ಗದಲ್ಲಿ ಬೆಂಗಳೂರಿಗೆ ಹೊರಡಲಿದೆ. ಇದೇ ಮಾದರಿಯಲ್ಲಿ ಬೆಂಗಳೂರಿನಿಂದ ನಾಗಮಂಗಲ ಹಾಗೂ ನಾಗಮಂಗಲದಿಂದ ಬೆಂಗಳೂರಿಗೆ ಉಚಿತ ಬಸ್ ಸೌಕರ್ಯ ಕಲ್ಪಿಸಲಾಗಿದೆ.

ಮೇಲುಕೋಟೆ ಶಾಸಕ ಸಿ.ಎಸ್.ಪುಟ್ಟರಾಜು ಅವರ ಸಲಹೆಯಂತೆ ಮೇಲುಕೋಟೆಗೆ ಬರುವ ಭಕ್ತರಿಗೆ ಅನುಕೂಲವಾಗುವಂತೆ ಉಚಿತ ಬಸ್ ಸೇವೆ ಆರಂಭಿಸಿದ್ದೇನೆ. ಭಕ್ತರಿಗೆ ಉಪಯೋಗವಾದರೆ ನನ್ನ ಸೇವೆ ಸಾರ್ಥಕವಾಗುತ್ತದೆ ಎಂದು ಅರಮನೆ ಶಂಕರ್ ಹೇಳಿದ್ದಾರೆ. ಈ ವೇಳೆ ರಾಜು ಎಂಟರ್ ಪ್ರೈಸಸ್ ಮಾಲೀಕ ರಾಜು, ಬೆಂಗಳೂರು ಸಿಟಿ ಇನ್‌ಸ್ಟಿಟ್ಯೂಟ್ ಉಪಾಧ್ಯಕ್ಷ ಚಂದ್ರಶೇಖರ್ ಮತ್ತಿತರರು ಇದ್ದರು.

## ದರಸಗುಪ್ಪೆಯಲ್ಲಿ ಮಡಿಲು ತುಂಬುವ ಕಾರ್ಯಕ್ರಮ



ಶ್ರೀರಂಗಪಟ್ಟಣ, ಆ.29–ತಾಲೂಕಿನ ದರಸಗುಪ್ಪೆ ಗ್ರಾಮದಲ್ಲಿ ನಡೆದ ಮಡಿಲು ತುಂಬುವ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚಿನ ಮಹಿಳೆಯರಿಗೆ ಕಾಂಗ್ರೆಸ್ ಮುಖಂಡ ಪಾಲಹಳ್ಳಿ ಚಂದ್ರಶೇಖರ್ ಸೀರೆ ವಿತರಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನಾದ್ಯಂತ ಮಹಿಳೆಯರಿಗೆ ಮಡಿಲು ತುಂಬುವ ಕಾರ್ಯಕ್ರಮದಡಿ ಕ್ಷೇತ್ರದ ಪ್ರತಿ ಮಹಿಳೆಯರಿಗೂ ಸೀರೆ ವಿತರಿಸಲಾಗುತ್ತಿದೆ. ಇತ್ತೀಚೆಗೆ ಪಾಲಹಳ್ಳಿಯಲ್ಲಿ 3 ಸಾವಿರ ಮಹಿಳೆಯರಿಗೆ ಸೀರೆ ವಿತರಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ನಿರ್ದೇಶಕ ಸತೀಶ್, ಮುಖಂಡರಾದ ನಾಗಣ್ಣ, ವೈ.ಎಸ್.ಸುರೇಶ್, ಚಂದ್ರಣ್ಣ, ಪೈ ನಾಗಣ್ಣ, ಪಿ.ಎಂ.ಚಂದ್ರಶೇಖರ್, ಚಿದಂ ಬರಂ, ಗುರುಸ್ವಾಮಿ, ಸತೀಶ್ ಇತರರಿದ್ದರು.

## ಸಾವರ್ಕರ್ ರಥಯಾತ್ರೆಗೆ ಅದ್ದೂರಿ ಸ್ವಾಗತ

ಕೆ.ಆರ್.ಪೇಟೆ, ಆ.29– ಪಟ್ಟಣಕ್ಕೆ ಸೋಮವಾರ ಆಗಮಿಸಿದ ವೀರ ಸಾವರ್ಕರ್ ರಥಯಾತ್ರೆಯನ್ನು ಎಂ.ಕೆ.ಬೊಮ್ಮೇಗೌಡ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಅದ್ದೂರಿಯಾಗಿ ಸ್ವಾಗತಿಸಿದರು.




ಕಿಕ್ಕೇರಿ ಮಾರ್ಗವಾಗಿ ಪಟ್ಟಣಕ್ಕೆ ಆಗಮಿಸಿದ ಸಾವರ್ಕರ್ ರಥಕ್ಕೆ ಪುಷ್ಪವೃಷ್ಟಿ ಮಾಡಿ, ಜಯಘೋಷಗಳನ್ನು ಕೂಗಿ ಬರಮಾಡಿಕೊಂಡರು. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬರಲು ತಮ್ಮ ಅಮೂಲ್ಯವಾದ ಕೊಡುಗೆಯನ್ನು ನೀಡಿ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದ ಸಾವರ್ಕರ್ ತ್ಯಾಗ ಬಲಿದಾನದ ಸಂಕೇತವಾಗಿದ್ದಾರೆ. ಯುವಜನರು ವೀರಸಾವರ್ಕರ್ ಅವರ ಜೀವನದ ಆದರ್ಶಗಳನ್ನು ಮೈಗೂಡಿಸಿಕೊಂಡು ಅಪ್ರತಿಮ ದೇಶಭಕ್ತರಾಗಿ ಹೊರಹೊಮ್ಮಬೇಕು ಎಂದು ಕರೆ ನೀಡಿದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್ ಅರವಿಂದ್, ಜಿಲ್ಲಾ ಉಪಾಧ್ಯಕ್ಷ ಬಿ. ವರದರಾಜೇಗೌಡ, ನಗರ ಮಹಿಳಾ ಘಟಕದ ಅಧ್ಯಕ್ಷೆ ಚಂದ್ರಕಲಾ ರಮೇಶ್, ಮಂಡಲ ಪ್ರಧಾನ ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಖಜಾಂಚಿ ಜಗದೀಶ್, ಓಬಿಸಿ ಮೋರ್ಚಾ ಅಧ್ಯಕ್ಷ ನಾಗಣ್ಣ, ಟೌನ್ ಮೋರ್ಚಾ ಅಧ್ಯಕ್ಷ ಮಂಜುನಾಥ್, ರೈತ ಮೋರ್ಚಾದ ಅಧ್ಯಕ್ಷ ಯೋಗೇಶ್, ರಾಜು, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಪಾಪಣ್ಣ, ಪುರಸಭಾ ಸದಸ್ಯ ನಟರಾಜ್, ತಾಲೂಕು ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಡಾ.ಕೆ.ಎಸ್. ರಾಜೇಶ್, ಮುಖಂಡರಾದ ಬ್ಯಾಂಕ್ ಪರಮೇಶ್ವರ್, ಪ್ರೆಸ್ ಕುಮಾರಸ್ವಾಮಿ, ಕೆ.ಪಿ.ಜಯಂತ್, ನಾಗರಾಜ್, ಕುಮಾರ್, ಕೆ.ವಿನೋದ್, ಕೆ.ಆರ್.ನೀಲಕಂಠ, ಜಯಮ್ಮ, ದಯಾನಂದ್ ಇದ್ದರು.

## ಮದ್ದೂರಲ್ಲಿ ಧಾರಾಕಾರ ಮಳೆ: ಜಮೀನಿಗೆ ನುಗ್ಗಿದ ನೀರು



ಮದ್ದೂರು, ಆ.29– ತಾಲೂಕಿನಾದ್ಯಂತ ಸೋಮವಾರ ಬೆಳಗ್ಗೆ ಸುರಿದ ಮಳೆಯಿಂದ ತಾಲೂಕಿನ ಹಲವೆಡೆ ಕೆರೆ ಕೋಡಿ ಹೊಡೆದು ಜಮೀನುಗಳಿಗೆ ನೀರು ನುಗ್ಗಿ ಅಪಾರ ಹಾನಿಯುಂಟಾಗಿದೆ.

**ಕಬ್ಬಾರೆ:** ತಾಲೂಕಿನ ಕಬ್ಬಾರೆ ಗ್ರಾಮದ ಕರೆ ಕೋಡಿ ಬಿದ್ದು 50ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದಿದ್ದ ನಾಟಿ ಪೈರು ಸಂಪೂರ್ಣ ಜಲಾವೃತವಾಗಿದೆ. ನೀರಿನ ರಭಸಕ್ಕೆ 10 ದಿನದ ಹಿಂದೆ ನಾಟಿ ಮಾಡಿದ್ದ ಭತ್ತದ ಪೈರು ನಾಶವಾಗಿದೆ. ಭತ್ತ ಹಾಗೂ ಕಬ್ಬಿನ ಗದ್ದೆಯಲ್ಲಿ ನದಿಯಂತೆ ನೀರು ಹರಿಯುತ್ತಿದ್ದು, ಮನೆಗಳಿಗೂ ಮಳೆ ನೀರು ನುಗ್ಗಿದ ಪರಿಣಾಮ ಮನೆಯಲ್ಲಿದ್ದ ದವಸ ಧಾನ್ಯ ಹಾಗೂ ಗೃಹೋಪಯೋಗಿ ವಸ್ತುಗಳು ಹಾನಿಗೊಂಡಿದೆ.

**ಕೊಚ್ಚಿ ಹೋದ 3 ಟನ್ ಮೀನು:** ಕೆರೆ ಕೋಡಿ ಬಿದ್ದ ಪರಿಣಾಮ 3ಟನ್ ಮೀನು ನೀರಿಗೆ ಕೊಚ್ಚಿ ಹೋಗಿದೆ. ಉಳಿದ ಮೀನು ರಕ್ಷಣೆಗೆ ಸಾಕಾಣಿಕೆದಾರ ನಾಗೇಶ್ ಕೋಡಿಗೆ ಬಲೆ ಹಾಕಿ ಕಾಯುತ್ತಿದ್ದಾರೆ. ಮೀನು ಕೊಚ್ಚಿ ಹೋದ ಪರಿಣಾಮ 5 ಲಕ್ಷ ರೂ. ನಷ್ಟವಾಗಿದೆ.

**ಪರ್ಯಾಯ ಮಾರ್ಗ:** ಮಳೆಯಿಂದ ಚನ್ನಪಟ್ಟಣ ಹಾಗೂ ರಾಮನಗರದಲ್ಲಿ ಬೆಂಗಳೂರು ಮೈಸೂರು ಹೆದ್ದಾರಿ ಸಂಚಾರ ಅಸ್ತವ್ಯಸ್ತಗೊಂಡ ಹಿನ್ನೆಲೆಯಲ್ಲಿ ಮೈಸೂರು ಹಾಗೂ ಮಂಡ್ಯದಿಂದ ಬಂದ ವಾಹನಗಳನ್ನು ಸೋಮನಹಳ್ಳಿ ಹೆಮ್ಮನಹಳ್ಳಿ ಗೇಟ್ ಬಳಿಯಿಂದ ಹುಲಿಯೂರು ದುರ್ಗಾ, ಕುಣಿಗಲ್, ನೆಲಮಂಗಲ ಮಾರ್ಗವಾಗಿ ಬೆಂಗಳೂರಿಗೆ ವಾಹನಗಳನ್ನು ಹೋಗಲು ಪೊಲೀಸರು ಬದಲಿ ವ್ಯವಸ್ಥೆ ಮಾಡಿದ್ದರು.

**ಮನೆ ಕುಸಿತ:** ತಾಲೂಕಿನ ನಗರಕೆರೆ ಗ್ರಾಮದ ಮುರಳಿ ಮತ್ತು ನಟರಾಜ್ ಅವರಿಗೆ ಸೇರಿದ್ದ ಮನೆ ನಿರಂತರ ಮಳೆಯಿಂದ ಕುಸಿದು ಅಪಾರ ಪ್ರಮಾಣದಲ್ಲಿ ನಷ್ಟವಾಗಿದೆ. ಅಲ್ಲದೆ ತಾಲೂಕಿನಾದ್ಯಂತ ಹಲವಾರು ಮನೆಗಳು ಮಳೆಯಿಂದ ಜಖಂಗೊಂಡಿದೆ ಮತ್ತು ಕೋಟ್ಯಂತರ ರೂ. ಬೆಲೆ ಬಾಳುವ ಬೆಳೆಗಳು ನೀರಿಗೆ ಜಲಾವೃತ್ತವಾಗಿದೆ.

## ಕೆಆರ್‌ಎಸ್‌ನಿಂದ 46 ಸಾವಿರ ಕ್ಯೂಸೆಕ್ ನೀರು ಬಿಡುಗಡೆ

ಶ್ರೀರಂಗಪಟ್ಟಣ, ಆ.29– ಕಾವೇರಿ ಜಲಾನಯನ ಪ್ರದೇಶದಲ್ಲಿ ಕಳೆದ ಮೂರು ದಿನಗಳಿಂದ ಭಾರೀ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೆಆರ್‌ಎಸ್ ಒಳ ಹರಿವು ಹೆಚ್ಚಳವಾಗಿದ್ದು, ಜಲಾಶಯದ ಸುರಕ್ಷತೆ ದೃಷ್ಟಿಯಿಂದ ಹೊರಹರಿವಿನ ಮಟ್ಟ ಹೆಚ್ಚಿಸಲಾಗಿದೆ.

ಜಲಾಶಯದಲ್ಲಿ ಸದ್ಯ 124.45 ಅಡಿ ನೀರು ಸಂಗ್ರಹವಾಗಿದೆ. 31,467 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ನದಿಗೆ 45,885 ಕ್ಯೂಸೆಕ್ ಹಾಗೂ ನಾಲೆಗೆ 250 ಕ್ಯೂಸೆಕ್ ಸೇರಿ ಒಟ್ಟು 46,135 ಕ್ಯೂಸೆಕ್ ನೀರು ಹೊರ ಬಿಡಲಾಗುತ್ತಿದೆ ಎಂದು ಜಲಾಶಯದ ಕಾವೇರಿ ನೀರಾವರಿ ನಿಗಮದ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮೈದುಂಬಿದ ಮುಟ್ಟನಹಳ್ಳಿಯ ಸೂಳೆಕೆರೆ ಕೆರೆ

ಭಾರತೀನಗರ, ಆ.29– ಸಮೀಪದ ಮುಟ್ಟನಹಳ್ಳಿ ಬಳಿಯ ಸೂಳೆಕೆರೆ ಮೈದುಂಬಿ ಹರಿಯುತ್ತಿದ್ದು ಎಲ್ಲರನ್ನೂ ಆಕರ್ಷಿಸುತ್ತಿದೆ. ಜಿಲ್ಲೆಯಲ್ಲೇ ದೊಡ್ಡ ಕೆರೆ ಎಂಬ ಖ್ಯಾತಿಗೆ ಪಾತ್ರವಾಗಿರುವ ಮುಟ್ಟನಹಳ್ಳಿ ಬಳಿಯ ಸೂಳೆಕೆರೆಯ ಎಡ ಮತ್ತು ಬಲದಂಡೆ ನಾಲೆಗಳಲ್ಲಿ ನೀರು ಹರಿಯುತ್ತಿದೆ. ಇದರಿಂದ ಅಕ್ಕಪಕ್ಕದ ರೈತರ ಜಮೀನುಗಳಿಗೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗಿದೆ.



ಸುಮಾರು 938 ಎಕರೆ ವಿಸ್ತೀರ್ಣ ಹೊಂದಿರುವ ಈ ಕೆರೆ ಮದ್ದೂರು ತಾಲೂಕಿನ ನೂರಾರು ಕೆರೆಗಳಿಗೆ ನೀರಿನ ಮೂಲವಾಗಿದೆ. ಕೆರೆಯಲ್ಲಿ ಊಳು ತುಂಬಿಕೊಂಡಿದ್ದು, ಊಳು ತೆಗೆಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಜೊತೆಗೆ ಕೆರೆಯನ್ನು ಪ್ರವಾಸೋದ್ಯಮ ಇಲಾಖೆಗೆ ಸೇರಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಶಾಸಕ ತಮ್ಮಣ್ಣ ತಿಳಿಸಿದ್ದಾರೆ.

ಒಂದನೇ ಪುಟದಿಂದ

## ಜನ ಜಾಗೃತಿ

ಮಾಡಿಕೊಂಡಿದ್ದಾರೆ ಎಂದು ದೂರಿದರು. ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದರು. ಆಗ ಭಾಗ್ಯಗಳನ್ನೇ ನಮ್ಮ ಸರ್ಕಾರ ನೀಡಿತ್ತು ಎಂದರು. ಶಿವಕುಮಾರ್ ಮಾತನಾಡಿ, 'ಬಸವಣ್ಣ ಹೇಳಿದ್ದು ನುಡಿದಂತೆ ನಡೆಯಬೇಕೆಂದು. ನಾವು ನುಡಿದಂತೆ ನಡೆದಿದ್ದೇವೆ. ನೀವು ನುಡಿದಂತೆ ನಡೆಯುತ್ತಿದ್ದೀರಾ ನಾವು ಬಿಜೆಪಿಯವರಿಗೆ ಪ್ರಶ್ನೆ ಕೇಳುತ್ತೇವೆ. ಕೊಟ್ಟ ವಚನ ಈಡೇರಿಸಿದ್ದೀರಾ? ನಿಮ್ಮ ಆತ್ಮಸಾಕ್ಷಿ ಮೂಲಕ ಉತ್ತರ ಕೊಡಿ ಎಂದು ಕೇಳುತ್ತಿದ್ದೇವೆ ಎಂದರು. 'ನಿಮ್ಮ ಪ್ರಣಾಳಿಕೆಯಲ್ಲಿ ಕೊಟ್ಟ ಭರವಸೆ ಈಡೇರಿಸಲಿಲ್ಲ, ನೀವು ನುಡಿದಂತೆ ನಡೆಯಲಿಲ್ಲ, ವಚನ ಭ್ರಷ್ಟರಾಗಿದ್ದೀರಾ ನಾವು ಪ್ರತಿದಿನ ಒಂದೊಂದು ಪ್ರಶ್ನೆ ಕೇಳುತ್ತೇವೆ. ರೈತರಿಗೆ ಕೊಟ್ಟ ಮಾತು ಉಳಿಸಿಕೊಂಡಿದ್ದೀರಾ, ರೈತರ ಆದಾಯ ಡಬಲ್ ಎಂದ ಪ್ರಧಾನಿಯವರು ಎಲ್ಲಿ ರೈತರಿಗೆ ನೀವು ಸಹಾಯ ಮಾಡಿದ್ದೀರಾ ಎಂದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಸಿದ್ದರಾಮಯ್ಯ ಮಾತನಾಡಿ, '2013ರಲ್ಲಿ ನಾವು ಪ್ರಣಾಳಿಕೆ ಹೊರಡಿಸಿದ್ದೆವು. ಜನ ಆಗ ನಮಗೆ ಅವಕಾಶ ಕೊಟ್ಟಿದ್ದರು. 122 ಸ್ಥಾನಗಳನ್ನು ನಾವು ಗೆದ್ದು ಬಂದಿದ್ದೆವು. 2018ರಲ್ಲೂ ಪ್ರಣಾಳಿಕೆ ಹೊರಡಿಸಿದ್ದೆವು. ಬಿಜೆಪಿಯವರೂ ಪ್ರಣಾಳಿಕೆ ಹೊರಡಿಸಿದ್ದರು.

ನಾವು ಜನರಿಗೆ 165 ಭರವಸೆ ನೀಡಿದ್ದೆವು. ಅದರಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೆವು. ಬಿಜೆಪಿಯವರು ಪ್ರಣಾಳಿಕೆಯಲ್ಲಿ 600 ವಚನಗಳನ್ನು ಕೊಟ್ಟಿದ್ದರು. ಅದರಲ್ಲಿ ಎಷ್ಟು ವಚನಗಳನ್ನು ಈಡೇರಿಸಿದ್ದಾರೆ' ಎಂದು ಪ್ರಶ್ನಿಸಿದರು. ಕೊಟ್ಟ ಭರವಸೆಗಳಲ್ಲಿ ಶೇ. 10ರಷ್ಟೂ ಈಡೇರಿಸಿಲ್ಲ. ಜನರಿಗೆ ಮಾತು ಕೊಟ್ಟ ಮೇಲೆ ಉಳಿಸಿಕೊಳ್ಳಬೇಕಲ್ಲವೇ? ಜನರಿಗೆ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ವಚನಗಳ ವಂಚನೆ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

### ಜನ ಜಾಗೃತಿ ವೇಳೆ ಬಿಜೆಪಿಗೆ ಕಾಂಗ್ರೆಸ್ ಪ್ರಶ್ನೆ...

**ರೈತರ ಪ್ರಶ್ನೆಗಳಿಗೆ ನಿಮ್ಮ ಹತ್ತಿರ ಇದೆಯಾ ಉತ್ತರ?**

- ಯಾವಾಗ ಕೊಡುವಿರಿ ನಿರಂತರ ವಿದ್ಯುತ್?
- ಯಾವಾಗ ಸಿಗುತ್ತದೆ ಬೆಳೆಗಳಿಗೆ ಬೆಂಬಲ ಬೆಲೆ?
- ಹೈನುಗಾರಿಕೆಗೆ 3 ಸಾವಿರ ಕೋಟಿ ನಿಧಿ ಕೊಟ್ಟಿದ್ದೀರಾ?
- ಸ್ವಸಹಾಯ ಸಂಘಗಳಿಗೆ ಮತ್ತು ರೈತಸಂಘಗಳಿಗೆ ಕಡಿಮೆ

**ಬಡ್ಡಿ ದರದಲ್ಲಿ ನೀಡುವ ಸಾಲದ ಯೋಜನೆ ಏನಾಯಿತು?**

- ರೈತರಿಗೆ ಕೃಷಿ ಅಧ್ಯಯನದ ಚೀನಾ, ಇಸ್ರೇಲ್ ಪ್ರವಾಸ ಯಾವಾಗ?
- ಮಹಿಳೆಯರ ಪ್ರಶ್ನೆಗಳಿಗೆ ನಿಮ್ಮ ಹತ್ತಿರ ಇದೆಯಾ ಉತ್ತರ?
- ಏನಾಯಿತು ಮಹಿಳೆಯರ ಉಚಿತ ಸ್ಮಾರ್ಟ್ ಫೋನ್ ಯೋಜನೆ?
- ಮಹಿಳೆಯರ ರಕ್ಷಣೆಗಾಗಿ ವಿಶೇಷ ತನಿಖಾ ದಳ ರಚನೆಯ ಭರವಸೆ ಏನಾಯಿತು?
- ಮಹಿಳಾ ಉದ್ಯಮಿಗಳಿಗೆ 100 ಕೋಟಿ ಭರವಸೆ ಏನಾಯಿತು?
- ಮಹಿಳೆಯರ ಆರ್ಥಿಕ ಸ್ವಾವಲಂಬನೆ ನೀಡುವ ಸ್ತ್ರೀ ಉನ್ನತಿ ಕೇಂದ್ರಗಳು ಎಲ್ಲಿದೆ?

**ಯುವಜನತೆಯ ಪ್ರಶ್ನೆಗಳಿಗೆ ನಿಮ್ಮ ಹತ್ತಿರ ಇದೆಯಾ ಉತ್ತರ?**

- ಶಿಕ್ಷಣ ಸಂಸ್ಥೆಗಳ 57 ಸಾವಿರ ಅಧ್ಯಾಪಕರ ಖಾಲಿ ಹುದ್ದೆ ಭರ್ತಿ ಯಾವಾಗ?
- ಶಾಲಾ–ಕಾಲೇಜು ಶುಲ್ಕ ನಿಯಂತ್ರಣ ಪ್ರಾಧಿಕಾರದ ಅನುಷ್ಠಾನವೆಲ್ಲಿ?
- ಪದವಿಯವರೆಗಿನ ಉಚಿತ ಶಿಕ್ಷಣ ನೀಡುವುದು ಯಾವಾಗ?
- 70 ಪದವಿ ಕಾಲೇಜುಗಳ ನಿರ್ಮಾಣದ ಭರವಸೆ ಏನಾಯಿತು?
- ಕರ್ನಾಟಕ ವಿದ್ಯಾರ್ಥಿವೇತನ ಮತ್ತು ಸಾಲ ಪ್ರಾಧಿಕಾರದ ಸ್ಥಾಪನೆಯ ಭರವಸೆ ಏನಾಯಿತು?
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರಶ್ನೆಗೆ ನಿಮ್ಮ ಹತ್ತಿರ ಇದೆಯಾ ಉತ್ತರ?
- ಎಲ್ಲಿ ಕೊಟ್ಟಿದ್ದೀರಾ 3000 ಕೋಟಿ ವಿದ್ಯಾರ್ಥಿವೇತನ

**15 ಸಾವಿರ ಕೋಟಿ ವಸತಿ ಯೋಜನೆ ಅನುಷ್ಠಾನ ಯಾವಾಗ?**

- ವಾಲ್ಮೀಕಿ ಭವನಗಳ ನಿರ್ಮಾಣ ಎಲ್ಲಾಯಿತು?
- ಸರ್ಕಾರಿ ಹುದ್ದೆಗಳಲ್ಲಿ ವಿಶೇಷ ನೇಮಕಾತಿ ಯೋಜನೆ ಏನಾಯಿತು?

**ಕನ್ನಡಿಗರ ಪ್ರಶ್ನೆಗೆ ನಿಮ್ಮ ಹತ್ತಿರ ಇದೆಯಾ ಉತ್ತರ?**

- ವಿಶ್ವಗುರು ಬಸವಣ್ಣ, ಕುವೆಂಪು, ಶ್ರೀ ನಾರಾಯಣ ಗುರು ಅವರುಗಳಿಗೆ ಅಪಮಾನವೇಕೆ ಮಾಡಿದ್ದೀರಿ?
- ಕಸ ಮುಕ್ತ ಬೆಂಗಳೂರಿನ ಭರವಸೆ ಏನಾಯಿತು?
- 500 ಕೋಟಿಯಲ್ಲಿ ದೇವಸ್ಥಾನ ಹಾಗೂ ಮಠಗಳ ಜೀರ್ಣೋದ್ಧಾರ ಯೋಜನೆ ಏನಾಯಿತು?
- ಕೇಂದ್ರ ಸರ್ಕಾರದ ಹುದ್ದೆಗಳ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯುವ ಅವಕಾಶ ಕಲ್ಪಿಸುವುದು ಯಾವಾಗ?

## ಸಾಥ್

ಮಾಹಿತಿ ನೀಡಿದರು. ಭಕ್ಷಿಕೆರೆ ನಂತರ ರೈತರ ಮನೆಗೆ ಭೇಟಿ ನೀಡಿದ ಮುಖ್ಯಮಂತ್ರಿ, ಪರಿಹಾರದ ಭರವಸೆ ನೀಡಿದರು. ಮಳೆಯಿಂದ ಕುಸಿದು ಬಿದ್ದಿರುವ ಮನೆಗಳಿಗೆ ತಕ್ಷಣ 1 ಲಕ್ಷ ರೂಪಾಯಿ ಹಾಗೂ ಒಟ್ಟಾರೆ 5 ಲಕ್ಷ ರೂ. ಪರಿಹಾರವನ್ನು ಹಂತ ಹಂತವಾಗಿ ನೀಡಲಾಗುವುದು ಎಂದು ಅವರು ತಿಳಿಸಿದರು. ಮಳೆಯಿಂದ ಬೆಂಗಳೂರು–ಮೈಸೂರು ರಸ್ತೆಯಲ್ಲಿ ಸಮಸ್ಯೆಯಾಗಿದೆ. ಹೆದ್ದಾರಿಯ ಹಲವೆಡೆ ಕಾಲುವೆ ಮುಚ್ಚಿರುವುದರಿಂದ ಈ ಸಮಸ್ಯೆಯಾಗಿದೆ. ಕಾಲುವೆ ತೆರವುಗೊಳಿಸುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೂಚಿಸಲಾಗಿದೆ. ಅವರು ಕಾಲುವೆ ತೆರವುಗೊಳಿಸುವವರೆಗೂ ನಾವು ಕಾಯುವುದಿಲ್ಲ, ರಾಜ್ಯ ಸರ್ಕಾರವೇ ತೆರವುಗೊಳಿಸಲಿದ್ದು, ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ವ್ಯವಸ್ಥೆ ಮಾಡಲಾಗುವುದು ಎಂದರು. ಮಳೆಯಿಂದ ರೇಷ್ಮೆ ರೀಲರ್ಸ್‌ಗೆ ಆಗಿರುವ ನಷ್ಟವನ್ನು ಸರ್ಕಾರವೇ ಭರಿಸಲಿದೆ. ಸಂಕಷ್ಟದಲ್ಲಿರುವವರಿಗೆ ಶೀಘ್ರದಲ್ಲೇ ತಾತ್ಕಾಲಿಕ ಪರಿಹಾರ ಒದಗಿಸಲಾಗುವುದು, ರಾಜ್ಯ ಸರ್ಕಾರದ ವತಿಯಿಂದ ಪಡಿತರ ಕಿಟ್ ವಿತರಿಸುತ್ತಿದ್ದೇವೆ ಎಂದು ಮುಖ್ಯಮಂತ್ರಿ ತಿಳಿಸಿದರು.

## ಮೈಸೂರು–ಬೆಂಗಳೂರು ಹೆದ್ದಾರಿ

ಕಾಲೋನಿಯಲ್ಲಿರುವ ಮನೆಗಳು ಮುಕ್ಕಾಲು ಭಾಗ ಮುಳುಗಡೆಯಾಗಿದ್ದು, ಮನೆಯಲ್ಲಿದ್ದ ದಿನಬಳಕೆ ವಸ್ತು, ಬೈಕ್, ಕಾರು ಸಂಪೂರ್ಣ ಜಲಾವೃತಗೊಂಡಿದೆ. ಕಾಲೋನಿ ಮುಳುಗಡೆ ಹಿನ್ನೆಲೆ ಜನರಲ್ಲಿ ಆತಂಕ ಹೆಚ್ಚಿದೆ.

ಬಿಡದಿ ಬಳಿಯ ಕುಂಬಳಗೋಡಿನ ಸೇತುವೆ ಮತ್ತೆ ಕುಸಿತ ಕಂಡಿದ್ದು, ಅಪಾಯದ ಮುನ್ಸೂಚನೆಯಿಂದ ಮತ್ತೆ ಕುಂಬಳಗೂಡು ಸೇತುವೆಯನ್ನು ಬಂದ್ ಮಾಡಲಾಗಿದೆ. ರಾಮನಗರ ತಾಲೂಕಿನ ಮಾಯಿಗಾನಹಳ್ಳಿ ಗ್ರಾಮದ ಬಳಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಜಲಾವೃತವಾಗಿ ಕುಸಿತ ಕಂಡಿದ್ದು, ಮುಂಜಾಗ್ರತಾ ಕ್ರಮವಾಗಿ ಮಾಯಿಗಾನಹಳ್ಳಿ ಬಳಿ ರಸ್ತೆಯನ್ನು ಬಂದ್‌ಮಾಡಿ ಪೊಲೀಸರು ಬ್ಯಾರಿಕೇಡ್‌ಗಳನ್ನು ಅಳವಡಿಸಿದ್ದಾರೆ. ಬಸವನಹಳ್ಳಿ ಗ್ರಾಮದ ಬಳಿ ಬೃಹತ್ ಬಂಡೆಯೊಂದು ರಸ್ತೆಗೆ ಉರುಳಿದ ಪರಿಣಾಮ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡಿದೆ. ಬಂಡೆ ಉರುಳಿದ ವೇಳೆ ಯಾವುದೇ ವಾಹನ ಸಂಚಾರವಿಲ್ಲದ ಕಾರಣ ಯಾವುದೇ ರೀತಿಯ ಅನಾಹುತ ಸಂಭವಿಸಿಲ್ಲ. ದಶಪಥ ರಸ್ತೆಯಲ್ಲಂತೂ ಸಂಚಾರ ಸಾಧ್ಯವೇ ಇಲ್ಲ ಎನ್ನುವಂತಾಗಿದೆ. ರಾಮನಗರ, ಚನ್ನಪಟ್ಟಣದ ಬಹುತೇಕ ಬಡಾವಣೆಗಳು ಮುಳುಗಡೆ ಹಂತ ತಲುಪಿವೆ. ದ್ವೀಪದಂತಾಗಿರುವ ರಾಮನಗರದಿಂದ ಬೆಂಗಳೂರು ಕಡೆಗೆ ಯಾವ ಸಂಚಾರ ವ್ಯವಸ್ಥೆಯು ಇಲ್ಲದಂತಾಗಿದೆ.

**ಕಾರಿನ ಮೇಲೆ ಮರ ಬಿದ್ದು ವ್ಯಕ್ತಿ ಸಾವು:** ಬೆಂಗಳೂರು– ಮೈಸೂರು ಹೆದ್ದಾರಿಯ ಕೂಗಳತೆ ದೂರದ ಬಿಡದಿ ಹೋಬಳಿಯ ತೊರೆದೊಡ್ಡಿ ಗ್ರಾಮದ ಬಳಿ ಸಂಚರಿಸುತ್ತಿದ್ದ ಕಾರಿನ ಮೇಲೆ ಬೃಹತ್ ಮರ ಬಿದ್ದ ಪರಿಣಾಮ ರಾಮನಗರದ ಇಟ್ಟಮಡು ಗ್ರಾಮದ ಬೋರೇಗೌಡ (56) ಎಂಬುವವರು ಸಾವನ್ನಪ್ಪಿದ್ದಾರೆ.

**" ಮೈಸೂರು–ಬೆಂಗಳೂರು ಹೆದ್ದಾರಿಯ ಬಿಡದಿ–ರಾಮನಗರ ನಡುವೆ ರಸ್ತೆ ಜಲಾವೃತಗೊಂಡಿರುವುದರಿಂದ ಮೈಸೂರಿನಿಂದ ಬೆಂಗಳೂರಿಗೆ ತೆರಳುವ ತಡೆ ರಹಿತ ಬಸ್‌ಗಳು ಮಳವಳ್ಳಿ ಹಾಗೂ ಕನಕಪುರ ಮಾರ್ಗದಲ್ಲಿ ಬೆಂಗಳೂರಿಗೆ ತೆರಳುತ್ತಿವೆ. ಈ ಬಸ್‌ಗಳು ಮೆಜೆಸ್ಟಿಕ್‌ನಲ್ಲಿ ಪ್ರಯಾಣಿಕರನ್ನು ಇಳಿಸಿ ನಂತರ ಸ್ಯಾಟಲೈಟ್ ಬಸ್ ನಿಲ್ದಾಣ ತಲುಪುತ್ತವೆ. ಈಗಾಗಿ ಮೈಸೂರು–ಬೆಂಗಳೂರು ತಡೆ ರಹಿತ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಯಾವುದೇ ರೀತಿ ತೊಂದರೆಯಾಗಿಲ್ಲ. ಎಕ್ಸ್‌ಪ್ರೆಸ್ ಬಸ್‌ಗಳು ಚನ್ನಪಟ್ಟಣದವರೆಗೆ ಮಾತ್ರ ಸಂಚರಿಸುತ್ತಿವೆ. ನಂತರ ರಾಮನಗರ ಕಡೆಗೆ ತೆರಳುವ ಪ್ರಯಾಣಿಕರಿಗೆ ಅಲ್ಲಿನ ಸ್ಥಳೀಯ ಬಸ್ ಡಿಪೋದಿಂದ ಪರ್ಯಾಯ ವ್ಯವಸ್ಥೆ ಮಾಡಿಕೊಡುವ ಸಾಧ್ಯತೆ ಇದೆ. ಮೈಸೂರು–ಬೆಂಗಳೂರು ಹೆದ್ದಾರಿ ಜಲಾವೃತವಾಗಿರುವ ಕಾರಣ ಈ ಮಾರ್ಗದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಸದ್ಯಕ್ಕೆ ಕಡಿಮೆಯಾಗಿರುವುದರಿಂದ ಸಂಚರಿಸುವ ಬಸ್‌ಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಪ್ರಯಾಣಿಕರ ಸಂಖ್ಯೆಗನುಗುಣವಾಗಿ ಬಸ್‌ಗಳ ವ್ಯವಸ್ಥೆ ಮಾಡಲಾಗುತ್ತಿದೆ**

**– ಆರ್.ಅಶೋಕ್ ಕುಮಾರ್, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ**



## ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿ 6 ಕಡೆ ಬಿಜೆಪಿ ಬೃಹತ್ ರ‍್ಯಾಲಿ

ಅರುಣ್‌ಸಿಂಗ್, ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹಾಗೂ ಬಿ.ಎಸ್. ಯಡಿಯೂರಪ್ಪ ಅವರ ಹೆಗಲಿಗೆ ಹಾಕಿದೆ. ಇದಕ್ಕೂ ಮೊದಲು ತಿರುಪತಿಯಲ್ಲಿ ನಡೆದ ಚುನಾವಣಾ ತಯಾರಿ ಸಭೆಯಲ್ಲಿ ಮುಖ್ಯಮಂತ್ರಿಯವರು, ಯಡಿಯೂರಪ್ಪ ಹಾಗೂ ಕಟೀಲ್ ನೇತೃತ್ವದಲ್ಲಿ ಪ್ರವಾಸ ಕೈಗೊಳ್ಳುವ ತೀರ್ಮಾನಕ್ಕೆ ರಾಜ್ಯ ಬಿಜೆಪಿಯಲ್ಲೂ ಸಮ್ಮತಿ ದೊರೆತಿತ್ತು.

ಆದರೆ ಏಕಾಏಕಿ ಮುಖ್ಯಮಂತ್ರಿಯವರನ್ನು ಇದರಿಂದ ಕೈಬಿಡಲಾಗಿದೆ. ಸಂಘಟನೆಯಿಂದ ಬೊಮ್ಮಾಯಿ ಅವರನ್ನು ದೂರವಿರಿಸಿರುವುದು ಬಿಜೆಪಿ ವಲಯದಲ್ಲಿ ಭಾರೀ ಚರ್ಚೆಗೆ ಎಡೆಮಾಡಿದೆ. ದೆಹಲಿಯಿಂದ ಹಿಂತಿರುಗಿದ ನಂತರ ಯಡಿಯೂರಪ್ಪ ಅವರನ್ನು ಇಂದು ಬೆಳಗ್ಗೆ ಅವರ ನಿವಾಸದಲ್ಲಿ ಬೊಮ್ಮಾಯಿ ಅವರು ಭೇಟಿ ಮಾಡಿದ ನಂತರ ಈ ಮಾಹಿತಿ ಅವರಿಗೆ ಲಭ್ಯವಾಗಿದೆ. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ನೀಡಿರುವ ಸಂದೇಶವನ್ನು ಯಡಿಯೂರಪ್ಪ ಅವರು ಮುಖ್ಯಮಂತ್ರಿಯವರಿಗೆ ತಿಳಿಸಿದ್ದಾರೆ.

ಯಡಿಯೂರಪ್ಪ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬೊಮ್ಮಾಯಿ, ಪ್ರವಾಸ ಕಾರ್ಯಕ್ರಮ ವಿಷಯವನ್ನು ಬಹಿರಂಗ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರ ಸೂಚನೆ ಮೇರೆಗೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಪಕ್ಷದ ಸಂಘಟನೆ, ಪ್ರವಾಸ, ಜನಸಂಪರ್ಕದ ಬಗ್ಗೆ ಚರ್ಚೆ ಮಾಡಿದ್ದು, ಆರು ಕಡೆ ದೊಡ್ಡ ರ‍್ಯಾಲಿಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಯಡಿಯೂರಪ್ಪ ಅವರು ಪಕ್ಷದ ಸಂಘಟನೆಯ ಬಗ್ಗೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ದಿಲ್ಲಿಗೆ ಹೋಗಿ ಭೇಟಿಯಾಗಿ ಬಂದಿದ್ದಾರೆ. ಅಲ್ಲಿಯ ಮಾತುಕತೆ, ಸೂಚನೆಯ ಬಗ್ಗೆ ವಿವರವಾಗಿ ಚರ್ಚೆ ಮಾಡಿದ್ದೇವೆ.

ನಮ್ಮ ಪ್ರಧಾನಮಂತ್ರಿಗಳು ಸೆಪ್ಟೆಂಬರ್ 2 ರಂದು ಮಂಗಳೂರಿಗೆ ಭೇಟಿ ನೀಡಲಿದ್ದಾರೆ. ಅವರು ಭೇಟಿ ನೀಡುವ ಸಂದರ್ಭದಲ್ಲಿ ಪಕ್ಷದ ವತಿಯಿಂದ ಮಾಡಬೇಕಿರುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಬಿ.ಎಸ್.ಯಡಿಯೂರಪ್ಪ, ನಳಿನ್‌ಕುಮಾರ್ ಕಟೀಲ್, ಅರುಣ್ ಸಿಂಗ್ ಅವರು ವಿವಿಧ ತಂಡಗಳಲ್ಲಿ ಪ್ರವಾಸ ಮಾಡುವ ಬಗ್ಗೆ ಚರ್ಚೆಯಾಗಿದೆ. ಬರುವ ದಿನಗಳಲ್ಲಿ ಇನ್ನೊಂದು ಸಭೆಯನ್ನು ರಾಜ್ಯ ಮಟ್ಟದ ಹಿರಿಯ ನಾಯಕರೊಂದಿಗೆ ನಡೆಸಿ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳ ಕಾರ್ಯಕ್ರಮದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಳ್ಳುವ ನಿರ್ಣಯವಾಗಿದೆ.

ಸೆಪ್ಟೆಂಬರ್ 8 ರಂದು ದೊಡ್ಡಬಳ್ಳಾಪುರದಲ್ಲಿ ನಡೆಯುವ ಜನೋತ್ಸವ ಕಾರ್ಯಕ್ರಮದ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅದನ್ನು ಯಶಸ್ವಿ ಮಾಡಲು ಕೆಲವು ಸೂಚನೆಗಳನ್ನು ನೀಡಿದ್ದಾರೆ. ಅದನ್ನು ಕಾರ್ಯಗತ ಮಾಡಲು ಸಂಘಟಕರಿಗೆ ತಿಳಿಸಲಾಗಿದೆ. ಸಚಿವ ಡಾ.ಸುಧಾಕರ್, ಶಾಸಕರು, ಪದಾಧಿಕಾರಿಗಳು ಎಲ್ಲರೂ ಸೇರಿ ಜನೋತ್ಸವ ಯಶಸ್ವಿ ಮಾಡುತ್ತೇವೆ ಎಂದರು.

ಮೈಸೂರು ಮಿತ್ರ ಮಂಗಳವಾರ 30 ಆಗಸ್ಟ್ 2022

## ಓಟದ ಸ್ಪರ್ಧೆಯಲ್ಲಿ ಕೊಡಗಿನ ಕುವರಿಗೆ ಚಿನ್ನ



ಸೋಮವಾರಪೇಟೆ, ಆ.29– ಕರ್ನಾಟಕ ಸ್ಟೇಟ್ ಜೂನಿಯರ್ ಅಂಡ್ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಕ್ರೀಡಾಕೂಟದಲ್ಲಿ ಸೀನಿಯರ್ ವಿಭಾಗದ 5 ಸಾವಿರ ಮೀಟರ್ ಓಟದ ಸ್ಪರ್ಧೆಯಲ್ಲಿ ಕೂತಿ ಗ್ರಾಮದ ಸಿ.ಎಂ. ರಾಶಿ ಪ್ರಥಮ ಸ್ಥಾನ ಪಡೆಯುವುದರೊಂದಿಗೆ ಚಿನ್ನದ ಪದಕ ಪಡೆದುಕೊಂಡಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಈಚೆಗೆ ನಡೆದ ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ್ದಾರೆ. ಕೂತಿ ಗ್ರಾಮದ ಸಿ.ಎನ್. ಮಂಜುನಾಥ್ ಹಾಗೂ ರೀಣಾ ದಂಪತಿಗಳ ಪುತ್ರಿಯಾಗಿದ್ದು, ಇವರು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ಅಥ್ಲೆಟಿಕ್ಸ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.

### ಮಡಿಕೇರಿಯಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ

# ಸಾಧನೆ, ಪರಿಶ್ರಮದಿಂದ ಮಾತ್ರ ಉತ್ತಮ ಕ್ರೀಡಾಪಟುಗಳಾಗಿ ರೂಪುಗೊಳ್ಳಲು ಸಾಧ್ಯ

### ರಾಷ್ಟ್ರೀಯ ತರಬೇತುದಾರ ಅಂತೋನಿ ಡಿಸೋಜ



ಮಡಿಕೇರಿ,ಆ.29– ಸತತ ಸಾಧನೆ, ಪರಿಶ್ರಮದಿಂದ ಉತ್ತಮ ಕ್ರೀಡಾಪಟುಗಳಾಗಿ ರೂಪುಗೊಳ್ಳಲು ಸಾಧ್ಯ ಎಂದು ರಾಷ್ಟ್ರೀಯ ಕ್ರೀಡಾಪಟು ಮತ್ತು ರಾಷ್ಟ್ರೀಯ ತರಬೇತುದಾರರಾದ ಅಂತೋನಿ ಡಿಸೋಜ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇದರ ವತಿಯಿಂದ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಹುಟ್ಟುಹಬ್ಬದ ಪ್ರಯುಕ್ತ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾ ದಿನಾಚರಣೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಇತ್ತೀಚೆಗೆ ನಡೆದ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅನೇಕ ಪದಕಗಳು ಬಂದಿವೆ. ಇನ್ನು ಮುಂದೆ ಬರುವ ಕ್ರೀಡಾಕೂಟದಲ್ಲಿ ಯುವಕ–ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಾಧನೆ ಮಾಡುವಂತಾಗಬೇಕು. ಗುರಿ ಮುಟ್ಟಲು ದಿನನಿತ್ಯ ಪರಿಶ್ರಮ ಪಡಬೇಕು. ಯಾವ ಹಂತದಲ್ಲೂ ಕುಗ್ಗದೆ ಕ್ರೀಡಾ ಚಟುವಟಿಕೆಯಲ್ಲಿ ಮುನ್ನಡೆಯಬೇಕು ಎಂದರು.

ಮುಂದೆ ಹೆಚ್ಚು ಕ್ರೀಡಾಪಟುಗಳು ಸಾಧನೆಯನ್ನು ಮಾಡುವಂತಾಗಬೇಕು. ಮುಂದಿನ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಹೆಚ್ಚಿನ ಪದಕಗಳು ಬರುವಂತಾಗಲಿ ಎಂದು ಹಾರೈಸಿದರು. ಈ ಸಂದರ್ಭ ಹಾಕಿ ಮಾಂತ್ರಿಕ ಧ್ಯಾನ್ ಚಂದ್ ಅವರ ಕಾರ್ಯದಕ್ಷತೆ, ಕ್ರೀಡಾ ಸ್ಫೂರ್ತಿಯನ್ನು ಮೆಲುಕು ಹಾಕಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಜಿ.ಎಸ್.ಗುರುಸ್ವಾಮಿ, ಹಾಕಿಯಲ್ಲಿ ಮೇಜರ್ ಧ್ಯಾನ್ ಚಂದ್ ಅವರು ದೇಶಕ್ಕೆ ಉತ್ತಮವಾದ ಕೊಡುಗೆ ನೀಡಿದ್ದಾರೆ. ಅವರ ಜೀವನಾದರ್ಶಗಳನ್ನು ಯುವಕ–ಯುವತಿಯರು ಮೈಗೂಡಿಸಿಕೊಳ್ಳಬೇಕು. ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡುವಂತಾಗಬೇಕು ಎಂದರು.

ಎಲ್ಲರೂ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ದಿನನಿತ್ಯ ಕಾರ್ಯ ಚಟುವಟಿಕೆಯಿಂದ ಇರಬೇಕು. ಯಾವುದಾದರೂ ಚಟುವಟಿಕೆಯಲ್ಲಿ ನಿರತರಾಗಿದ್ದರೆ ಮಾತ್ರ ಸದೃಢ ಆರೋಗ್ಯಕರ ಜೀವನವು ಲಭಿಸುವುದು. ಕ್ರೀಡೆಯಲ್ಲಿ ಒಂದೆರಡು ಪ್ರಯತ್ನ ಮಾಡಿ ತ್ಯಜಿಸುವುದಲ್ಲ, ದಿನನಿತ್ಯ ಪರಿಶ್ರಮಪಟ್ಟು ಸಾಧನೆ ಮಾಡಬೇಕು ಎಂದರು.

ರಾಷ್ಟ್ರೀಯ ಕ್ರೀಡಾಪಟು ಮತ್ತು ಕ್ರೀಡಾ ತರಬೇತುದಾರರಾದ ಅಂತೋನಿ ಡಿಸೋಜ, ಕೆ.ಕೆ.ಬಿಂದ್ಯಾ ಮತ್ತು ಸುಬ್ಬಯ್ಯ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು ಮತ್ತು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ನಡೆದ ವಿವಿಧ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಬಹುಮಾನ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ಅಧೀಕ್ಷಕರಾದ ಕೃಷ್ಣೋಜಿ, ಇತರರು ಇದ್ದರು. ಜಿ.ಎಸ್. ಗುರುಸ್ವಾಮಿ ಅವರು ಸ್ವಾಗತಿಸಿದರು, ಜಸ್ಮಿತಾ ಮತ್ತು ಸಂಗಡಿಗರು ಪ್ರಾರ್ಥಿಸಿದರು, ತರಬೇತುದಾರ ಮಹಾಬಲ ವಂದಿಸಿದರು.

## ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ



ವಿರಾಜಪೇಟೆ, ಆ.29– ಕ್ರೀಡಾಕೂಟದಲ್ಲಿ ಸೋಲು–ಗೆಲುವು ಸಹಜ. ಆದರೆ ವಿದ್ಯಾರ್ಥಿಗಳು ಭಾಗವಹಿಸುವುದು ಮುಖ್ಯ ಎಂದು ಅಂತಾರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಹೇಳಿದರು.

ವಿರಾಜಪೇಟೆ ಜೂನಿಯರ್ ಕಾಲೇಜು ಮೈದಾನದಲ್ಲಿ ಶಿಕ್ಷಣ ಇಲಾಖೆ ವತಿಯಿಂದ ಅಯೋಜಿಸಿದ್ದ ಪ್ರಾಥಮಿಕ ಹಾಗೂ ಪ್ರೌಢಶಾಲೆ ವಿದ್ಯಾರ್ಥಿಗಳ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿದ ಬಳಿಕ ಮಾತನಾಡಿ, ನಾನು ಅಂತಾರಾಷ್ಟ್ರೀಯ ಮಟ್ಟದ ರಗ್ಬಿ ಆಟದಲ್ಲಿ 42 ಬಾರಿ ಭಾಗವಹಿಸಿದ್ದೇನೆ. ಆದರೆ ನಾನ್ನ ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಯ ಪ್ರಯಾಣ ಅಥ್ಲೆಟ್ ಆಗಿ ಇದೇ ವಿರಾಜಪೇಟೆ ಜೂನಿಯರ್ ಕಾಲೇಜು ಮೈದಾನದಲ್ಲಿ ಆರಂಭವಾಗಿತ್ತು, ಅನೇಕ ಜನರ ಉತ್ತಮ ಕ್ರೀಡಾ ಬದಕು ಆರಂಭವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಳುಗಳಾಗಿದ್ದಾರೆ. ಆದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಕ್ರೀಡಾಕೂಟದಲ್ಲಿ ಭಾಗವಹಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಬೇಕು ಎಂದ ತಿಮ್ಮಯ್ಯ, ಇಂದಿನ ಕ್ರೀಡಾಕೂಟದಿಂದ ರಾಜ್ಯ ಮಟ್ಟಕ್ಕೆ ಅಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸದಾ ಬೆಂಬಲ ನೀಡುವುದಾಗಿ ಹೇಳಿದರು.

ಸಮಾರಂಭದಲ್ಲಿ ಅನುದಾನಿತ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ರೋಹಿತ್, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಪ್ರವೀಣ್, ಉಪಾಧ್ಯಕ್ಷ ಮೊಣ್ಣಪ್ಪ, ತಾಲೂಕು ದೈಹಿಕರ ಸಂಘದ ಪರಿವೀಕ್ಷಕಿ ಗಾಯತ್ರಿ, ಉಪಾಧ್ಯಕ್ಷ ತಮ್ಮಯ್ಯ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀಶೈಲ ಬೀಳಗಿ ಕ್ರೀಡಾ ಧ್ವಜರೋಹಣ ನೆರವೇರಿಸಿದರು. ಅಂತಾರಾಷ್ಟ್ರೀಯ ಕ್ರೀಡಾಪಟು ಮಾದಂಡ ತಿಮ್ಮಯ್ಯ ಕ್ರೀಡಾ ಜ್ಯೋತಿ ಬೆಳಗಿದರು. ವೇದಿಕೆಯಲ್ಲಿ ಅಯ್ಯಪ್ಪ, ಪ್ರತೀಕಾ, ಅನ್ನಮ್ಮ, ಉಪಸ್ಥಿತರಿದ್ದರು. ಕ್ರೀಡಾಕೂಟದಲ್ಲಿ 17 ಪ್ರಾಥಮಿಕ ಹಾಗೂ 23 ಪ್ರೌಢಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಮಳೆಹಾನಿ ಪರಿಹಾರ ಶೀಘ್ರ ಬಿಡುಗಡೆಗೆ ಮಹಿಳಾ ಕಾಂಗ್ರೆಸ್ ಒತ್ತಾಯ



ಮಡಿಕೇರಿ, ಆ.29– ಕೊಡಗಿನಲ್ಲಿ ಎರಡು ತಿಂಗಳ ಕಾಲ ಸುರಿದ ಧಾರಾಕಾರ ಮಳೆಗೆ ಕೃಷಿಕ ವರ್ಗ ಭಾರೀ ನಷ್ಟ ಅನುಭವಿಸಿದ್ದು, ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ತಕ್ಷಣ ಸರ್ಕಾರ ಬೆಳೆಗಾರರ ಸಮಸ್ಯೆಗೆ ಸ್ಪಂದಿಸಿ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಹೊಟ್ಟೆಯಂಡ ಫ್ಯಾನ್ಸಿ ಬೆಳ್ಯಪ್ಪ ಒತ್ತಾಯಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಮಹಾಮಳೆಗೆ ಗುಡ್ಡ ಕುಸಿತ ಮತ್ತು ಪ್ರವಾಹ ಏರ್ಪಟ್ಟಾಗ ಸಚಿವರುಗಳು ಜಿಲ್ಲೆಗೆ ಭೇಟಿ ನೀಡಿದ್ದು, ಬಿಟ್ಟರೆ ಇಲ್ಲಿಯವರೆಗೆ ಕೃಷಿಕರಿಗೆ ಪರಿಹಾರವನ್ನು ನೀಡಿಲ್ಲ. ಕೊಳೆ ರೋಗಕ್ಕೆ ಬೆಳೆ ತುತ್ತಾಗಿದ್ದರೂ ಸೂಕ್ತ ರೀತಿಯಲ್ಲಿ ಸ್ಪಂದಿಸದೆ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಆರೋಪಿಸಿದ್ದಾರೆ.

ಕೊಡಗು ವಾಣಿಜ್ಯ ಬೆಳೆಗಳ ಮೂಲಕ ರಾಜ್ಯ ಮತ್ತು ದೇಶಕ್ಕೆ ಆರ್ಥಿಕ ಶಕ್ತಿಯನ್ನು ತುಂಬುತ್ತಿದೆ. ನಾಡಿನ ಜನ ಕಾವೇರಿ ನದಿ ನೀರಿನ ಲಾಭ ಪಡೆಯುತ್ತಿದ್ದಾರೆ. ಆದರೆ ಮಳೆಗಾಲದಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕುವ ಜಿಲ್ಲೆಯ ಬೆಳೆಗಾರರ ನೆರವಿಗೆ ಸರ್ಕಾರ ಬರುತ್ತಿಲ್ಲ. ಸಚಿವರು ಬಂದಂತೆ ಮಾಡಿ ಮರಳುತ್ತಿದ್ದಾರೆಯೇ ಹೊರತು ಇದರಿಂದ ಮಳೆಹಾನಿ ಸಂತ್ರಸ್ತರಿಗೆ ಯಾವುದೇ ಲಾಭವಾಗಿಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಸರ್ಕಾರ ಮುಂಬರುವ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಿರೋಧ ಪಕ್ಷದೊಂದಿಗೆ ರಾಜಕೀಯ ಪೈಪೋಟಿಗಿಳಿದಿದೆ. ಆ ಮೂಲಕ ಜಿಲ್ಲೆಗೆ ಬರಬೇಕಾದ ಪರಿಹಾರದ ಕುರಿತು ಜನರ ಹಾದಿ ತಪ್ಪಿಸುವ ಕಾರ್ಯ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

## ಬೇಟೆಗೆ ತೆರಳಿದ್ದ ವ್ಯಕ್ತಿ ಗುಂಡೇಟು ತಗುಲಿ ಸಾವು

ಕೊಡಗು, ಆ.29– ಬೇಟೆಗೆ ತೆರಳಿದ್ದ ಸಂದರ್ಭ ಗುಂಡೇಟು ತಗುಲಿ ವ್ಯಕ್ತಿ ಸಾವನ್ನಪ್ಪಿರುವ ಘಟನೆ ಸೋಮವಾರಪೇಟೆ ತಾಲೂಕಿನ ಯಡವಾರೆ ಗ್ರಾಮದಲ್ಲಿ ನಡೆದಿದೆ.

ಯಡವಾರೆ ಗ್ರಾಮದ ಶಿವಕುಮಾರ್ (58) ಮೃತ ದುರ್ದೈವಿ. ಸೋಮವಾರಪೇಟೆ ತಾಲೂಕಿನ ಗರ್ವಾಲೆ ಗ್ರಾಮದಲ್ಲಿ ಬೇಟೆಗೆ ತೆರಳಿದ್ದ ಸಂದರ್ಭ ಈ ಘಟನೆ ನಡೆದಿದೆ. ನಿನ್ನೆ ರಾತ್ರಿ 6 ಮಂದಿಯ ತಂಡ ಕಾಡು ಪ್ರಾಣಿಗಳ ಬೇಟೆಗೆ ತೆರಳಿತ್ತು. ಈ ವೇಳೆ ಶಿವಕುಮಾರ್ ಎಂಬಾತನ ಕುತ್ತಿಗೆ ಭಾಗಕ್ಕೆ ಗುಂಡು ತಗುಲಿದ್ದು, ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ.

ಇವರ ಜತೆ ಬೇಟೆಗೆ ತೆರಳಿದ್ದ ಚನ್ನಕೇಶವ, ಚೇತನ್, ನಂದೀಶ್, ಮಂಜುನಾಥ್‌ರನ್ನು ಸೋ.ಪೇಟೆ ಪೊಲೀಸರು ವಶಕ್ಕೆ ಪಡೆದಿದ್ದು, ಮತ್ತೋರ್ವ ಆರೋಪಿ ಪರಾರಿಯಾಗಿದ್ದಾನೆ.

# ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಯಿಂದ ಉತ್ತಮ ಭವಿಷ್ಯ

### ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಾರೋಪದಲ್ಲಿ ಶಾಸಕ ಕೆ.ಜಿ.ಬೋಪಯ್ಯ ಕರೆ



ವಿರಾಜಪೇಟೆ, ಆ.29– ಶಿಕ್ಷಣದಿಂದ ಯಾರು ವಂಚಿತರಾಗಬಾರದು. ವಿದ್ಯಾರ್ಥಿಗಳು ಪಾಠದೊಂದಿಗೆ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಮುಂದಾಗಬೇಕು ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಶಾಸಕರೂ ಆದ ಕೆ.ಜಿ.ಬೋಪಯ್ಯ ಕರೆ ನೀಡಿದ್ದಾರೆ.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿರಾಜಪೇಟೆ ಸರಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭವಾದಾಗ ಇದು ಈ ಮಟ್ಟಕ್ಕೆ ಬೆಳೆಯುತ್ತದೆ ಎಂದು ಅನಿಸಿರಲಿಲ್ಲ. ಈಗ ವಿದ್ಯಾರ್ಥಿಗಳ ಸಂಖ್ಯೆ ವರ್ಷ–ವರ್ಷವು ಹೆಚ್ಚುತ್ತಿದೆ. ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣವನ್ನು ಆರಂಭಿಸಲು ಉದ್ದೇಶಿಸಿದ್ದು, ಇದಕ್ಕಾಗಿ ವಿರಾಜಪೇಟೆ ಪುರಸಭೆಯಿಂದ ಒಂದೂವರೆ ಎಕರೆ ಜಾಗ ಪಡೆಯಲಾಗಿದೆ. ಈಗಾಗಲೇ ಸರ್ಕಾರ 1.5 ಕೋಟಿ ರೂ. ಹಣ ಬಿಡುಗಡೆ ಮಾಡಿದ್ದು, ಸುಸಜ್ಜಿತ ಕೊಠಡಿಗಳನ್ನು ನಿರ್ಮಿಸಲಾಗುತ್ತದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳುವಂತಾಗಬೇಕು ಎಂದರು.

ಅಂತಾರಾಷ್ಟ್ರೀಯ ರಗ್ಬಿ ಆಟಗಾರ ಮಾದಂಡ ತಿಮ್ಮಯ್ಯ ಮಾತನಾಡಿ, ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳ ಪಠ್ಯೇತರ ಚಟುವಟಿಕೆಯ ವರದಿ ನೋಡಿದಾಗ ಅನೇಕ ಉತ್ತಮ ಕ್ರೀಡಾ ಪ್ರತಿಬೆಗಳಿರುವುದು ಹೆಮ್ಮೆಯ ವಿಚಾರ. ಈ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದ ಉಪನ್ಯಾಸಕರಿದ್ದು ಅವರ ಮಾರ್ಗದರ್ಶನ ಪಡೆದು ಉತ್ತಮ ಬದುಕು ರೂಪಿಸಿಕೊಳ್ಳುವಂತಾಗಬೇಕು. ಹಿಂದೆ ನಾನು ಕೂಡ ಉತ್ತಮ ಕ್ರಿಕೆಟ್ ಆಟಗಾರನಾಗಬೇಕು ಎಂದು ಕನಸು ಕಂಡು ಅದಕ್ಕಾಗಿ ಸಾಕಷ್ಟು ಪರಿಶ್ರಮ ಪಟ್ಟ, ಆದರೆ ಆಗಿದ್ದು ರಗ್ಬಿ ಆಟಗಾರ ಎಂದರು.

ಈಗ ಎರಡು ವರ್ಷದಿಂದ ವಿರಾಜಪೇಟೆ ಪ್ರಗತಿ ಶಾಲೆಯಲ್ಲಿ ಕ್ರಿಕೆಟ್ ಅಕಾಡೆಮಿ ಸ್ಥಾಪಿಸಿ ಅದರಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತಿದ್ದು, ಕ್ರೀಡೆಯಲ್ಲಿ ಆಸಕ್ತಿ ಇದ್ದು ಮಾರ್ಗದರ್ಶನ ಬೇಕಿದ್ದರೆ ತಮ್ಮನ್ನು ಸಂಪರ್ಕಿಸುವಂತೆ ತಿಳಿಸಿದರು.

> ವಿದ್ಯಾರ್ಥಿಗಳು ದುಶ್ಚಟವನ್ನು ಬಿಟ್ಟು ಅಮೂಲ್ಯವಾದ ಬದುಕನ್ನು ರೂಪಿಸಲು ಜೀವನ ಮುಡಿಪಾಗಿಡಬೇಕು. ಸರ್ಕಾರಿ ಕಾಲೇಜುಗಳಲ್ಲಿ ಎಲ್ಲಾ ರೀತಿಯ ಸೌಲಭ್ಯವನ್ನು ನೀಡಿದರೂ ಕೆಲವು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಇದಕ್ಕೆ ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಇರುವ ಸರ್ಕಾರಿ ಕಾಲೇಜು ಎಂಬ ಪ್ರವೃತಿ ಕಾರಣ.
>
> –ಕೆ.ಜಿ. ಬೋಪಯ್ಯ, ಶಾಸಕರು,

ಮುಖ್ಯ ಭಾಷಣಕಾರರಾಗಿ ಸಾಹಿತಿ ರಂಗಕರ್ಮಿ ಮೈಸೂರಿನ ಸಿದ್ದಾರ್ಥನಗರ ಸರಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕ ಕೆ.ಎಂ.ಪ್ರಸನ್ನಕುಮಾರ್ ಕೆರಗೋಡು ಮಾತನಾಡಿ, ಸಂಸ್ಕಾರ ಮತ್ತು ಸಂಸ್ಕೃತಿ ಜಗತ್ತು ಆರಂಭದಲ್ಲಿಯೇ ಬೆಳೆದು ಬಂದಿದೆ ಇಂದಿನ ದಿನದಲ್ಲಿ ಎಲ್ಲವೂ ಸ್ಪರ್ಧಾತ್ಮಕವಾಗಿದ್ದು, ಶಿಕ್ಷಣವು ಅದೇ ಹಾದಿಯಲ್ಲಿ ವೇಗವಾಗಿ ಸಾಗುತ್ತಿದೆ. ಕೌಶಲ್ಯಯುತವಾದ ಶಿಕ್ಷಣದಿಂದ ಮಾತ್ರ ಇಂದು ನಾವು ಏನನ್ನಾದರೂ ಎದುರಿಸಬಹುದು ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳಬಹುದು. ವಿದ್ಯಾರ್ಥಿ ಜೀವನದಲ್ಲಿ ಓದುವ ಪಠ್ಯ ಮಾತ್ರವಲ್ಲದೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ನಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಬಹುದು ಎಂದರಲ್ಲದೆ ವಿದ್ಯಾರ್ಥಿಗಳೊಂದಿಗೆ ಹಲವು ವಿಚಾರಗಳ ಕುರಿತು ಸಂವಾದ ನಡೆಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಸಿ.ದಯಾನಂದ ಸಭೆಯನ್ನುದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರಾದ ಮೂಕೊಂಡ ಶಶಿ ಸುಬ್ರಮಣಿ, ಉತ್ತಪ್ಪ, ಪುರಸಭೆ ಸದಸ್ಯೆ ತಸ್ಲಿಂ ಅಕ್ತರ್, ಕ್ರೀಡಾ ಸಮಿತಿ ರೇಂಜರ್ ಘಟಕದ ಸಂಚಾಲಕರಾದ ಎಂ.ರಾಖಿ ಪೂವಣ್ಣ, ವಿದ್ಯಾರ್ಥಿ ಸಮಿತಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು. ಉಪನ್ಯಾಸಕ ನಾಗರಾಜು ಸ್ವಾಗತಿಸಿದರು. ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಡಾ.ಡಿ.ಕೆ. ಉಷಾ ವಾರ್ಷಿಕ ವರದಿ ಮಂಡಿಸಿದರೆ, ವಿದ್ಯಾರ್ಥಿ ದಿವಿತ ಮತ್ತು ನಯನ ನಿರೂಪಿಸಿದರು. ಕೊನೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

# ಚಾ.ನಗರ ಜಿಲ್ಲೆಯಾದ್ಯಂತ ಭಾರೀ ಮಳೆ; ಹಲವು ಗ್ರಾಮಗಳು ಜಲಾವೃತ

### • ಸಾವಿರಾರು ಎಕರೆ ಬೆಳೆ ನಾಶ, ಲಕ್ಷಾಂತರ ರೂ. ನಷ್ಟ • ಮನೆಗಳ ಗೋಡೆ ಕುಸಿತ, ಜನರಲ್ಲಿ ಆತಂಕ

**ಚಾಮರಾಜನಗರ, ಆ.29–ಜಿಲ್ಲೆಯಾದ್ಯಂತ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಗ್ಗೆವರೆಗೂ ಭಾರೀ ಮಳೆ ಸುರಿದಿದ್ದು, ಮಧ್ಯಾಹ್ನದ ನಂತರ ಜಿಟಿಜಿಟಿಯಾಗಿ ಮುಂದುವರೆಯಿತು. ಪರಿಣಾಮ ಹಲವು ಗ್ರಾಮಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಯಾದರೆ, ಸಾವಿರಾರು ಎಕರೆ ಫಸಲು ಜಲಾವೃತವಾಗಿ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಹಲವು ಮನೆಗಳ ಗೋಡೆ ಕುಸಿದಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ.**



ಕೊಳ್ಳೇಗಾಲದಲ್ಲಿ ಸರ್.ಕಾಟನ್ ಚಾನಲ್‌ನಲ್ಲಿ ಹೂಳೆತ್ತುತ್ತಿರುವುದು.

ಕಳೆದ ಎರಡ್ಮೂರು ದಿನಗಳಿಂದ ಜಿಲ್ಲೆಯಾದ್ಯಂತ ಮಳೆ ಸುರಿಯುತ್ತಿರುವ ಕಾರಣ ಬಹುತೇಕ ಕೆರೆ–ಕಟ್ಟೆಗಳು ಭರ್ತಿ ಆಗಿವೆ. ಮಳೆ ಕಾರಣ ಜಿಲ್ಲೆಯ ಎಲ್ಲಾ ಶಾಲಾ–ಕಾಲೇಜುಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿತ್ತು.

**ಚಾಮರಾಜನಗರ:** ಭಾರೀ ಮಳೆಯಿಂದ ಸಂತೇಮರಳ್ಳಿ, ಯಡಿಯೂರು ಗ್ರಾಮದ ಬಳಿ ರಸ್ತೆ ಜಲಾವೃತವಾದ ಪರಿಣಾಮ ಚಾಮರಾಜನಗರ–ಸಂತೇಮರಳ್ಳಿ ರಾಷ್ಟ್ರೀಯ ಹೆದ್ದಾರಿ ಸಂಚಾರವನ್ನು ಕೆಲ ಸಮಯ ಸ್ಥಗಿತಗೊಳಿಸಲಾಗಿತ್ತು.

ತಾಲೂಕಿನ ಮಹಂತಾಳಪುರದಲ್ಲಿನ ತಗ್ಗು ಪ್ರದೇಶದಲ್ಲಿನ 8 ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ. ಚಾಮರಾಜನಗರ ನಾಯಕರ ಬೀದಿಯ ಕುಮಾರ್ ಎಂಬುವವರ ಮನೆ ಕುಸಿದಿದೆ. ಅಲ್ಲದೆ ಗೋಡೆ ಬೀಳುವ ಸಂಭವ ಅರಿತು ಕುಟುಂಬಸ್ಥರು ಮನೆಯಿಂದ ಹೊರ ಬಂದಿದ್ದರಿಂದ ಭಾರೀ ಅನಾಹುತ ತಪ್ಪಿದೆ.

ಸುವರ್ಣಾವತಿ ಜಲಾಶಯದಿಂದ ಹೆಚ್ಚಿನ ನೀರನ್ನು ಹೊರ ಬಿಟ್ಟಿರುವುದರಿಂದ ನದಿ ಪಾತ್ರದ ಕೆಲ ಗ್ರಾಮಗಳಲ್ಲಿ ನೆರೆ ಎದುರಾಗಿದೆ. ಹಲವು ಜಮೀನುಗಳಿಗೆ ನೀರು ನುಗ್ಗಿ, ಸಂಗ್ರಹಿಸಿದ್ದ ತೆಂಗಿನಕಾಯಿ ಸೇರಿದಂತೆ ನಾನಾ ಫಸಲು ನೀರು ಪಾಲಾಗಿದೆ.

**ಕೊಳ್ಳೇಗಾಲ:** ಕೊಳ್ಳೇಗಾಲ ನಗರದಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಬೆಳಗ್ಗಿನಿಂದ ಸುರಿದ ಭಾರೀ ಮಳೆಯಿಂದಾಗಿ ಹಲವು ಬಡಾವಣೆಗೆ ನೀರು ನುಗ್ಗಿ ನಾಗರಿಕರು, ವರ್ತಕರು ಭವಣೆ ಪಡುವಂತಾಯಿತು. ನಗರದ ಹೃದಯ ಭಾಗದಲ್ಲಿರುವ ಸರ್ಕಟಲ್ ಚಾನಲ್ ಅಪೂರ್ಣ ಕಾಮಗಾರಿ ಪರಿಣಾಮ ರಂಗನಾಥನ ಕೆರೆ ಕೋಡಿ ಬಿದ್ದ ನೀರು ಹಾಗೂ ಮಳೆ ನೀರು ಹರಿದು ನಗರದ ಸುಬ್ರಮಣ್ಯೇಶ್ವರ ಗುಡಿಬೀದಿ, ಕಾಶಿವಿಶ್ವನಾಥ ಬಡಾವಣೆ, ಹಳೆ ಕುರುಬರ ಬಡಾವಣೆ, ರಾಜ್‌ಕುಮಾರ್ ರಸ್ತೆ, ಅಂಬೇಡ್ಕರ್ ರಸ್ತೆ ಸೇರಿದಂತೆ ಹಲವು ತಗ್ಗು ಪ್ರದೇಶಗಳ ನಿವಾಸಿಗಳು ಸಮಸ್ಯೆ ಎದುರಿಸುವಂತಾಯಿತು. ಮಳಿಗೆಗಳಿಗೆ ನೀರು ನುಗ್ಗಿದ್ದರಿಂದ ವರ್ತಕರು, ಅಂಗಡಿ ಮಾಲಿಕರು ತೊಂದರೆ ಪಡುವಂತಾಯಿತು. ಕೆಲವು ಮನೆಗಳಿಗೂ ನೀರು ನುಗ್ಗಿ ಅವಾಂತರ ಸೃಷ್ಟಿಯಾಯಿತು. ನಾಗರೀಕರು ನಗರಸಭೆ ಹಾಗೂ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಕಾರ್ಯ ವೈಖರಿಗೆ ನಾಗರಿಕರು ಹಿಡಿ ಶಾಪ ಹಾಕಿದರು. ವಿಷಯ ತಿಳಿಯುತ್ತಿದ್ದಂತೆ ನಗರಸಭಾ ಸದಸ್ಯರಾದ ಚಿಂತು ಪರಮೇಶ್, ಎ.ಪಿ.ಶಂಕರ್, ಮನೋಹರ್ ತಕ್ಷಣ ಧಾವಿಸಿ ಜೆಸಿಬಿ ಮೂಲಕ ಸರ್ಕಟಲ್ ಚಾಲನ್ ಹೊಳೆತ್ತಿಸಿ, ರಂಗನಾಥನ ಕೆರೆಯಿಂದ ಹರಿದು ಬರುತ್ತಿದ್ದ ನೀರು ಹಾಗೂ ಕಲುಷಿತ ನೀರು ಸರಾಗವಾಗಿ ಹರಿಯಲು ಅವಕಾಶ ಕಲ್ಪಿಸಿದರು. ಇದರಿಂದ ಹೆಚ್ಚಿನ ಮನೆಗಳಿಗೆ ಕಲುಷಿತ ನೀರು ನುಗ್ಗುವುದು ತಪ್ಪಿಸಿದಂತಾಯಿತು.

**ಗುಂಡ್ಲುಪೇಟೆ:** ಪಟ್ಟಣ ಹಾಗೂ ತಾಲೂಕಿನಾದ್ಯಂತ ರಾತ್ರಿಯಿಂದಲೇ ಶುರುವಾದ ಜಿಟಿಜಿಟಿ ಮಳೆಯು ನಂತರ ಒಂದೇ ಸಮನೇ ಧೋ ಎಂದು ಸುರಿಯಿತು. ಪರಿಣಾಮ ಪಟ್ಟಣದಲ್ಲಿ ಪಾದಾಚಾರಿಗಳು, ವಾಹನ ಸವಾರರು, ನಾಗರಿಕರು, ವ್ಯಾಪಾರಸ್ಥರು ಹೈರಾಣಾದರು. ಹಬ್ಬದ ಖರೀದಿಯಲ್ಲಿದ್ದ ಜನತೆಗೆ ಮಳೆ ಕೆಲಕಾಲ ಅಡ್ಡಿಯುಂಟು ಮಾಡಿತು. ಮಧ್ಯಾಹ್ನ 2 ಗಂಟೆಯ ನಂತರ ಬಿಡುವು ನೀಡಿದ ಪರಿಣಾಮ ಗೌರಿ ಮತ್ತು ಗಣೇಶ ಹಬ್ಬದ ವಸ್ತುಗಳ ಖರೀದಿಗೆ ಜನ ಮುಗಿಬಿದ್ದರು.

ಒಟ್ಟಾರೇ ಜಿಲ್ಲೆಯಾದ್ಯಂತ ಗಾಳಿ ಸಹಿತ ಸತತವಾಗಿ ಮಳೆ ಸುರಿಯುತ್ತಿರುವ ಕಾರಣ ಕಳೆದ ಮೂರು ದಿನಗಳಿಂದ 24 ಮನೆಗಳು ಕುಸಿದಿವೆ. ಅದೃಷ್ಟವಾಶತ್ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಬಹುತೇಕ ಕಡೆ ಬೆಳೆ ಹಾನಿಗೀಡಾಗಿದ್ದು, ನಷ್ಟದ ವಿವರ ಪಡೆಯಲಾಗುತ್ತಿದೆ ಎಂದು ಜಿಲ್ಲಾಡಳಿತ ತಿಳಿಸಿದೆ.



ಭಾರೀ ಮಳೆಯಿಂದ ಜಲಾವೃತವಾದ ಚಾಮರಾಜನಗರದ ಜೋಡಿ ರಸ್ತೆ.

### ಕಾಡಾ ಅಧ್ಯಕ್ಷ ನಿಜಗುಣರಾಜು, ಜಿಪಂ ಸಿಇಓ ಗಾಯತ್ರಿ ಭೇಟಿ, ಪರಿಶೀಲನೆ

**ಚಾಮರಾಜನಗರ:** ಜಿಲ್ಲಾದ್ಯಂತ ಭಾರೀ ಮಳೆಯಿಂದ ಜಲಾವೃತವಾಗಿದ್ದ ಹಲವು ಗ್ರಾಮಗಳಿಗೆ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು ಹಾಗೂ ಜಿಪಂ ಸಿಇಓ ಕೆ.ಎಂ. ಗಾಯತ್ರಿ ಸೋಮವಾರ ಭೇಟಿ ನೀಡಿ, ಪರಿಶೀಲಿಸಿದರು.

ಹಂಡ್ರಕಳ್ಳಿ ಮೋಳೆ, ಹೆಬ್ಬಸೂರು, ನಾಗವಳ್ಳಿ, ಜ್ಯೋತಿಗೌಡಪುರ ಹಾಗೂ ನಗರದ ಹಲವು ಬಡಾವಣೆಗಳಿಗೆ ನಿಜಗುಣರಾಜು ಅವರು ಭೇಟಿ ನೀಡಿ ಪರಿಶೀಲಿಸಿದರು. ನಷ್ಟ ಅನುಭವಿಸುವವರು ಹಾಗೂ ಸಂತ್ರಸ್ತರಿಗೆ ತುರ್ತಾಗಿ ಪರಿಹಾರ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ತಹಸೀಲ್ದಾರ್ ಅವರಿಗೆ ದೂರವಾಣಿ ಮೂಲಕ ತಿಳಿಸಿದರು. ಇದೇ ವೇಳೆ ಜಿಪಂ ಸಿಇಓ ಡಾ.ಕೆ.ಎಂ ಗಾಯತ್ರಿ ಅವರು, ಜ್ಯೋತಿಗೌಡನಪುರ, ಕೋಡಿ ಮೋಳೆಗೆ ಭೇಟಿ ನೀಡಿದರಲ್ಲದೆ, ಮಳೆನೀರು ತೆರವು ಕಾರ್ಯಾಚರಣೆ ವೀಕ್ಷಿಸಿದರು. ಜಲಾವೃತಗೊಂಡಿರುವ ಮನೆಗಳ ನಿವಾಸಿಗಳಿಗೆ ಬೇರೆಡೆ ಆಶ್ರಯ ಕಲ್ಪಿಸುವಂತೆ ಹಾಗೂ ಕಾಳಜಿ ಕೇಂದ್ರವನ್ನು ತಕ್ಷಣವೇ ತೆರೆಯುವಂತೆ ತಹಸೀಲ್ದಾರ್‌ಗೆ ಸೂಚಿಸಿದರು.



ಮಳೆಯಿಂದ ಯಡಿಯೂರು ಬಳಿ ರಸ್ತೆ ಜಲಾವೃತವಾದ ಪರಿಣಾಮ ಚಾಮರಾಜನಗರ–ಸಂತೇಮರಳ್ಳಿ ರಾಷ್ಟ್ರೀಯ ಹೆದ್ದಾರಿ ಸಂಚಾರ ಕೆಲ ಸಮಯ ಸ್ಥಗಿತಗೊಳಿಸಲಾಗಿತ್ತು.

### ಮಗು ಸೇರಿ 8 ಜನರ ಸ್ಥಳಾಂತರ



ಮಳೆಯಿಂದ ಚಾ.ನಗರ ತಾಲೂಕಿನ ಮಹಾಂತಾಳಪುರ ಮಹದೇವಪ್ಪ ಎಂಬುವವರ ತೋಡದ ಮನೆ ಜಲಾವೃತವಾಗಿತ್ತು. ಮನೆಯ ತಾರಸಿಯ ಮೇಲೆ 11 ತಿಂಗಳ ಮಗು ಸೇರಿದಂತೆ ಕುಟುಂಬದ ಎಂಟು ಮಂದಿ ಆಶ್ರಯ ಪಡೆದಿದ್ದರು. ವಿಷಯ ತಿಳಿದು ಅಗ್ನಿ ಶಾಮಕ ಸಿಬ್ಬಂದಿ ಸ್ಥಳಕ್ಕೆ ದೋಣಿಯಲ್ಲಿ ತೆರಳಿ ಎಂಟೂ ಜನರನ್ನು ರಕ್ಷಿಸಿದರು. ಇವರನ್ನು ಸಂತೇಮರಳ್ಳಿಯ ಪ್ರವಾಸಿ ಮಂದಿರದಲ್ಲಿ ಇರಿಸಲಾಗಿದೆ.



ಹೆಬ್ಬಸೂರಿನಲ್ಲಿ ಮಳೆಗೆ ಕೊಚ್ಚಿ ಹೋದ ತೆಂಗಿನ ಕಾಯಿಗಳು

### ವಿದ್ಯುತ್ ಕಂಬ ಬಿದ್ದು ಗೂಡ್ಸ್ ವಾಹನ ಜಖಂ

**ಬೇಗೂರು:** ಗುಂಡ್ಲುಪೇಟೆ ತಾಲೂಕಿನ ಯಡವನಹಳ್ಳಿ ಗ್ರಾಮದ ಬಳಿ ಸೋಮವಾರ ಸುರಿದ ಮಳೆಗೆ ಹೊಣಕನಪುರ ಸಂಪರ್ಕ ರಸ್ತೆ ಪಕ್ಕದ ವಿದ್ಯುತ್ ಕಂಬ ಧರೆಗುರುಳಿದು ರಸ್ತೆಯಲ್ಲಿ ಚಲ್ಲಿಸುತ್ತಿದ್ದ ಗೂಡ್ಸ್ ವಾಹನ ಜಖಂಗೊಂಡಿದೆ.



ವಿಷಯ ತಿಳಿದು ಬೇಗೂರು ಠಾಣೆಯ ಸಬ್ ಇನ್ಸ್‌ಪೆಕ್ಟರ್ ಜಗದೀಶ್ ಧೂಳ್‌ಶೆಟ್ಟಿ, ಸೆಸ್ಕ್ ಎಇಇ ರಾಮಚಂದ್ರು ಸಿಬ್ಬಂದಿ ಜೊತೆಗೆ ತೆರಳಿ ಪರಿಶೀಲಿಸಿದರು. ಯಡವನಹಳ್ಳಿ ಗ್ರಾಮದಲ್ಲಿ 10 ರಿಂದ 15 ವಿದ್ಯುತ್ ಕಂಬ, ಮರಗಳು ಧರೆಗುರುಳಿವೆ. ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಗ್ರಾಮಸ್ಥರು ಮತ್ತು ಪೊಲೀಸರು ಜೊತೆಗೂಡಿ ಕಂಬ ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು. ವಿದ್ಯುತ್ ಕಂಬಗಳ ದುರಸ್ತಿ ಕಾರ್ಯ ಮುಂದುವರೆದಿದೆ.

### ಮನೆಗಳಿಗೆ ನುಗ್ಗಿದ ಅಡ್ಡಹಳ್ಳ ನೀರು

**ಚಾಮರಾಜನಗರ:** ತಾಲೂಕಿನ ಮಾದಾಪುರ ಸಮೀಪದ ಕಿರಗಸೂರು ಗ್ರಾಮದಲ್ಲಿ ಮಳೆಗೆ ಅಡ್ಡಹಳ್ಳ ತುಂಬಿ ಗ್ರಾಮಕ್ಕೆ ನುಗ್ಗಿದ್ದು, ರಸ್ತೆಗಳಲ್ಲಿ ನೀರು ಕಾಲುವೆಯಂತೆ ಹರಿಯಿತು. ಅಲ್ಲದೆ ಮನೆ ಹಾಗೂ ಜಮೀನುಗಳಿಗೆ ಮಳೆ ನೀರು ನುಗ್ಗಿ ಸಾಕಷ್ಟು ಅವಾಂತರ ಸೃಷ್ಟಿಯಾಯಿತು. ಗ್ರಾಪಂ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸದಸ್ಯರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



ಗ್ರಾಮದ ಅಡ್ಡಹಳ್ಳ ಸಣ್ಣ ಮಳೆಗೂ ತುಂಬಿ ಗ್ರಾಮಕ್ಕೆ ನೀರು ನುಗ್ಗಿ ಸಾಕಷ್ಟು ಹಾನಿಯುಂಟು ಮಾಡುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕ್ರಮ ವಹಿಸಬೇಕು ಎಂದು ಗ್ರಾಪಂ ಸದಸ್ಯ ಸೈಯದ್ ನಜ್ರುಲ್ಲಾ ಮನವಿ ಮಾಡಿದ್ದಾರೆ.

### ರಾಮಕೃಷ್ಣಹೆಗಡೆ ಜನ್ಮ ದಿನಾಚರಣೆ

# ಲೋಕಶಕ್ತಿ ಭಾರತೀಯ ಶಕ್ತಿಯಾಗಲಿ

### ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ ವಿ.ಸ್ಥಾವರಮಠ್ ಆಶಯ



ಚಾಮರಾಜನಗರ, ಆ.29–ದಿವಂಗತ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರು ಸ್ಥಾಪಿಸಿರುವ ಲೋಕಶಕ್ತಿ ಪಕ್ಷ ಭಾರತೀಯ ಶಕ್ತಿಯಾಗಿ ಹೊರಹೊಮ್ಮಬೇಕು. ಇದಕ್ಕೆ ಜಿಲ್ಲೆಯ ಸಂಪೂರ್ಣ ಬೆಂಬಲ ಸಿಗಬೇಕು ಎಂದು ಪಕ್ಷದ ರಾಜ್ಯಾಧ್ಯಕ್ಷ ಚಂದ್ರಶೇಖರ್ ವಿ.ಸ್ಥಾವರಮಠ್ ಹೇಳಿದರು.

ನಗರದ ವರ್ತಕರ ಭವನದಲ್ಲಿ ಲೋಕಶಕ್ತಿ ಪಕ್ಷದಿಂದ ನಡೆದ ಪಕ್ಷದ ಸಂಸ್ಥಾಪಕರು, ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣಹೆಗಡೆ ಅವರ 97ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ರಾಮಕೃಷ್ಣ ಹೆಗಡೆಯವರು ರಾಜ್ಯದಲ್ಲಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲಿ ಪ್ರಭಾವಿ ನಾಯಕರಾಗಿದ್ದರು. ಕೇಂದ್ರದಲ್ಲಿ ವಿ.ಪಿ.ಸಿಂಗ್ ನೇತೃತ್ವದ ಸರ್ಕಾರ ರಚನೆಯಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು ಎಂದು ಸ್ಮರಿಸಿದರು.

1957ರಲ್ಲಿ ಶಿರಸಿಯಿಂದ ರಾಮಕೃಷ್ಣ ಹೆಗಡೆ ಶಾಸಕರಾಗಿ ಆಯ್ಕೆಯಾಗಿ ಕೇಂದ್ರ ಸಚಿವರಾಗಿ, ನಂತರ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕಪ್ಪುಚುಕ್ಕಿ ಇಲ್ಲದೆ ಆಡಳಿತ ನೀಡಿದರು. ಅವರ ವಿರುದ್ಧ ಒಂದು ಆರೋಪ ಬಂದಾಗ ಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಏಕೈಕ ರಾಜಕಾರಣಿಯಾಗಿದ್ದರು. ಇಂದಿನ ರಾಜಕಾರಣಿಗಳ ಅನೇಕ ಭ್ರಷ್ಟಾಚಾರ ಇದ್ದರೂ ರಾಜೀನಾಮೆ ನೀಡುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಹಿಳೆಯರಿಗೆ ಶೇ.25 ಮೀಸಲಾತಿ ಕೊಟ್ಟ ರಾಮಕೃಷ್ಣಹೆಗಡೆ ಅವರು, ಭ್ರಷ್ಟಾಚಾರ ನಿಗ್ರಹಕ್ಕೆ 1984ರಲ್ಲಿ ಲೋಕಾಯುಕ್ತ ಸಂಸ್ಥೆ ಹುಟ್ಟು ಹಾಕಿದರು ಎಂದರು.

ಇದೇ ಸಂದರ್ಭದಲ್ಲಿ 50ಕ್ಕೂ ಹೆಚ್ಚು ಪುರುಷರು ಹಾಗೂ ಮಹಿಳೆಯರು ಲೋಕ ಶಕ್ತಿ ಪಕ್ಷಕ್ಕೆ ಸೇರ್ಪಡೆಯಾದರು. ರಾಜ್ಯ ಯುವ ಘಟಕದ ಅಧ್ಯಕ್ಷ ಕೆ.ಆರ್. ದಯಾನಂದಗೌಡ, ಜಿಲ್ಲಾಧ್ಯಕ್ಷ ಎಲ್.ಮಹದೇವಯ್ಯ ಕೋಡಿಉಗನೆ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರವಿ ಯಾದವ್, ರಾಜ್ಯ ಉಪಾಧ್ಯಕ್ಷ ರಾಮಚಂದ್ರ, ರಾಜ್ಯ ಪ್ರಧಾನ ಕಾರ್ಯದರ್ಶಿ ಸತೀಶ್ ಗೋವಿಂದಪ್ಪ ಜಿಲ್ಲಾಧ್ಯಕ್ಷ ಎಲ್.ಮಹದೇವಯ್ಯ, ಕೋಡಿಉಗನೆ, ಜಿಲ್ಲಾ ಪ್ರಧಾನ ಸಂಘಟನಾ ಕಾರ್ಯದರ್ಶಿ ನಂದೀಶ್ ಸಂಘಟನಾ ಕಾರ್ಯದರ್ಶಿ ಮೋಹನ್ ನರಸಿಂಹಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಸುರೇಶ್, ಆನಂದಗುಬ್ಬಳ್ಳಿ, ಎ.ರಾಜೇಂದ್ರ, ಮಲ್ಲೇಶ್, ಸಿದ್ದಾರ್ಥ ಇತರರಿದ್ದರು.

ಒಂದನೇ ಪುಟದಿಂದ

## ವಾಹನಗಳಿಗೆ ತೆರಿಗೆ ವಿನಾಯ್ತಿಗೆ ಪ್ರಸ್ತಾವನೆ

ವಿಶೇಷಾಧಿಕಾರಿಯಾದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸೇರಿದಂತೆ ಎಲ್ಲಾ ಉಪ ಸಮಿತಿಗಳ ಪದಾಧಿಕಾರಿ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡು ಸಿದ್ಧತಾ ಕಾರ್ಯಗಳ ಬಗ್ಗೆ ಸಚಿವರಿಗೆ ವಿವರಣೆ ನೀಡಿದರು. ಇದೇ ವೇಳೆ ಈ ಬಾರಿ ದಸರಾದಲ್ಲಿ ಹೊಸದಾಗಿ ರೂಪಿಸುವ ಕೆಲ ಕಾರ್ಯಕ್ರಮಗಳು ಹಾಗೂ ಕ್ರಮಗಳ ಬಗ್ಗೆ ಚರ್ಚೆ ನಡೆಸಿರುವುದನ್ನು ಸಚಿವರ ಮುಂದಿಟ್ಟರು.

**ಏಕೀಕೃತ ಟಿಕೆಟ್:** ದಸರಾ ಸಂದರ್ಭದಲ್ಲಿ ವಿವಿಧ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಹಾಗೂ ದಸರಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಬಯಸುವವರಿಗೆ ಏಕೀಕೃತ ಟಿಕೆಟ್ ವ್ಯವಸ್ಥೆ ಕಲ್ಪಿಸುವ ಬಗ್ಗೆ ಚಿಂತನೆ ಇದೆ ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಸಚಿವರಿಗೆ ತಿಳಿಸಿದರು. ಒಂದೇ ಟಿಕೆಟ್ ಕೊಂಡು ಅರಮನೆ, ಮೃಗಾಲಯ, ಚಾಮುಂಡಿ ಬೆಟ್ಟ, ದಸರಾ ವಸ್ತು ಪ್ರದರ್ಶನ, ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡಲು ಅವಕಾಶ ಕಲ್ಪಿಸಬಹುದು. ಆಗ ಆಯಾಯ ಸ್ಥಳದಲ್ಲಿ ಟಿಕೆಟ್ ಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಇದರಿಂದ ಪ್ರವಾಸಿಗರಿಗೆ ಸಮಯ ವ್ಯರ್ಥವಾಗುವುದಿಲ್ಲ. ಮೈಸೂರು ಸಮೀಪದ ಕೆಆರ್‌ಎಸ್ ಅನ್ನೂ ಜೊತೆಗೂಡಿಸಿಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸಲಾಗುತ್ತಿದೆ. ಈ ಏಕೀಕೃತ ಟಿಕೆಟ್ ವ್ಯವಸ್ಥೆ ಇನ್ನೂ ಪ್ರಯತ್ನದ ಹಂತದಲ್ಲಿದ್ದು, ಯಾವ ಸ್ಥಳದ ಆದಾಯಕ್ಕೆ ಹೊಡೆತ ಬೀಳದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಯೋಜನೆ ರೂಪಿಸಬೇಕಿದೆ ಎಂದು ತಿಳಿಸಿದರು.

**ಹೊಸ ಕಾರ್ಯಕ್ರಮ:** ರೈತ ದಸರಾ, ಕೃಷಿ ಮೇಳ ಮಾದರಿಯಲ್ಲಿ ಈ ಬಾರಿ ಹೊಸದಾಗಿ ಕೈಗಾರಿಕಾ ದಸರಾ ಹಾಗೂ ಆರೋಗ್ಯ ಮೇಳ ಆಯೋಜಿಸುವ ಚಿಂತನೆ ಇದೆ ಎಂದು ಅಪರ ಜಿಲ್ಲಾಧಿಕಾರಿ ಬಿ.ಎಸ್.ಮಂಜುನಾಥಸ್ವಾಮಿ ಸಭೆಗೆ ತಿಳಿಸಿದರು. ಆರೋಗ್ಯ ಮೇಳ ಹಾಗೂ ಆರೋಗ್ಯ ಸಂಬಂಧಿತ ವಸ್ತುಪ್ರದರ್ಶನ ಆಯೋಜಿಸಲು ಜಿಲ್ಲಾ ಆರೋಗ್ಯ ಕಲ್ಯಾಣಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಹಾಗೆಯೇ ನಾಲ್ಕು ದಿನ ಕೈಗಾರಿಕಾ ದಸರಾ ಆಚರಣೆಗೆ ಕೈಗಾರಿಕಾ ಸಂಘದವರು ಮನವಿ ಮಾಡಿದ್ದಾರೆ ಎಂದರು.

**ಧ್ಯೇಯ ಗೀತೆ:** ಈ ಬಾರಿ ದಸರಾಗೆ 'ಧ್ಯೇಯ ಗೀತೆ(ಥೀಮ್ ಸಾಂಗ್)' ಮೂಲಕ ಹೊಸ ಮೆರುಗು ನೀಡುವ ಸಂಬಂಧ ತಯಾರಿ ನಡೆದಿದೆ. ಈಗಾಗಲೇ ಸ್ಥಳೀಯ ಕಲಾವಿದರು ರೂಪಿಸಿರುವ ಕೆಲ ಗೀತೆಗಳನ್ನು ಸಚಿವರೆದುರು ಪ್ರಸಾರ ಮಾಡಲಾಯಿತು. ಮತ್ತಷ್ಟು ಕಲಾವಿದರು ನೀಡುವ ಗೀತೆಗಳನ್ನು ಅವಲೋಕಿಸಿ ಅಂತಿಮವಾಗಿ ಆಯ್ಕೆ ಮಾಡಲಾಗುವುದು. ಆಯ್ಕೆ ಮಾಡುವ ದಸರಾ ಧ್ಯೇಯ ಗೀತೆಯನ್ನು ಎಲ್ಲಾ ಕಾರ್ಯಕ್ರಮಗಳಲ್ಲೂ ಪ್ರಸಾರ ಮಾಡಬಹುದು ಎಂದು ಮಂಜುನಾಥ ಸ್ವಾಮಿ ತಿಳಿಸಿದರು.

ಸಭೆಯಲ್ಲಿ ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರು, ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಜಿಪಂ ಸಿಇಓ ಪೂರ್ಣಿಮಾ, ಪಾಲಿಕೆ ಆಯುಕ್ತ ಲಕ್ಷ್ಮಿ ಕಾಂತ್ ರೆಡ್ಡಿ, ಡಿಸಿಎಫ್ ಡಾ.ವಿ.ಕರಿಕಾಳನ್ ಮತ್ತಿತರ ಅಧಿಕಾರಿಗಳು ಹಾಜರಿದ್ದರು.

## ಅದ್ಧೂರಿ ದಸರಾ ಮೇಲೆ ವರುಣನ ಕಾರ್ಮೋಡ

ನಡೆಯುತ್ತಿದೆ. ಆದರೆ ಬಿಟ್ಟು ಬಿಡದಂತೆ ಕಾಡುತ್ತಿರುವ ಮಳೆ, ವೈಭವಕ್ಕೆ ಅಡ್ಡಿ ಮಾಡಬಹುದೇ? ಎಂಬ ಆತಂಕ ಸೃಷ್ಟಿಸಿದೆ. ಮೈಸೂರಿನಲ್ಲಿ ಸೋಮವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, 'ಕಳೆದ ಎರಡು ವರ್ಷಗಳಲ್ಲಿ ದಸರಾ, ಸರಳ ಮತ್ತು ಸಾಂಪ್ರದಾಯಿಕ ಆಚರಣೆಗೆ ಸೀಮಿತವಾಯಿತು. ಆದರೆ ಈ ವರ್ಷ ಅದ್ಧೂರಿಯಾಗಿ ಆಚರಿಸಲು ದಸರಾ ಉನ್ನತ ಸಮಿತಿ ನಿರ್ಧರಿಸಿದೆ. ಆದರೆ ಮಳೆಯಿಂದ ಸಾಕಷ್ಟು ಹಾನಿ ಉಂಟಾಗುತ್ತಿದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ದಸರಾ ಆಚರಣೆಯ ರೂಪುರೇಷೆ ಸಿದ್ಧಪಡಿಸಲಾಗುವುದು' ಎಂದಿದ್ದಾರೆ. ದಸರಾ ಪೂರ್ವಭಾವಿ ಸಭೆಯಲ್ಲೂ ಈ ಬಗ್ಗೆ ಪ್ರಸ್ತಾಪವಾಗಿದೆ ಎಂದು ತಿಳಿದು ಬಂದಿದೆ. ಉನ್ನತ ಮಟ್ಟದ ಸಮಿತಿ ಸಭೆಯ ಬಳಿಕ ಮುಖ್ಯಮಂತ್ರಿಗಳು ಘೋಷಿಸಿದಂತೆ ದಸರಾ ಪ್ರಚಾರ ಕಾರ್ಯವೂ ಆರಂಭವಾಗಿಲ್ಲ. ಈ ಎಲ್ಲಾ ಬೆಳವಣಿಗೆ ಗಮನಿಸಿದರೆ ಈ ಬಾರಿಯೂ ಸರಳ–ಸಾಂಪ್ರದಾಯಿಕ ಆಚರಣೆಗೆ ಸೀಮಿತಗೊಳಿಸುವ ಚಿಂತನೆಯನ್ನು ಪುಷ್ಟೀಕರಿಸುತ್ತದೆ.

ಮೈಸೂರು, ಕೊಡಗು, ಮಂಡ್ಯ, ಹಾಸನ, ಚಾಮರಾಜನಗರ ಜಿಲ್ಲೆಗಳಲ್ಲಿ ಕೆಲ ದಿನಗಳಿಂದ ಮಳೆ ಆರ್ಭಟ ಜೋರಾಗಿದೆ. ಬೆಂಗಳೂರು, ರಾಮನಗರ, ತುಮಕೂರು ಹಾಗೂ ಉತ್ತರದ ಹಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಮಳೆಯ ಅಬ್ಬರದಿಂದ ಅಪಾರ ಪ್ರಮಾಣದ ನಷ್ಟವುಂಟಾಗಿದೆ. ಜನ ತೀವ್ರ ಸಂಕಷ್ಟ ಅನುಭವಿಸುತ್ತಿದ್ದಾರೆ. ಮಳೆ ನಿಂತರೂ ಅದರಿಂದ ಉಂಟಾಗಿರುವ ಅವಾಂತರಗಳಿಂದ ಸುಧಾರಿಸಿಕೊಳ್ಳುವುದು ಕಷ್ಟ. ಈ ಪರಿಸ್ಥಿತಿಯಲ್ಲಿ ಅದ್ಧೂರಿ ದಸರಾ ಆಚರಿಸುವುದು ಸೂಕ್ತವೇ? ಇಲ್ಲವೇ ಹಿಂದಿನ 2 ವರ್ಷಗಳಂತೆ ಅರಮನೆ ಆವರಣಕ್ಕೆ ಜಂಬೂಸವಾರಿ ಸೀಮಿತಗೊಳಿಸಿ ಸರಳ ಹಾಗೂ ಸಾಂಪ್ರದಾಯಿಕವಾಗಿ ಆಚರಿಸುವುದು ಸರಿಯೇ? ಎಂಬ ಜಿಜ್ಞಾಸೆಯಲ್ಲಿ ಸರ್ಕಾರ ಮುಳುಗಿದೆ. ಆದರೆ ಈಗಾಗಲೇ ಗಜಪಡೆ ತಾಲೀಮು, ಕಲಾವಿದರ ಆಯ್ಕೆ ಸೇರಿದಂತೆ ಬಹುತೇಕ ಸಿದ್ಧತಾ ಕಾರ್ಯ ನಡೆದಿರುವುದರಿಂದ ಜನರ ನಿರೀಕ್ಷೆಯಂತೆ ಅದ್ಧೂರಿಯಾಗಿ ದಸರಾ ಆಚರಿಸುವುದು ಖಚಿತ ಎನ್ನಲಾಗಿದೆ. ಆದರೂ ಈ ಬಗ್ಗೆ ಐದಾರು ದಿನಗಳಲ್ಲಿ ಸ್ಪಷ್ಟತೆ ಸಿಗಲಿದೆ ಎಂದು ಮೂಲಗಳು ತಿಳಿಸಿವೆ.

## ಸಚಿವ ಸೋಮಶೇಖರ್‌ರಿಂದ ಪೂಜೆ

ಎಸ್.ಟಿ.ಸೋಮಶೇಖರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಸಹ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ನೆರವೇರಿಸಿದರು.

ಜಂಬೂಸವಾರಿ ದಿನ ಅರಮನೆ ಆವರಣದಲ್ಲಿ ಅಭಿಮನ್ಯು ಮೇಲೆ ಚಿನ್ನದ ಅಂಬಾರಿಯಲ್ಲಿ ಪ್ರತಿಷ್ಠಾಪಿಸಿರುವ ನಾಡ ದೇವಿ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪಾರ್ಚನೆ ವೇಳೆ ಪೊಲೀಸ್ ಬ್ಯಾಂಡ್ ತಂಡ ಮೂರು ಹಂತದಲ್ಲಿ ರಾಷ್ಟ್ರಗೀತೆ ನುಡಿಸುವ ವೇಳೆ 7 ಫಿರಂಗಿಗಳಿಂದ ತಲಾ ಮೂರು ಸುತ್ತಿನಂತೆ 21 ಬಾರಿ ಕುಶಾಲತೋಪು(ಸಿಡಿಮದ್ದು) ಸಿಡಿಸಲಾಗುತ್ತದೆ. ಇದರ ತಾಲೀಮಿಗೆ ಇಂದು ಚಾಲನೆ ನೀಡಲಾಯಿತು.

ಕುಶಾಲತೋಪು ಸಿಡಿಸುವ 7 ಫಿರಂಗಿ ಸೇರಿದಂತೆ ಅರಮನೆ ಆವರಣದ 11 ಫಿರಂಗಿಗಳಿಗೆ ಪೂಜೆ ಸಲ್ಲಿಸಿದ ಸಚಿವ ಎಸ್.ಟಿ.ಸೋಮಶೇಖರ್, ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಈಡುಗಾಯಿ ಹೊಡೆದರೆ, ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಬೂದು ಕುಂಬಳಕಾಯಿ ಒಡೆದರು. ಬಳಿಕ ಸಚಿವರು ಫಿರಂಗಿ ಗಾಡಿಯನ್ನು ಮುಂದೆ ತಳ್ಳಿ ನಿಂಬೆಹಣ್ಣಿನ ಮೇಲೆ ಹರಿಸಿದ ನಂತರ ಮುಂದಿನ ಪ್ರಕ್ರಿಯೆಗೆ ಸಿಬ್ಬಂದಿಗೆ ಅನುವು ಮಾಡಿಕೊಡಲಾಯಿತು.

**ಬುಧವಾರದಿಂದ ಒಣ ತಾಲೀಮು:** ಇಂದು ಫಿರಂಗಿಯಲ್ಲಿನ ಕೋವಿ, ಮದ್ದು ತುಂಬುವ ರಂಧ್ರ ಸ್ವಚ್ಛಗೊಳಿಸಲಾಗುತ್ತದೆ. ಬುಧವಾರದಿಂದ ಅರಮನೆ ಆವರಣದಲ್ಲಿ ಒಣ ತಾಲೀಮು ಆರಂಭಿಸಲಾಗುತ್ತದೆ. ಒಂದೊಂದು ಫಿರಂಗಿಗೂ 4–5 ಸಿಬ್ಬಂದಿ ನಿಯೋಜಿಸಲಾಗುತ್ತದೆ. ಜಂಬೂಸವಾರಿ ಆರಂಭಕ್ಕೆ 10ದಿನ ಮುನ್ನ ಮೂರು ಬಾರಿ ದಸರಾ ಗಜಪಡೆ ಹಾಗೂ ಅಶ್ವರೋಹಿ ದಳದ ಸಮ್ಮುಖದಲ್ಲಿ ಸಿಡಿಮದ್ದು ತಾಲೀಮು ನಡೆಸಲಾಗುತ್ತದೆ.

**ಸಾಂಪ್ರದಾಯಿಕ ಪೂಜೆ ಸಲ್ಲಿಸಲಾಗಿದೆ:** ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ಸಂಪ್ರ ದಾಯದಂತೆ ಪೂಜೆ ಸಲ್ಲಿಸಲಾಗಿದೆ. ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ನೇತೃತ್ವದಲ್ಲಿ ಫಿರಂಗಿ ದಳ ಕುಶಾಲತೋಪು ಸಿಡಿಸುವ ಕಾರ್ಯ ನಡೆಸಲಿದೆ. ವಿಜಯ ದಶಮಿ ದಿನದಂದು 21 ಬಾರಿ ಸಿಡಿಮದ್ದು ಸಿಡಿಸುವ ಜವಾಬ್ದಾರಿ ಫಿರಂಗಿ ದಳದ್ದಾಗಿದೆ. ಅದಕ್ಕಾಗಿ ಸುರಕ್ಷಿತ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಮಾತನಾಡಿ, ಸೆಪ್ಟೆಂಬರ್ ಮೊದಲ ವಾರದಲ್ಲಿ ಕುಶಾಲತೋಪು ಸಿಡಿಸುವ ತಾಲೀಮು ನಡೆಸಲಾಗುತ್ತದೆ. ಆನೆಗಳಿಗೆ ದೊಡ್ಡ ಪ್ರಮಾಣದ ಶಬ್ದವನ್ನು ಪರಿಚಯಿಸಬೇಕಿದೆ. ಜಂಬೂಸವಾರಿ ಹಾಗೂ ಪಂಜಿನ ಕವಾಯತಿನಲ್ಲೂ ಇದೇ ಫಿರಂಗಿ ಬಳಸಿ ಕುಶಾಲತೋಪು ಸಿಡಿಸಲಾಗುತ್ತದೆ. ಅದಕ್ಕೆ ನುರಿತ ಸಿಬ್ಬಂದಿಗಳನ್ನೇ ನಿಯೋಜಿಸಲಾಗುವುದು ಎಂದರು. ಅರ್ಚಕ ಎಸ್.ವಿ.ಪ್ರಹ್ಲಾದರಾವ್ ಮಾತನಾಡಿ, ಈ ಹಿಂದೆ ಯುದ್ಧಕ್ಕೆ ಹೋಗುವಾಗ ಹಾಗೂ ವಾಪಸ್ಸಾದ ವೇಳೆ ಫಿರಂಗಿಗಳಿಗೆ ಪೂಜೆ ಸಲ್ಲಿಸುವ ಸಂಪ್ರದಾಯ ವಿತ್ತು ವಿಜಯದ ಸಂಕೇತವಾಗಿ 21 ಬಾರಿ ಕುಶಾಲತೋಪು ಸಿಡಿಸಲಾಗುತ್ತದೆ. ಆ ಪ್ರಕ್ರಿಯೆ ನಿರ್ವಿಘ್ನವಾಗಿ ನೆರವೇರಲೆಂದು ವಿಜಯಗಣಪತಿಯನ್ನು ಪ್ರಾರ್ಥಿಸಿ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಡಿಸಿಎಫ್ ಡಾ.ವಿ.ಕರಿಕಾಳನ್, ಡಿಸಿಪಿಗಳಾದ ಪ್ರದೀಪ್ ಗುಂಟಿ, ಗೀತಾ ಪ್ರಸನ್ನ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಆರ್‌ಎಫ್ಓ ಸಂತೋಷ್ ಹೂಗಾರ್ ಇನ್ನಿತರರು ಉಪಸ್ಥಿತರಿದ್ದರು.

## ದಸರಾ ಉದ್ಘಾಟಕರ ಕುರಿತು ಇನ್ನೂ ನಿರ್ಧಾರ ಆಗಿಲ್ಲ

**ಮೈಸೂರು:** ಈ ಬಾರಿಯ ಮೈಸೂರು ದಸರಾ ಉದ್ಘಾಟಕರ ಕುರಿತು ಇನ್ನೂ ಚರ್ಚೆ ಆಗಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ. ಮೈಸೂರಲ್ಲಿ ಪತ್ರಕರ್ತ ರೊಂದಿಗೆ ಮಾತನಾಡಿದ ಅವರು, ದಸರಾ ಉದ್ಘಾಟಕರ ಹೆಸರು ಇನ್ನೂ ಅಂತಿಮವಾಗಿಲ್ಲ. ಈ ಕುರಿತು ಮುಖ್ಯ ಮಂತ್ರಿಗಳು ನಿರ್ಧಾರ ಕೈಗೊಳ್ಳಲಿದ್ದಾರೆ. ಈಗಾಗಲೇ ಅದ್ಧೂರಿ ದಸರಾ ಆಚರಣೆಗೆ ತೀರ್ಮಾನಿಸಲಾಗಿದೆ.ಇದಕ್ಕಾಗಿ ಉಪ ಸಮಿತಿಗಳನ್ನು ರಚಿಸಿ, ಜವಾಬ್ದಾರಿ ವಹಿಸಲಾಗಿದೆ. ಮಳೆ ನಿಂತ ನಂತರ ದಸರಾ ಕೆಲಸ ಕೂಡ ಆರಂಭವಾಗಲಿದೆ ಎಂದರು.

ಮೈಸೂರು ಮೇಯರ್ ಮತ್ತು ಉಪಮೇಯರ್ ಚುನಾವಣೆ ಕುರಿತು ಪಕ್ಷದಿಂದ ನಮಗೆ ಯಾವುದೇ ಸೂಚನೆ ಬಂದಿಲ್ಲ. ಪ್ರಧಾನಿಯವರು ಸೆ.2ರಂದು ಮಂಗಳೂರಿಗೆ ಬರುತ್ತಿರುವುದರಿಂದ ಪಕ್ಷದ ರಾಜ್ಯಾಧ್ಯಕ್ಷರು ನಮಗೆ ಏನೂ ಹೇಳಿಲ್ಲ. ಪ್ರಧಾನಿಯವರು ಬಂದು ಹೋದ ಮೇಲೆ ತಿಳಿಸುತ್ತಾರೆ. ಚುನಾವಣೆಗೆ ಇನ್ನೂ ಸಮಯವಿದೆ ಎಂದು ತಿಳಿಸಿದರು. ರಾಮನಗರ ಹೆದ್ದಾರಿ ಜಲಾವೃತ ಕುರಿತು ಅಧಿಕಾರಿಗಳೆಲ್ಲರನ್ನೂ ಕರೆದು ಸಭೆ ಮಾಡುತ್ತೇನೆ ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ. ಭಾನುವಾರವೇ ರಾಮನಗರ, ಮಂಡ್ಯ, ಮೈಸೂರು ಅಧಿಕಾರಿಗಳೊಂದಿಗೆ ವರ್ಚುವಲ್ ಮೂಲಕ ಚರ್ಚೆ ನಡೆಸಿದ್ದಾರೆ. ಕಾಂಗ್ರೆಸ್‌ನ ಐಕ್ಯತೆ ನಡಿಗೆ ಕುರಿತು ಪ್ರತಿಕ್ರಿಯಿಸಿದ ಅವರು ಅವರದ್ದು ಏನು ಐಕ್ಯತೆ ನನಗೆ ಅರ್ಥವಾಗುತ್ತಿಲ್ಲ. ಪ್ರಧಾನಿಯವರು ಇಡೀ ವಿಶ್ವವೇ ಮೆಚ್ಚುವ ಕೆಲಸ ಮಾಡುತ್ತಿದ್ದಾರೆ ಎಂದರು.

# ಭಾಗಶಃ ಮಳೆ ಹಾನಿಗೆ 24 ಗಂಟೆಯೊಳಗೆ ನೆರವು ; ಪರಿಹಾರಕ್ಕೆ ಹಣದ ಕೊರತೆ ಇಲ್ಲ

## ಸಚಿವ ಎಸ್.ಟಿ.ಸೋಮಶೇಖರ್ ಭರವಸೆ



ಮೈಸೂರು,ಆ.29(ಪಿಎಂ)– ಜಿಲ್ಲೆಯಲ್ಲಿ ಭಾಗಶಃ ಮಳೆ ಹಾನಿ ಸಂಬಂಧ 24 ಗಂಟೆಯೊಳಗೆ ಪರಿಹಾರ ನೀಡಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದ ಆವರಣದಲ್ಲಿ ಸೋಮವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ನಿನ್ನೆ ವರ್ಚ್ಯುಯಲ್ ಮೂಲಕ ಮುಖ್ಯಮಂತ್ರಿಗಳು ಮೈಸೂರು ಸೇರಿದಂತೆ 17 ಜಿಲ್ಲೆಗಳ ಮಳೆ ಹಾನಿ ಕುರಿತು ಪರಿಶೀಲನಾ ಸಭೆ ನಡೆಸಿದ್ದಾರೆ. ಸಭೆಯಲ್ಲಿ ಮೈಸೂರು ಜಿಲ್ಲೆ ಸಂಬಂಧ ಜಿಲ್ಲಾಧಿಕಾರಿಗಳು ಎಲ್ಲಾ ಮಾಹಿತಿ ನೀಡಿದ್ದಾರೆ. ಇಂದು ಸಭೆ ನಡೆಸಿ ಮಳೆ ಹಾನಿ ಪರಿಹಾರ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಪರಿಹಾರ ನೀಡಲು ಜಿಲ್ಲಾಡಳಿತದಲ್ಲಿ ಯಾವುದೇ ಹಣಕಾಸು ಕೊರತೆ ಏನಿಲ್ಲ ಎಂದು ಹೇಳಿದರು.

ಮಳೆ ಹಿನ್ನೆಲೆಯಲ್ಲಿ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಸುಗಮ ಸಂಚಾರ ಸಾಧ್ಯವಾಗುತ್ತಿಲ್ಲ. ಇಲ್ಲಿನ ದಶಪಥ ರಸ್ತೆ ಕಾಮಗಾರಿ ಸರಿಯಿಲ್ಲ ಎಂಬ ಆರೋಪ ಕೇಳಿ ಬರುತ್ತಿದೆ? ಎಂಬ ಬಗ್ಗೆ ಪ್ರತಿಕ್ರಿಯಿಸಿ, ನಿನ್ನೆ ಮುಖ್ಯಮಂತ್ರಿಗಳು ಮುಖ್ಯ ಕಾರ್ಯದರ್ಶಿಯವರಿಗೆ ಸೂಕ್ತ ಕ್ರಮಕ್ಕೆ ನಿರ್ದೇಶನ ನೀಡಿದ್ದಾರೆ. ಮೈಸೂರು–ಬೆಂಗಳೂರು ಹೆದ್ದಾರಿ ಕಾಮಗಾರಿ ಸಂಬಂಧ ಎಲ್ಲಾ ಅಧಿಕಾರಿಗಳೊಂದಿಗೆ ಇಂದು ಸಭೆ ಮಾಡುವುದಾಗಿ ಮುಖ್ಯಮಂತ್ರಿಗಳು ತಿಳಿಸಿದ್ದಾರೆ ಎಂದರು.

ರಾಮನಗರ, ಮೈಸೂರು ಮತ್ತು ಮಂಡ್ಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ನಿನ್ನೆ ವರ್ಚ್ಯುಯಲ್ ಮೂಲಕ ಚರ್ಚೆ ನಡೆಸಿದ್ದಾರೆ. ನಾಗಮಂಗಲ ಮತ್ತು ಕನಕಪುರ ಮಾರ್ಗಗಳಲ್ಲಿ ಸಂಚರಿಸಲು ಅನುವು ಮಾಡಿಕೊಳ್ಳಲು ಚಿಂತಿಸಿದ್ದಾರೆ. ಆ ಮೂಲಕ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಆದಷ್ಟು ವಾಹನ ಸಂಚಾರ ಕಡಿಮೆಗೊಳಿಸಲು ಉದ್ದೇಶಿಸಲಾಗಿದೆ. ಇನ್ನು ಎರಡು ದಿನಗಳಲ್ಲಿ ಮಳೆ ಕಡಿಮೆಯಾದರೆ ಮೈಸೂರು–ಬೆಂಗಳೂರು ಮಾರ್ಗದಲ್ಲಿ ಸುಗಮ ಸಂಚಾರ ಸಾಧ್ಯವಾಗಲಿದೆ ಎಂದು ಹೇಳಿದರು.

**ಕಾಂಗ್ರೆಸ್ ಐಕ್ಯತೆ ನಡಿಗೆ ಅರ್ಥವಾಗದು:** ಕಾಂಗ್ರೆಸ್ ಐಕ್ಯತಾ ನಡಿಗೆ ಬಗ್ಗೆ ಪ್ರತಿಕ್ರಿಯಿಸಿ, ಕಾಂಗ್ರೆಸ್‌ನವರ ಐಕ್ಯತೆ ಏನೆಂದು ನನಗೆ ಅರ್ಥವಾಗುವುದಿಲ್ಲ. ಪ್ರಧಾನಮಂತ್ರಿಗಳು ಇಡೀ ವಿಶ್ವವೇ ಮೆಚ್ಚುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್‌ನವರು ಏನೋ ಹೇಳಿಕೊಂಡು ಓಡಾಡಲಿ. ಅದಕ್ಕೇಕೆ ನಾವು ಅಡ್ಡಿಪಡಿಸುವುದು ಎಂದು ಛೇಡಿಸಿದರು.

ಚಿತ್ರದುರ್ಗದ ಮುರುಘಾ ಶ್ರೀಗಳ ವಿರುದ್ಧ ಪ್ರಕರಣ ದಾಖಲಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ಈಗಾಗಲೇ ಮುಖ್ಯಮಂತ್ರಿಗಳು ಹಾಗೂ ಗೃಹ ಸಚಿವರು ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ತನಿಖೆ ಪೂರ್ಣಗೊಳ್ಳಲಿ, ಏನಾಗುತ್ತದೆ ನೋಡೋಣ ಎಂದ ಅವರು, ಸ್ವಾಮೀಜಿಯವರ ವಿರುದ್ಧ ಷಡ್ಯಂತರ ನಡೆದಿದೆ ಎಂಬ ಆರೋಪ ಕೇಳಿ ಬರುತ್ತಿದೆ ಎಂಬ ಬಗ್ಗೆ ಉತ್ತರಿಸಿ, ತನಿಖೆ ಪೂರ್ಣಗೊಂಡ ಮೇಲೆ ಎಲ್ಲವೂ ಗೊತ್ತಾಗಲಿದೆ ಎಂದರು.

ದಸರಾ ಉದ್ಘಾಟಕರ ಸಂಬಂಧ ಪ್ರತಿಕ್ರಿಯಿಸಿ, ಸೆ.26ಕ್ಕೆ ದಸರಾ ಉದ್ಘಾಟನೆ ಇರುವ ಕಾರಣ ಈ ಬಗ್ಗೆ ಇನ್ನೂ ಯಾವುದೇ ನಿರ್ಣಯವಾಗಿಲ್ಲ ಎಂದರು. ಕಳೆದ ಬಾರಿ ಎಸ್.ಎಂ.ಕೃಷ್ಣ ಅವರಿಗೆ ಅವಕಾಶ ನೀಡಲಾಗಿತ್ತು. ಈ ಬಾರಿ ಹೆಚ್.ಡಿ.ದೇವೇಗೌಡ ಮತ್ತು ಬಿ.ಎಸ್.ಯಡಿಯೂರಪ್ಪ ಹೆಸರು ಕೇಳಿ ಬರುತ್ತಿದೆ ಎಂಬುದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಎಸ್.ಎಂ.ಕೃಷ್ಣ ಅವರು ರಾಜಕೀಯದಿಂದ ನಿವೃತ್ತಿ ಹೊಂದಿದ್ದಾರೆ. ಯಾವುದೇ ವಿಧದ ಅಧಿಕಾರದಲ್ಲಿ ಇರಲಿಲ್ಲ. ಇದನ್ನು ಆಧರಿಸಿ ಅಂದು ಮುಖ್ಯಮಂತ್ರಿಗಳು ಕೃಷ್ಣ ಅವರ ಹೆಸರನ್ನು ಘೋಷಣೆ ಮಾಡಿದ್ದರು. ಈ ಬಾರಿ ಮುಖ್ಯಮಂತ್ರಿಗಳ ನಿರ್ಧಾರದಂತೆ ಹೆಸರನ್ನು ಪ್ರಕಟಿಸುವುದಷ್ಟೇ ನನ್ನ ಕರ್ತವ್ಯ ಎಂದು ತಿಳಿಸಿದರು.

### ಮೈಸೂರು ಮೇಯರ್ ಚುನಾವಣೆ; ಪಕ್ಷದ ರಾಜ್ಯಾಧ್ಯಕ್ಷರು ಹೇಳಿದಂತೆ ಮುಂದುವರೆಯುತ್ತೇವೆ

ಮೈಸೂರು,ಆ.29(ಪಿಎಂ)– ಮೈಸೂರು ಮೇಯರ್ ಚುನಾವಣೆ ಸಂಬಂಧ ನಮ್ಮ ಪಕ್ಷದ ರಾಜ್ಯಾಧ್ಯಕ್ಷರ ಸಲಹೆ–ಸೂಚನೆಗಳಂತೆ ನಡೆದುಕೊಳ್ಳುವುದಷ್ಟೇ ನನ್ನ ಬದ್ಧತೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಮೇಯರ್ ಚುನಾವಣೆ ಸಂಬಂಧ ನಮ್ಮ ಪಕ್ಷದ ರಾಜ್ಯಾಧ್ಯಕ್ಷರು ಈವರೆಗೆ ಯಾವುದೇ ಸಲಹೆ–ಸೂಚನೆಗಳನ್ನು ನೀಡಿಲ್ಲ. ಪ್ರಧಾನಿ ನರೇಂದ್ರ ಮೋದಿಯವರು ಸೆ.2ರಂದು ಮಂಗಳೂರಿಗೆ ಭೇಟಿ ನೀಡಲಿದ್ದು, ಆ ಬಳಿಕ ಈ ಬಗ್ಗೆ ನಮಗೆ ರಾಜ್ಯಾಧ್ಯಕ್ಷರು ಸಲಹೆಗಳನ್ನು ನೀಡಲಿದ್ದಾರೆ ಎಂದರು.

ಕಳೆದ ಬಾರಿ ಬಿಜೆಪಿ ಮತ್ತು ಜೆಡಿಎಸ್ ನಡುವೆ ಒಪ್ಪಂದ ಆಗಿತ್ತಾ? ಎಂಬ ಪ್ರಶ್ನೆಗೆ ಉತ್ತರಿಸಿ, 'ಅದು ಕಳೆದ ಬಾರಿ, ಕಳೆದ ಬಾರಿ ಕಳೆದ ಬಾರಿಯಷ್ಟೇ' ಎಂದ ಅವರು, ಕಳೆದ ಬಾರಿ ಪಕ್ಷದ ರಾಜ್ಯಾಧ್ಯಕ್ಷರು ಕೆಲವು ಸಲಹೆ–ಸೂಚನೆಗಳನ್ನು ನೀಡಿದ್ದರು. ಈ ಬಾರಿ ಇನ್ನೂ ಯಾವುದೇ ಸಲಹೆ ಸೂಚನೆಗಳನ್ನು ನೀಡಿಲ್ಲ. ಈ ಸಂಬಂಧ ನಾವು ಅವರನ್ನು ಸಂಪರ್ಕಿಸಿದಾಗ, ಪ್ರಧಾನಿಗಳು ಮಂಗಳೂರು ಭೇಟಿ ಬಳಿಕ ಮಾತನಾಡುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

### ಸಾಮರಸ್ಯದ ಗೌರಿ-ಗಣೇಶ ಹಬ್ಬ ಆಚರಣೆ

## ಸುಜೀವ್ ಫೌಂಡೇಷನ್‌ನಿಂದ ಪೌರಕಾರ್ಮಿಕರಿಗೆ ಬಾಗಿನ



ಮೈಸೂರು, ಆ.29(ಆರ್‌ಕೆಬಿ)– ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಮೈಸೂರಿನ ಸುಜೀವ್ ಫೌಂಡೇಷನ್ ವತಿಯಿಂದ ಸಾಮರಸ್ಯದ ಸಂಕೇತವಾಗಿ ಪೌರಕಾರ್ಮಿಕರಿಗೆ ಬಾಗಿನ ವಿತರಿಸಿ, ಬಳಿಕ ಮುಸ್ಲಿಂ ಸಮುದಾಯದವರಿಗೆ ಸೀರೆ ವಿತರಿಸಲಾಯಿತು.

ವಿಜಯನಗರ 2ನೇ ಹಂತದ ಸುಜೀವ್ ಫೌಂಡೇಷನ್ ಕಚೇರಿಯಲ್ಲಿ ಗಣೇಶನ ಮೂರ್ತಿ ಪ್ರತಿಷ್ಠಾಪಿಸಿ ಹಬ್ಬ ಆಚರಿಸುವ ಮೂಲಕ ಭಾವೈಕ್ಯತೆ ಮೆರೆಯಲಾಯಿತು. ಗೌರಿ–ಗಣೇಶ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡ ಹಿಂದೂ–ಮುಸ್ಲಿಂ ಸದಸ್ಯರು ಸಹೋದರತ್ವದ ಸಂದೇಶ ರವಾನಿಸಿದರು. ನಾವೆಲ್ಲಾ ಒಂದೇ ಎಂಬ ಸಂದೇಶ ಸಾರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸುಜೀವ್ ಫೌಂಡೇಷನ್ ಅಧ್ಯಕ್ಷ ರಾಜಾರಾಂ, ದೇಶದಲ್ಲಿ ಎರಡೂ ಸಮುದಾಯಗಳ ಹಬ್ಬಗಳು ಬಂದರೆ ಸೌಹಾರ್ದಯುತವಾಗಿ ಆಚರಣೆ ಮಾಡುವ ಪದ್ಧತಿ ನಮ್ಮಲ್ಲಿದೆ. ಆದರೆ ಕೆಲವು ಕಿಡಿಗೇಡಿಗಳಿಂದಾಗಿ ಎರಡು ಸಮಾಜದ ನಡುವೆ ಶಾಂತಿ ಕದಡುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಹಿಂದೂ–ಮುಸ್ಲಿಂ ಬಾಂಧವರು ಕಿವಿಗೊಡದೆ, ಪರಸ್ಪರ ಶಾಂತಿ, ನೆಮ್ಮದಿಯಿಂದ ಬಾಳಬೇಕು ಎಂದು ಮನವಿ ಮಾಡಿದರು.

ಇಂದು ಎರಡೂ ಸಮುದಾಯದ ಯುವಕರು ಒಟ್ಟಾಗಿ ಸೌಹಾರ್ದತೆಯಿಂದ ಹಬ್ಬ ಆಚರಿಸುತ್ತಿರುವುದು ಸಂತಸದ ವಿಚಾರ. ಇಂತಹ ಬೆಳವಣಿಗೆ ಎಲ್ಲ ಜಿಲ್ಲೆಗಳಲ್ಲೂ ಆದರೆ ಯಾರಿಂದಲೂ ಶಾಂತಿ ಕದಡಲು ಸಾಧ್ಯವಿಲ್ಲ ಎಂದು ಹೇಳಿದರು.

2009ರ ಮಿಸ್ ವರ್ಲ್ಡ್ ಬಾಲಿವುಡ್ ನಟಿ ಪೂಜಾ ಚೋಪ್ರಾ ಪುನೀತ್ ರಾಜ್‌ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಮುಂದಿನ ದಿನಗಳಲ್ಲಿ ಕನ್ನಡ ಚಿತ್ರಗಳಲ್ಲಿ ನಟಿಸುವ ಆಶಯ ವ್ಯಕ್ತಪಡಿಸಿದರು.

ಮುಸ್ಲಿಂ ಧರ್ಮಗುರು ಮೊಹಮ್ಮದ್ ಯೂಸೂಫ್, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಕೆಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ವಿನಯ್ ಕಣಗಾಲ್, ರಾಜೇಶ್, ಸುನಿಲ್ ನಾರಾಯಣ್ ಇನ್ನಿತರರು ಉಪಸ್ಥಿತರಿದ್ದರು.

## ಧಾರ್ಮಿಕ ಕಾರ್ಯಕ್ರಮಗಳಿಂದ ಮನಸ್ಸಿಗೆ ನೆಮ್ಮದಿ



ಮೈಸೂರು, ಆ. 29– ಶ್ರೀ ಅಭಯಂ ಫೌಂಡೇಷನ್ ವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀರಾಮ ಮಂದಿರದಲ್ಲಿ ಗೌರಿ ಗಣೇಶ ಹಬ್ಬದ ಹಿನ್ನೆಲೆಯಲ್ಲಿ 108 ಸುಮಂಗಲಿಯರಿಗೆ ಸ್ವರ್ಣಗೌರಿ ಬಾಗಿನ ಸಮರ್ಪಣೆ ಹಾಗೂ 108 ಭಕ್ತ ಕುಟುಂಬಗಳಿಗೆ ಸಾಂಪ್ರದಾಯಿಕ ಗೌರಿ ಮತ್ತು ಗಣೇಶ ವಿತರಿಸಲಾಯಿತು.

ಅನಂತರ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವ ನೆನಪಿನಲ್ಲಿ ಭಾರತೀಯ ನೌಕಾಪಡೆಯ ಗಿರಿಜಾ ರಾಜು ಮತ್ತು ವೈಆರ್. ರಾಜು ಶೆಟ್ಟಿ ದಂಪತಿ ಅಭಿನಂದಿಸಿ, ಬಾಗಿನ ನೀಡಿದರು.

ಹಿರಿಯ ಸಮಾಜ ಸೇವಕ ಹಾಗೂ ಧಾರ್ಮಿಕ ಚಿಂತಕ ಕೆ. ರಘುರಾಂ ವಾಜಪೇಯಿ ಮಾತನಾಡಿದರು. ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಶ್ರೀ ಫೌಂಡೇಶನ್ ಅಧ್ಯಕ್ಷರಾದ ಡಾ. ಎಂ.ಎಸ್.ಮುರಳೀಧರ್ ಶಾಸ್ತ್ರಿ, ಉದ್ಯಮಿ ಲಯನ್ ಡಾ.ಎಸ್ ವೆಂಕಟೇಶ್, ಒಂಟಿಕೊಪ್ಪಲಿನ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾದ ಜಿ.ಸಿ. ಪುಟ್ಟಸ್ವಾಮಿ, ಧಾರ್ಮಿಕ ಚಿಂತಕರಾದ ಸೌಭಾಗ್ಯ, ಚಕ್ರಪಾಣಿ, ಮೋಹನ್, ವೆಂಕಟೇಶ್, ಮಹಿಳಾ ಮುಖಂಡರಾದ ವರಲಕ್ಷ್ಮಿ, ಅಜಯ್, ಮಮತೆಯ ಮಡಿಲು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷರಾದ ಜ್ಯೋತಿ ಪ್ರಭಾ, ಕಂದಾಯ ಅಧಿಕಾರಿ ಬಿ.ಟಿ. ಧನಲಕ್ಷ್ಮಿ, ಚಾಮುಂಡೇಶ್ವರಿ ದೇವಾಲಯ ಧರ್ಮದರ್ಶಿ ಸವಿತಾ ಘಾಟ್ಕೆ, ಮಂಜುಳಾ ರಮೇಶ್, ವಕೀಲರಾದ ಹೇಮಲತಾ, ಎಚ್.ವಿ. ಸುಬ್ಬರಾವ್, ಸುಲೋಚನಾ, ರವೀಂದ್ರ ಕುಮಾರ್, ಹೇಮಲತಾ, ವೆಂಕಟೇಶ್ ಮೂರ್ತಿ, ಮಂಜುಳಾ ಉಮೇಶ್, ಪದ್ಮ ನಾಗರಾಜು ಹಾಗೂ ಇನ್ನಿತರರು ಹಾಜರಿದ್ದರು.

## ಮಡಿವಾಳರ ಬಗ್ಗೆ ಅವಹೇಳನಕಾರಿ ಪದ ಬಳಕೆಗೆ ವಿರೋಧ: ಪ್ರತಿಭಟನೆ



ಮೈಸೂರು, ಆ.29(ಆರ್‌ಕೆಬಿ)– ಜೀ ಟಿವಿ ಕನ್ನಡ ವಾಹಿನಿಯಲ್ಲಿ 'ಕೃಷ್ಣಸುಂದರಿ' ಧಾರಾವಾಹಿಯಲ್ಲಿ ಮಡಿವಾಳ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಪದವನ್ನು ಹಲವು ಬಾರಿ ಬಳಸಿ ಮಡಿವಾಳ ಸಮುದಾಯವನ್ನು ಅಪಮಾನಿಸಿದ್ದಾರೆ ಎಂದು ಆರೋಪಿಸಿ, ಮಡಿವಾಳರ ಸಂಘ ಸೇರಿದಂತೆ ವಿವಿಧ ಸಂಘಟನೆಗಳ ಸದಸ್ಯರು ಸೋಮವಾರ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಜೀ ಟಿವಿ ಚಾನಲ್ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಾಕಾರರು, ಕೂಡಲೇ ಕೃಷ್ಣಸುಂದರಿ ಧಾರಾವಾಹಿಯನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದರು.

ಇನ್ನು ಮುಂದೆ ಅಗಸ, ಧೋಬಿ ಎಂಬ ಪದಗಳನ್ನು ಬಳಸದೆ ಮಡಿವಾಳರು ಎಂಬ ಪದ ಉಪಯೋಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಮೈಸೂರು ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ಅತೀ ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಡಿ.ನಾಗಭೂಷಣ್, ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ವಿ.ನಾಗೇಶ್, ವಿಶ್ವಕರ್ಮ ಸಮಾಜದ ಹೆಚ್.ಆರ್.ರಂಗಪ್ಪ, ಉಪ್ಪಾರ ಸಮಾಜದ ಅಧ್ಯಕ್ಷ ಯೋಗೇಶ್ ಉಪ್ಪಾರ, ಮುಖಂಡರಾದ ಹಾಡ್ಯ ಮಹೇಶ್ ಶೆಟ್ಟಿ, ಚಿಕ್ಕಣ್ಣ, ಜಿಲ್ಲಾ ಮಡಿವಾಳ ಮಹಿಳಾ ಸಮಾಜದ ಅಧ್ಯಕ್ಷೆ ಎಂ.ಡಿ.ದ್ರಾಕ್ಷಾಯಿಣಿ, ರಘು, ಹೆಬ್ಬಾಳ ಮಹೇಶ್ ಇನ್ನಿತರರು ಭಾಗವಹಿಸಿದ್ದರು.

## ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಆ.29– ಮಂಡ್ಯ – ಯಲಿಯೂರು ರೈಲು ನಿಲ್ದಾಣದ ನಡುವೆ ರೈಲ್ವೆ ಕಿ.ಮೀ.ನಂ 93/300 ಅಪ್ಲೈನ್‌ನಲ್ಲಿ ಸುಮಾರು 40 ರಿಂದ 45 ವರ್ಷದ ಗಂಡಸು ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿರುತ್ತಾನೆಂದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಕಲಂ–174ರ ಅನ್ವಯ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿಯು 5.5ಅಡಿ ಎತ್ತರವಿದ್ದು, ಗೋಧಿ ಮೈಬಣ್ಣ, ಸಾಧಾರಣ ಶರೀರ, ತಲೆಯಲ್ಲಿ ಸುಮಾರು 2 ಇಂಚು ಉದ್ದದ ಕಪ್ಪು ಬಿಳಿ ಕೂದಲು ಇರುತ್ತದೆ. ಬಲಗೈಯಲ್ಲಿ ಒಂದು ಹಿತ್ತಾಳೆ ಬಳೆ ಇರುತ್ತದೆ, ಬಿಳಿ ಮತ್ತು ಬೂದು ಬಣ್ಣದ ಚೆಕ್ಸ್‌ಗಳುಳ್ಳ ಅರ್ಧ ತೋಳಿನ ಶರ್ಟ್, ಗ್ರೇ ಬಣ್ಣದ ಪ್ಯಾಂಟ್, ಆಕಾಶ ನೀಲಿ ಬಣ್ಣದ ಒಳಉಡುಪು ಧರಿಸಿರುತ್ತಾರೆ. ಮೃತರ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ರೈಲ್ವೆ ಪೊಲೀಸ್ ಠಾಣೆಗೆ ಭೇಟಿ ನೀಡಬಹುದು ಅಥವಾ ದೂರವಾಣಿ ಸಂಖ್ಯೆ: 0821–2516579 ಅನ್ನು ಸಂಪರ್ಕಿಸಬಹುದು ಎಂದು ರೈಲ್ವೆ ಇಲಾಖೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಡೀ ರಾತ್ರಿ ವರುಣಾರ್ಭಟ
### ತಗ್ಗು ಪ್ರದೇಶದವರಿಗೆ ಜಲಕಂಟಕ

ಮೈಸೂರು, ಆ.29(ಎಂಕೆ)– ಮೈಸೂರಿನಲ್ಲಿ ಸೋಮವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ಹಲವಾರು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ.

ಬೆಳಗ್ಗೆಯಿಂದ 11 ಗಂಟೆಯವರೆಗೆ ಸುರಿದಿದ್ದ ಮಳೆ ರಾತ್ರಿ ವರೆಗೂ ಬಿಡುವು ನೀಡಿತ್ತು. ನಂತರ ರಾತ್ರಿ 11 ಗಂಟೆ ಸುಮಾರಿಗೆ ಶುರುವಾಗಿ ಮುಂಜಾನೆಯವರೆಗೂ ಧಾರಾಕಾರವಾಗಿ ಸುರಿಯಿತು. ಪರಿಣಾಮ ವಾರ್ಡ್ ನಂ–14ರ ವ್ಯಾಪ್ತಿಯ ಹಲವು ಬಡಾವಣೆಗಳಲ್ಲಿ ಹತ್ತಾರು ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಪರದಾಡುವಂತಾಗಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ನಗರ ಪಾಲಿಕೆ ಅಭಯ–3ರ ಇರ್ಷಾದ್ ಇನ್ನಿತರರು ಭೇಟಿ ನೀಡಿ ಮನೆಗೆ ನುಗ್ಗಿದ್ದ ನೀರನ್ನು ಹೊರಹಾಕುವ ಕಾರ್ಯಾಚರಣೆ ನಡೆಸಿದರು. ಅಲ್ಲದೆ ನಗರ ಪ್ರಮುಖ ರಸ್ತೆ, ಚರಂಡಿ, ವೃತ್ತಗಳು ನೀರಿನಿಂದ ಆವೃತವಾಗಿದ್ದು, ರಾತ್ರಿ ವೇಳೆ ಸಂಚರಿಸುವವರಿಗೆ ಭಾರೀ ತೊಂದರೆ ಉಂಟಾಯಿತು.

**ಇಡಬ್ಲೂಎಸ್ ಮನೆಗಳಿಗೆ ನುಗ್ಗಿದ ನೀರು:** ರಾಮಕೃಷ್ಣ ನಗರದಲ್ಲಿರುವ ಮುಡಾದ ಇಡಬ್ಲೂಎಸ್ ಮನೆಗಳಿಗೆ ನೀರು ಚರಂಡಿ ನುಗ್ಗಿ ನಿವಾಸಿಗಳಿಗೆ ನರಕ ಸೃಷ್ಟಿಸಿದ್ದು, ರಾತ್ರಿಯಿಡೀ ನಿದ್ರೆ ಇಲ್ಲದೆ ಕಾಲಕಳೆಯುವಂತಾಗಿದೆ. ಮಳೆ ನೀರು ಜೊತೆಗೆ ಒಳಚರಂಡಿ ನೀರು ಮನೆಗಳ ಸುತ್ತಲೂ ಆವರಿಸಿದ್ದು, ಮನೆಗಳೂ ಯಾವಾಗ ಬೇಕಾದರೂ ಕುಸಿಯುವ ಆತಂಕ ಎದುರಾಗಿದೆ. ಜೊತೆಗೆ ನಗರದ ತಗ್ಗು ಪ್ರದೇಶಗಳಲ್ಲಿ ಬಡಾವಣೆಗಳಲ್ಲಿಯೂ ಹಲವು ಮನೆಗಳಿಗೆ ನೀರು ನುಗ್ಗಿದೆ ಎಂದು ನಗರ ಪಾಲಿಕೆ ಕಂಟ್ರೋಲ್ ರೂಂ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

# ಗೌರಿ–ಗಣೇಶ ಪ್ರತಿಷ್ಠಾಪನೆಗೆ ಮೈಸೂರಲ್ಲಿ ಸಡಗರದ ಸಿದ್ಧತೆ





ಮೈಸೂರು, ಆ.29(ಎಂಕೆ)– ಅರಮನೆ ನಗರಿ ಮೈಸೂರಿನಲ್ಲಿ ಗೌರಿ ಹಬ್ಬ ಹಾಗೂ ಗಣೇಶ ಚತುರ್ಥಿ ಅಂಗವಾಗಿ ಗೌರಿ–ಗಣೇಶ ಪ್ರತಿಷ್ಠಾಪನೆ ಸಿದ್ಧತೆ ಜೋರಾಗಿದ್ದು, ಭಕ್ತರ ಮೊಗದಲ್ಲಿ ಮಂದಹಾಸ ಮೂಡಿದೆ.

ಎರಡು ವರ್ಷಗಳ ಬಳಿಕ ನಗರದಾದ್ಯಂತ ಗಣೇಶ ಚತುರ್ಥಿ ಸಂಭ್ರಮ ಮನೆ ಮಾಡಿದ್ದು, ಗಲ್ಲಿ–ಗಲ್ಲಿಗಳಲ್ಲಿಯೂ ಯುವಕರು, ಮಕ್ಕಳು ವಿಘ್ನ ನಿವಾರಕನ ಪ್ರತಿಷ್ಠಾಪನೆಗೆ ಚಪ್ಪರ ಹಾಕಿ ವೇದಿಕೆ ಸಿದ್ಧಪಡಿಸುತ್ತಿದ್ದಾರೆ. ಅಲ್ಲದೆ ಧ್ವನಿ ವರ್ಧಕಗಳನ್ನು ಅಳವಡಿಸಿ ಕುಣಿದು–ಕುಪ್ಪಳಿಸಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಹಾಗೆಯೇ ಗಣಪತಿಯ ದೇವಸ್ಥಾನಗಳಲ್ಲಿಯೂ ಗೌರಿ–ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ ಪ್ರತ್ಯೇಕ ಸ್ಥಳ ವ್ಯವಸ್ಥೆ ನಿಗದಿ ಮಾಡಿದ್ದು, ಮಹಿಳೆಯರು ಗೌರಿ ಪೂಜೆ ಸಲ್ಲಿಸಲು ಅನುಕೂಲವಾಗುವಂತೆ ವಿಶಾಲ ಜಾಗ ಕಲ್ಪಿಸಲಾಗುತ್ತಿದೆ.

**ಖರೀದಿ ಜೋರು:** ಹಬ್ಬದ ಸಡಗರದ ನಡುವೆಯೇ ನಗರದ ಮಾರುಕಟ್ಟೆಗಳಲ್ಲಿ ಹೂ–ಹಣ್ಣುಗಳ ಬೆಲೆ ಗಗನಕ್ಕೇರಿದ್ದು, ಎಡೆಬಿಡದೆ ಸುರಿಯುತ್ತಿರುವ ಮಳೆಯ ನಡುವೆಯೂ ಖರೀದಿಗೆ ಮುಗಿಬಿದ್ದಿದ್ದಾರೆ. ಬಾಳೆಗೊನೆ, ಹೂ, ಹಣ್ಣು, ಕಾಯಿ ವ್ಯಾಪಾರವಂತೂ ಜೋರಾಗಿಯೇ ನಡೆಯುತ್ತಿದೆ.

ನಿನ್ನೆ 50–60 ರೂ., ಇದ್ದ ಸೇವಂತಿಗೆ ಹೂ ಒಂದು ಮಾರಿಗೆ 100–120 ರೂ. ಏರಿಕೆಯಾಗಿದೆ ಹೂಗಳಲ್ಲಿ ಕನಕಾಂಬರ (ಬಿಡಿ ಹೂ) ಕೆಜಿಗೆ 1600 ರೂ., ಆಗಿದ್ದು, ಹೂಗಳಲ್ಲಿಯೇ ದುಬಾರಿ ಬೆಲೆಗೆ ಮಾರಾಟವಾಗುತ್ತಿದೆ. ಇನ್ನುಳಿದಂತೆ ಮಲ್ಲಿಗೆ ಹೂವು ಕೆಜಿಗೆ 800 ರೂ., ಮರಳೆ ಹೂವು 800 ರೂ., ಗಣಗಲೇ ಹೂವು 400 ರೂ., ಜಾಜಿ ಮಲ್ಲಿಗೆ 2500 ರೂ. ಆಗಿದೆ ಎಂದು ದೇವರಾಜ ಮಾರುಕಟ್ಟೆ ಹೂ ಚೇತನ್ ತಿಳಿಸಿದರು.

ಬಾಳೆಗೊನೆ ಜೋಡಿಗೆ 30–50 ರೂ.ನಂತೆ ಮಾರಾಟ ಮಾಡಲಾಗುತ್ತಿದೆ. ಹಣ್ಣುಗಳ ಬೆಲೆಯೂ ಹೆಚ್ಚಳವಾಗಿದೆ. ಸೇಬು ಕೆಜಿಗೆ (ಗುಣಮಟ್ಟ ಹಾಗೂ ಗಾತ್ರಕ್ಕೆ ತಕ್ಕಂತೆ) 80–160 ರೂ., ದ್ರಾಕ್ಷಿ 120 ರೂ., ಅನಾನಸ್ 50 ರೂ., ಮೊಸಂಬಿ 60 ರೂ., ಕಿತ್ತಳೆ 130 ರೂ., ಡ್ರ್ಯಾಗನ್ ಫ್ರೂಟ್ಸ್ 100 ರೂ. ಕಿವಿ ಹಣ್ಣು(ಮೂರು ಕಿವಿ ಹಣ್ಣಿರುವ ಒಂದು ಬಾಕ್ಸ್) 100 ರೂ., ದಾಳಿಂಬೆ 120–200 ರೂ., ಮರಸೇಬು 120–150 ರೂ., ಸ್ಟಾರ್ ಫ್ರೂಟ್ಸ್ ಒಂದಕ್ಕೆ 10 ರೂ., ಸೀತಾಫಲ ಕೆಜಿಗೆ 100 ರೂ., ಸಪೋಟಾ 140 ರೂ.ಗೆ ಮಾರಾಟವಾಗುತ್ತಿದೆ ಎಂದು ಹಣ್ಣಿನ ವ್ಯಾಪಾರಿ ಶಫತ್ ಅನ್ಸಾರಿ ತಿಳಿಸಿದರು.

**ಬಾಳೆಹಣ್ಣಿಗೆ ಡಿಮ್ಯಾಂಡ್:** ಪೂಜಾ ಕೈಂಕರ್ಯಕ್ಕೆ ಅಗತ್ಯವಾಗಿ ಬೇಕಾದ ಬಾಳೆ ಹಣ್ಣಿಗೆ ಡಿಮ್ಯಾಂಡ್ ಜಾಸ್ತಿಯಾಗಿದೆ. ಏಲಕ್ಕಿ ಬಾಳೆ ಕೆಜಿಗೆ 100–120 ರೂ., ರಸಬಾಳೆ 90–100 ರೂ. ಪಚ್ಚಬಾಳೆ 30–40 ರೂ.ಗೆ ಮಾರಾಟ ಮಾಡಲಾಗುತ್ತಿದೆ. ಬೋಟಿ ಬಜಾರ್‌ನಲ್ಲಿರುವ ಹೇಮಚಂದ್ರ ಬಾಳೆ ಮಂಡಿಯಲ್ಲಿ ಏಲಕ್ಕಿ ಬಾಳೆಹಣ್ಣು ಕೆಜಿಗೆ 80(ಹೋಲ್‌ಸೇಲ್) ರೂ.ಗೆ ಹರಾಜಾಗಿದೆ ಎಂದು ದೇವರಾಜ ಮಾರುಕಟ್ಟೆ ಬಾಳೆಹಣ್ಣಿನ ವ್ಯಾಪಾರಿ ಶಿವಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

**ಪಾಲಿಕೆ ವಿರುದ್ಧ ಗರಂ:** ಸಾರ್ವಜನಿಕ ಸ್ಥಳಗಳು ಹಾಗೂ ರಸ್ತೆಗಳಲ್ಲಿ ಗೌರಿ–ಗಣೇಶ ವಿಗ್ರಹ ಪ್ರತಿಷ್ಠಾಪನೆಗೆ ಚಪ್ಪರ ಅಥವಾ ಶಾಮಿಯಾನ ಹಾಕಲು 3 ದಿನಗಳ ತಾತ್ಕಾಲಿಕ ಅನುಮತಿ ನೀಡುವುದಕ್ಕಾಗಿ ನಗರ ಪಾಲಿಕೆ 600 ರೂ.ಗಳ ಶುಲ್ಕ ವಸೂಲಿ ಮಾಡುತ್ತಿರುವುದಕ್ಕೆ ಹಲವರು ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಎಲ್ಲೆಂದರಲ್ಲಿ ಬಿದ್ದಿರುವ ಕಸ, ತ್ಯಾಜ್ಯವನ್ನು ತೆರವುಗೊಳಿಸದ ನಗರ ಪಾಲಿಕೆ ಗೌರಿ–ಗಣೇಶ ಪ್ರತಿಷ್ಠಾಪನೆಗೆ ಶುಲ್ಕ ವಸೂಲಿ ಮಾಡುತ್ತಿದೆ ಅಲ್ಲದೆ ವಿಸರ್ಜನೆ ಬಳಿಕ ಪ್ರತಿಷ್ಠಾಪನೆ ಮಾಡಿದವರೇ ಚಪ್ಪರ, ಇನ್ನಿತರೆ ವಸ್ತುಗಳನ್ನು ತೆರವು ಗೊಳಿಸಿ, ಗುಂಡಿಗಳನ್ನು ಮುಚ್ಚಬೇಕು ಎಂದು ಷರತ್ತು ಹಾಕಿದ್ದಾರೆ. ಭಕ್ತಿಯಿಂದ ಹಬ್ಬ ಆಚರಿಸುವುದಕ್ಕೂ ಪಾಲಿಕೆಯವರು ಅಡ್ಡಗಾಲಿಡುತ್ತಿದ್ದಾರೆ ಎಂದು ದೂರಿದ್ದಾರೆ.

## ಹೃದಯಾಘಾತದಿಂದ ತಾಯಿ, ಮಗ ಸಾವು




ಹೆಚ್.ಡಿ.ಕೋಟೆ, ಆ.29– ತಾಯಿಗೆ ಪಾರ್ಶ್ವವಾಯು ಉಂಟಾದ ವಿಷಯ ತಿಳಿದು ಹೃದಯಾಘಾತದಿಂದ ಮಗ ಮೃತಪಟ್ಟಿದ್ದು, ಪುತ್ರನ ಅಗಲಿಕೆಯ ಆಘಾತದಿಂದ ತಾಯಿಯೂ ಹೃದಯಾಘಾತದಿಂದ ಮೃತಪಟ್ಟಿರುವ ಹೃದಯ ವಿದ್ರಾವಕ ಘಟನೆ ಪಟ್ಟಣದಲ್ಲಿ ನಡೆದಿದೆ.

ಪಟ್ಟಣದ ಸಿದ್ದಪ್ಪಾಜಿ ರಸ್ತೆ ನಿವಾಸಿ ಗೋಪಾಲಯ್ಯ ಅವರ ಪತ್ನಿ ಸಣ್ಣಮಂಚಮ್ಮ(58) ಹಾಗೂ ಮಗ ಕೃಷ್ಣ(45) ಮೃತಪಟ್ಟ ತಾಯಿ–ಮಗ. ಕೃಷ್ಣ ಪಟ್ಟಣದ ಸೇಂಟ್ ಮೇರಿಸ್ ಆಸ್ಪತ್ರೆ ಮುಂಭಾಗ ಟೀ ಅಂಗಡಿ ನಡೆಸುತ್ತಿದ್ದರು. ಜೊತೆಗೆ ಆಟೋ ಚಾಲಕನಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರು. ಕೃಷ್ಣ ಅವರ ತಾಯಿ ಸಣ್ಣಮಂಚಮ್ಮ ಭಾನುವಾರ ಪಾರ್ಶ್ವವಾಯು ವಿಗೆ ತುತ್ತಾಗಿದ್ದು, ಸಂಬಂಧಿಕರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿ ಮಗನಿಗೆ ವಿಚಾರ ಮುಟ್ಟಿಸಿದ್ದಾರೆ. ವಿಚಾರ ತಿಳಿಯುತ್ತಿದ್ದಂತೆ ಕೃಷ್ಣ ಸ್ಥಳದಲ್ಲೇ ಕುಸಿದು ಬಿದ್ದಿದ್ದು, ತಕ್ಷಣ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಮಗ ಮೃತಪಟ್ಟ ಆಘಾತ ಕಾರಿ ವಿಷಯ ತಿಳಿಯುತ್ತಿದ್ದಂತೆ ಕೃಷ್ಣ ಅವರ ತಾಯಿ ಸಣ್ಣ ಮಂಚಮ್ಮ ಸಹ ಹೃದಯಾಘಾತದಿಂದ ಮೃತಪಟ್ಟಿದ್ದಾರೆ.

ಮೃತ ಕೃಷ್ಣ ಪತ್ನಿ, ಪುತ್ರಿ ಹಾಗೂ ಪುತ್ರನನ್ನು ಅಗಲಿದ್ದಾರೆ. ತಾಯಿ–ಮಗ ಮೃತಪಟ್ಟ ವಿಚಾರ ತಿಳಿದು ಪಟ್ಟಣ ಸೇರಿದಂತೆ ಅಕ್ಕಪಕ್ಕದ ಗ್ರಾಮದವರು ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು. ಮೃತರ ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಸೋಮವಾರ ನೆರವೇರಿತು.

# ಕೊಳತ್ತೂರು ಗ್ರಾಪಂಗೆ ಶೀಲಾ ಅಧ್ಯಕ್ಷೆ

ತಿ.ನರಸೀಪುರ, ಆ.29– ತಾಲೂಕಿನ ಕೊಳತ್ತೂರು ಗ್ರಾಪಂ ನೂತನ ಅಧ್ಯಕ್ಷೆಯಾಗಿ ಶೀಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷೆ ಆರ್.ಎಸ್.ರೂಪ ಅವರನ್ನು ಆ.11ರಂದು ಅವಿಶ್ವಾಸದ ಮೂಲಕ ಪದಚ್ಯುತಗೊಳಿಸಿದ ಹಿನ್ನೆಲೆಯಲ್ಲಿ ಸೋಮವಾರ ಗ್ರಾಪಂ ಆವರಣದಲ್ಲಿ ನೂತನ ಅಧ್ಯಕ್ಷರ ಆಯ್ಕೆಗೆ ಚುನಾವಣಾ ಸಭೆ ನಡೆಸಲಾಯಿತು. ಸಾಮಾನ್ಯ ಮಹಿಳೆಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಶೀಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾ ಅಧಿಕಾರಿ ಸಿಡಿಪಿಓ ಬಿ.ಎನ್.ಬಸವರಾಜು ಘೋಷಿಸಿದರು.

ಪಂಚಾಯಿತಿಯ ಒಟ್ಟು 17 ಸದಸ್ಯರ ಪೈಕಿ 12 ಮಂದಿ ಸದಸ್ಯರು ಚುನಾವಣಾ ಸಭೆಗೆ ಹಾಜರಾಗಿ ಅಧ್ಯಕ್ಷರ ಅವಿರೋಧ ಆಯ್ಕೆಗೆ ಅನುಮೋದನೆ ನೀಡಿದರು. ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.



ನೂತನ ಅಧ್ಯಕ್ಷೆ ಶೀಲಾ ಮಾತನಾಡಿ, ಪಂಚಾಯಿತಿ ಸದಸ್ಯರ ಸಹಕಾರ, ಶಾಸಕರು ಹಾಗೂ ಸಂಸದರ ಮಾರ್ಗದರ್ಶನದಲ್ಲಿ ಗ್ರಾಪಂ ಅಭಿವೃದ್ಧಿಗೆ ದುಡಿಯುತ್ತೇನೆ ಎಂದರು.

ಈ ವೇಳೆ ಉಪಾಧ್ಯಕ್ಷ ಕೆ.ಪಿ.ರವಿಪ್ರಸಾದ್, ಪಿಡಿಓ ನಾಗರಾಜು, ಸದಸ್ಯರಾದ ಕುಮಾರಸ್ವಾಮಿ, ಶಾಂತರಾಜು, ಕೆ.ಟಿ.ನಂಜುಂಡಸ್ವಾಮಿ, ನಂಜುಂಡೇಗೌಡ, ನಾಗೇಶ, ಮೀನಾಕ್ಷಿ, ಲಕ್ಷ್ಮಮ್ಮ, ಯಶೋಧ, ಸರಸ್ವತಿ, ಸಿದ್ದಮ್ಮ, ಮಾಜಿ ಸದಸ್ಯ ಕೆ.ಎನ್.ಕುಮಾರ, ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಆರ್.ಸೋಮಣ್ಣ, ಪಟೇಲ್ ಜವರಪ್ಪ, ಡೈರಿ ಗುರುಮೂರ್ತಿ, ಚಿದರವಳ್ಳಿ ಗ್ರಾಪಂ ಅಧ್ಯಕ್ಷ ರವಿ, ಮುಖಂಡರಾದ ಅಂಗಡಿ ಪುಟ್ಟಸ್ವಾಮಿ, ದುಂಡಪ್ಪ, ಬಸವರಾಜಪ್ಪ, ಶಿವಮೂರ್ತಿ ಹಾಗೂ ಇನ್ನಿತರರಿದ್ದರು.

## ಬೆಟ್ಟದಪುರ ಕಾಲೇಜಲ್ಲಿ ಮೇಲಂತಸ್ತಿನ ಕೊಠಡಿ ಉದ್ಘಾಟನೆ



ಬೆಟ್ಟದಪುರ, ಆ.29– ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ಮೇಲಂತಸ್ತಿನ ಕೊಠಡಿಗಳನ್ನು ಶಾಸಕ ಕೆ.ಮಹದೇವ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ವಿದ್ಯಾರ್ಥಿಗಳು ಕಲೆ, ನಾಡು–ನುಡಿ ಹಾಗೂ ಸಂಸ್ಕೃತಿ ಬಗ್ಗೆ ಅರಿವು ಮೂಡಿಸಿಕೊಂಡು, ಅದರ ಉಳಿವಿಗೆ ಶ್ರಮಿಸಬೇಕು ಎಂದರು. ಬೆಟ್ಟದಪುರದಲ್ಲಿ 20 ಕೋಟಿ ರೂ.ಗೂ ಹೆಚ್ಚು ಅಭಿವೃದ್ಧಿ ಕಾರ್ಯ ಮಾಡಿದ್ದೇನೆ. ಇದನ್ನು ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತಿಳಿಸಬೇಕು ಎಂದರು. ಈ ವೇಳೆ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸೌಮ್ಯ, ಸದಸ್ಯರಾದ ರಾಜಶೇಖರ್, ಅಯ್ಯರ್‌ಗಿರಿ, ಗಿರಿಗೌಡ, ಈಶ್ವರಾಚಾರ್, ಇಮ್ರಾನ್‌ಖಾನ್, ಕಾಲೇಜಿನ ಪ್ರಾಂಶುಪಾಲೆ ಡಾ.ಚೈತ್ರಾ, ಮುಖಂಡರಾದ ಬಿ.ಸಿ.ರಾಜೇಂದ್ರ, ಉದಯಕುಮಾರ್, ಮಾಜಿ ತಾಪಂ ಸದಸ್ಯ ಮಲ್ಲಿಕಾರ್ಜುನ್, ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಮೈಮುಲ್‌ನಲ್ಲಿ ತರಬೇತಿ ಪಡೆಯುತ್ತಿರುವ ಉತ್ತರ ಕರ್ನಾಟಕದ 45 ಮಂದಿ ಹಾಲು ಉತ್ಪಾದಕರು ಬನ್ನೂರಿನ ಸಮೀಪದ ಮಾದಿಗಹಳ್ಳಿ ಡೇರಿಗೆ ಭೇಟಿ ನೀಡಿ, ಹಾಲು, ರಾಸು ಪರೀಕ್ಷೆ ಬಗ್ಗೆ ಮಾಹಿತಿ ಪಡೆದರು. ಈ ವೇಳೆ ಡಾ.ರಂಗರಾಜು, ಸಂಘದ ಅಧ್ಯಕ್ಷ ಎಂ.ಆರ್.ರವಿ, ಕಾರ್ಯದರ್ಶಿ ರಮೇಶ್, ಸೋಮಶೇಖರ್ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು.


**ಹೆಚ್.ಡಿ.ಕೋಟೆ ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ಅವರು ಬೆಂಗಳೂರಿನಲ್ಲಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯರೂ ಆದ ಚುನಾವಣೆ ಸಮಿತಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿ ಗೌರಿ–ಗಣೇಶ ಹಬ್ಬದ ಶುಭಾಶಯ ಕೋರಿದರು. ನಂತರ ಕೋಟೆ ವಿಧಾನಸಭಾ ಕ್ಷೇತ್ರದ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದರು. ಈ ವೇಳೆ ವಕೀಲರು ಹಾಗೂ ತೆರಿಗೆ ಸಲಹೆಗಾರ ಸಿ.ಕೆ.ಮಲ್ಲಿಕಾರ್ಜುನಸ್ವಾಮಿ, ಶಿವಕುಮಾರ್, ಶಿವು ಸೇರಿದಂತೆ ಇತರರಿದ್ದರು.**



## ಸತತ ಮಳೆ: ಕೊಂಗಳ್ಳಿಯಲ್ಲಿ ಮನೆ ಗೋಡೆ ಕುಸಿತ

ಮಲ್ಕುಂಡಿ, ಆ.29– ಸತತ ಮಳೆಗೆ ಮನೆ ಗೋಡೆ ಕುಸಿದಿರುವ ಘಟನೆ ಭಾನುವಾರ ರಾತ್ರಿ ಸಮೀಪದ ಎಂ.ಕೊಂಗಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಹದೇವಗೌಡ ಎಂಬುವರ ಮನೆ ಕುಸಿದಿದೆ. ಕಳೆದ ಮೂರ್‍ನಾಕು ದಿನಗಳಿಂದ ಸುರಿದ ಸತತ ಮಳೆಗೆ ಶಿಥಿಲಗೊಂಡಿದ್ದ ಮನೆ ಗೋಡೆ ಭಾನುವಾರ ರಾತ್ರಿ ಕುಸಿದು ಬಿದ್ದಿದೆ. ಈ ವೇಳೆ ಮನೆಯಲ್ಲಿ ಮಲಗಿದ್ದ ಸದಸ್ಯರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವಂತೆ ಮನೆ ಮಾಲೀಕ ಮಹದೇವಗೌಡ ಮನವಿ ಮಾಡಿದ್ದಾರೆ.

## ಪ್ರಸನ್ನಾನಂದ ಶ್ರೀಗಳ ಹೋರಾಟಕ್ಕೆ ಶಾಸಕರ ಬೆಂಬಲ



ಹುಣಸೂರು, ಆ.29– ಮೀಸಲಾತಿಗೆ ಆಗ್ರಹಿಸಿ ವಾಲ್ಮೀಕಿ ಸಮಾಜದ ಶ್ರೀಪ್ರಸನ್ನಾನಂದ ಸ್ವಾಮೀಜಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ 201 ದಿನ ಪೂರೈಸಿದ್ದು, ತಾಲೂಕಿನ ನಾಯಕ ಸಮಾಜದ ಮುಖಂಡರೊಂದಿಗೆ ಇಂದು ಶಾಸಕ ಹೆಚ್.ಪಿ.ಮಂಜುನಾಥ್ ಭೇಟಿ ನೀಡಿ ಶ್ರೀಗೆ ಬೆಂಬಲ ಸೂಚಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಶ್ರೀ ಪ್ರಸನ್ನಾನಂದಪುರಿ ಸ್ವಾಮಿಗಳು ಸಮಾಜದ ಬಂಧುಗಳ ಒಳಿತಿಗಾಗಿ ಮೀಸಲಾತಿ ಹೋರಾಟ ನಡೆಸುತ್ತಿದ್ದು, ಸರ್ಕಾರ ಗಮನ ಹರಿಸದೇ ಇರುವುದು ಖಂಡನೀಯ. ಎಸ್‌ಸಿ ಎಸ್‌ಟಿ ವರ್ಗಗಳಿಗೆ ಜೀವನ ಮತ್ತು ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಹಾಗೂ ಆರ್ಥಿಕವಾಗಿ ಸಬಲರಾಗಬೇಕೆಂಬುದು ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನದ ಆಶಯ. ಅದರಂತೆ ಕೇಂದ್ರ ಸರ್ಕಾರವು ಜನಗಣತಿಗೆ ಅನುಗುಣವಾಗಿ ಮೀಸಲಾತಿ ನೀಡಿದೆ. ಆದರೆ ರಾಜ್ಯ ಸರ್ಕಾರ ಸಂವಿಧಾನಕ್ಕೆ ಗೌರವ ನೀಡುತ್ತಿಲ್ಲ ಎಂದು ಆರೋಪಿಸಿದರು. ಈ ಸಂದರ್ಭದಲ್ಲಿ ಹುಣಸೂರು ನಗರದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ವಾಲ್ಮೀಕಿ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಆ.28ರಂದು ನಡೆದ ಶಂಕುಸ್ಥಾಪನೆ ಜ್ಞಾಪಕಾರ್ಥ ಶ್ರೀಗಳಿಗೆ ಬೆಳ್ಳಿ ತಟ್ಟೆ ಹಾಗೂ ನೆನಪಿನ ಕಾಣಿಕೆ ನೀಡಿ ಗೌರವಿಸಲಾಯಿತು. ಹುಣಸೂರು ತಾಲೂಕಿನ ನೂರಕ್ಕೂ ಹೆಚ್ಚು ನಾಯಕ ಸಮಾಜದ ಮುಖಂಡರು ಈ ವೇಳೆ ಹಾಜರಿದ್ದರು.

## ಕೋಕೊ, ಕಾಳುಮೆಣಸು ಬೆಳೆದು ಆರ್ಥಿಕವಾಗಿ ಸದೃಢರಾಗಿ

### ಯಲೇಚನಹಳ್ಳಿ ತೋಟಗಾರಿಕೆ ವಿವಿ ವಿಜ್ಞಾನಿ ಸಿದ್ದಪ್ಪ ಕರೆ



ಪಿರಿಯಾಪಟ್ಟಣ, ಆ.29– ರೈತರು ಅಡಿಕೆ, ತೆಂಗು ಬೆಳೆಗಳನ್ನು ಮಾತ್ರ ಅವಲಂಬಿಸದೇ, ಕಾಳುಮೆಣಸು ಹಾಗೂ ಕೋಕೊಗಳನ್ನು ಬೆಳೆದು ಆರ್ಥಿಕವಾಗಿ ಸದೃಢವಾಗಬೇಕು ಎಂದು ಯಲೇಚನಹಳ್ಳಿ ತೋಟಗಾರಿಕೆ ವಿಶ್ವವಿದ್ಯಾನಿಲಯದ ವಿಜ್ಞಾನಿ ಸಿದ್ದಪ್ಪ ಕರೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಂತರ ಬೆಳೆಗಳಾದ ಕಾಳುಮೆಣಸು ಹಾಗೂ ಕೋಕೊ ಬೆಳೆ ಪ್ರದೇಶ ವಿಸ್ತರಣೆ ಮತ್ತು ನಿರ್ವಹಣೆ ಕುರಿತ ವಿಚಾರ ಸಂಕಿರಣದಲ್ಲಿ ರೈತರಿಗೆ ಮಾಹಿತಿ ನೀಡಿ ಅವರು ಮಾತನಾಡಿದರು. ರೈತರು ವಿಭಿನ್ನ ಬೆಳೆಗಳಾದ ಬೆಣ್ಣೆಹಣ್ಣು, ಜಾಯಿಕಾಯಿ, ನುಗ್ಗೆ ಸೇರಿದಂತೆ ಉತ್ತಮ ಆದಾಯ ತರುವ ಇನ್ನಿತರ ತೋಟಗಾರಿಕಾ ಬೆಳೆಗಳನ್ನು ಬೆಳೆದು ಆರ್ಥಿಕವಾಗಿ ಸದೃಢರಾಗಬೇಕು. ಇತ್ತೀಚಿನ ದಿನಗಳಲ್ಲಿ ಕೋಕೊ ಹಾಗೂ ಕಾಳುಮೆಣಸು ಜಾಗತಿಕ ಮಾರುಕಟ್ಟೆಯಲ್ಲಿ ಅತ್ಯಂತ ಲಾಭದಾಯಕ ಬೆಳೆಗಳಾಗಿ ಗುರುತಿಸಿಕೊಂಡಿವೆ. ಹೀಗಾಗಿ ರೈತರು ಹೆಚ್ಚಾಗಿ ಈ ಬೆಳೆಗಳನ್ನು ಬೆಳೆಯಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕಾಳುಮೆಣಸು, ಕೋಕೊ ಬೆಳೆಗಳಿಗೆ ಬೇಕಾದ ವಾತಾವರಣ, ತಳಿ, ಸಸ್ಯೋತ್ಪಾದನೆ, ನಾಟಿ, ಸಸ್ಯ ಸಂರಕ್ಷಣೆ, ರೋಗಗಳು, ರೋಗದ ಚಿಹ್ನೆ, ಅದರ ನಿಯಂತ್ರಣ, ಜೈವಿಕ ನಿಯಂತ್ರಣ, ಮಣ್ಣಿನ ತೇವಾಂಶ, ಸಾಂದ್ರತೆ, ಸಾವಯವ ಹಾಗೂ ರಾಸಾಯನಿಕ ಗೊಬ್ಬರಗಳ ಬಳಕೆ, ಆಕಾರ ಹಾಗೂ ಸವರುವಿಕೆಯಿಂದ ಹೇಗೆ ಬೆಳೆಗಳ ನಿರ್ವಹಣೆ, ಪೋಷಕಾಂಶ, ಬೇವಿನ ಇಂಡಿ, ರಾಸಾಯನಿಕ ಗೊಬ್ಬರಗಳಾದ ಸಾರಜನಕ, ಪೊಟ್ಯಾಷ್, ರಂಜಕಗಳ ಬಳಕೆ ಹಾಗೂ ಹನಿ ನೀರಾವರಿಗೆ ಸರ್ಕಾರದ ಸಹಾಯಧನ, ಮಾರುಕಟ್ಟೆಗಳ ಬಗ್ಗೆ ಸವಿವರವಾಗಿ ರೈತರಿಗೆ ಮಾಹಿತಿ ನೀಡಿದರು. ಇದೇ ವೇಳೆ ರೈತರು ಕೇಳಿದ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದರು.

ಈ ವೇಳೆ ಶಾಸಕ ಕೆ. ಮಹದೇವ್ ಮಾತನಾಡಿದರು. ಪಿರಿಯಾಪಟ್ಟಣ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಭಾರತಿ, ಸಹಾಯಕ ನಿರ್ದೇಶಕ ಪ್ರಸಾದ್, ಕರುಣಾಕರ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಪ್ರಗತಿಪರ ರೈತ ಪಿ.ಆರ್.ಶಿವಾನಂದ್, ಇಲಾಖೆಯ ಸಹಾಯಕ ಶಂಕರಲಿಂಗಪ್ಪ, ವಿದ್ಯಾಶ್ರೀ, ಶ್ರೀಧರ್ ಸೇರಿದಂತೆ ಇಲಾಖೆ ಸಿಬ್ಬಂದಿ ಇನ್ನಿತರರಿದ್ದರು.

## ಆಸ್ಪತ್ರೆಯಲ್ಲಿ ಚಿಕಿತ್ಸೆ ಜೊತೆಗೆ ಉತ್ತಮ ವಾತಾವರಣ ಅಗತ್ಯ



ಸಾಲಿಗ್ರಾಮ, ಆ.29– ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡುವ ಜೊತೆಗೆ ಆಸ್ಪತ್ರೆ ವಾತಾವರಣ ರೋಗಿಗಳಿಗೆ ಪೂರಕವಾಗುವ ರೀತಿ ನೋಡಿಕೊಳ್ಳುವ ಜವಾಬ್ದಾರಿ ರಕ್ಷಾ ಸಮಿತಿ ಸದಸ್ಯರು ಹಾಗೂ ವೈದ್ಯರ ಮೇಲಿದೆ ಎಂದು ಶಾಸಕ ಸಾ.ರಾ. ಮಹೇಶ್ ಹೇಳಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಿದ್ದ ಆರೋಗ್ಯ ರಕ್ಷಾ ಸಮಿತಿ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಬಿಸಿ ನೀರಿನ ಸೌಲಭ್ಯ ಒದಗಿಸಲು 75 ಸಾವಿರಕ್ಕೂ ಹೆಚ್ಚು ಅಧಿಕ ಬೆಲೆ ಬಾಳುವ ಸೋಲಾರ್ ಪರಿಕರಗಳನ್ನು ಖರೀದಿ ಮಾಡುವ ಜೊತೆಗೆ ಬುಲೆಟ್ ಕ್ಯಾಮೆರಾ ಅಳವಡಿಕೆ ಮಾಡಲು 35 ಸಾವಿರ ರೂ ಹಾಗೂ ಆರೋಗ್ಯ ಇಲಾಖೆ ಸರಬರಾಜು ಮಾಡಿರುವ ವಾಷಿಂಗ್ ಮೆಷಿನ್ ಅಳವಡಿಸಲು ಅಗತ್ಯ ಇರುವ ಶೆಟ್ಟರ್ ನಿರ್ಮಿಸಲು 2.40 ಲಕ್ಷ ರೂ. ಹಣವನ್ನು ರಕ್ಷಾ ಸಮಿತಿಯಲ್ಲಿ ಬಳಕೆ ಮಾಡಿಕೊಳ್ಳಲು ಅನುಮತಿ ಕೊಟ್ಟಿರುವುದಾಗಿ ತಿಳಿಸಿದರು. ಒಳ ರೋಗಿಗಳಿಗೆ ಅಗತ್ಯ ಇರುವ ಬೆಡ್‌ಶೀಟ್, ಪಿಲ್ಲೋಕವರ್ ಸೇರಿದ ಇತರ ಪರಿಕರಗಳನ್ನು ಖರೀದಿಸಲು ರಕ್ಷಾ ಸಮಿತಿಯಿಂದ 1 ಲಕ್ಷರೂ. ಉಪಯೋಗಿಸಬಹುದೆಂದು ನಿರ್ಣಯ ಕೈಗೊಳ್ಳಲಾಯಿತು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಲಕ್ಷ್ಮೀ, ಆರೋಗ್ಯ ಕೇಂದ್ರದ ಆಡಳಿತಾಧಿಕಾರಿ ಡಾ.ಅಶೋಕ್, ರಕ್ಷಾ ಸಮಿತಿ ಸದಸ್ಯರಾದ ಸುಮಾ, ಎಸ್.ಬಿ.ಜಯರಾಮ್, ನಾಗರಾಜ್, ತಹಶೀಲ್ದಾರ್ ಮೋಹನ್ ಕುಮಾರ್, ತಾಪಂ ಇಓ ಸತೀಶ್, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ರಾಜಣ್ಣ, ರೈತ ಸಂಘದ ಅಧ್ಯಕ್ಷ ಎಸ್.ಬಿ.ಶೇಖರ್ ಉಪಸ್ಥಿತರಿದ್ದರು.

**ನರಗುಂದ ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ಬಡ್ತಿ ಹೊಂದಿದ ನಂಜನಗೂಡಿನ ದೊಡ್ಡಕವಲಂದೆ ಸರ್ಕಾರಿ ಪ್ರೌಢಶಾಲೆ ಉಪಪ್ರಾಂಶುಪಾಲ ಜೆ.ರಾಜು ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು. ಈ ವೇಳೆ ಪ್ರಭಾರ ಉಪ ಪ್ರಾಂಶುಪಾಲ ಟಿ.ಎನ್.ರಘು, ಎಸ್‌ಡಿಎಂಸಿ ಅಧ್ಯಕ್ಷ ನಜಿಬುಲ್ಲಾ ಖಾನ್, ಗ್ರಾಪಂ ಸದಸ್ಯರಾದ ಪ್ರಶಾಂತ್, ಮಂಜುನಾಥ್, ಪಿಡಿಓ ಪುರುಷೋತ್ತಮ್, ಡಾ.ಮಲ್ಲಿಕಾರ್ಜುನಸ್ವಾಮಿ, ರಮೇಶ್, ಸಿದ್ದರಾಜು, ಡಾ.ಸಂಪತ್ ಕುಮಾರ್, ಬಸವಣ್ಣ ಇತರರಿದ್ದರು.**



### ಮಕ್ಕಳ ಪ್ರಗತಿಗೆ ಪ್ರತಿಭಾ ಕಾರಂಜಿ ಸಹಕಾರಿ

ಬೈಲಕುಪ್ಪೆ, ಆ.29– ವಿದ್ಯಾರ್ಥಿಗಳ ಸರ್ವತೋಮುಖ ಪ್ರಗತಿಗೆ ಪ್ರತಿಭಾ ಕಾರಂಜಿ ಸಹಕಾರಿ ಎಂದು ಮೈಸೂರು ಜಿಲ್ಲಾ ಕಾಂಗ್ರೆಸ್ ಹಿರಿಯ ಕಾರ್ಯದರ್ಶಿ ಸಮಿವುಲ್ಲಾ ಖಾನ್ ತಿಳಿಸಿದರು. ವಲಯ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ ಎಂದರು. ಈ ವೇಳೆ ಶಾಲೆ ಶಿಕ್ಷಕರು, ಎಸ್‌ಡಿಎಂಸಿ ಅಧ್ಯಕ್ಷರು, ಗ್ರಾಪಂ ಸದಸ್ಯ ಮಂಜುನಾಥ್, ಪೋಷಕರು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿದ್ದರು.

# ಹೋರಾಟದ ಮೂಲಕ ಬ್ರಿಟಿಷರಿಗೆ ಆಘಾತ ನೀಡಿದವರು ಸಾವರ್ಕರ್

### ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ

ಭೇರ್ಯ, ಆ.29– ತಮ್ಮ ಹೋರಾಟದ ಮೂಲಕ ಬ್ರಿಟಿಷರಿಗೆ ಆಘಾತ ನೀಡಿದವರು ಸಾವರ್ಕರ್ ಎಂದು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ ತಿಳಿಸಿದರು.

ಗ್ರಾಮದ ಗಾಂಧಿ ವೃತ್ತಕ್ಕೆ ಕೆ.ಆರ್.ಪೇಟೆ ಕಡೆಯಿಂದ ಆಗಮಿಸಿದ ವೀರ ಸಾವರ್ಕರ್ ರಥಯಾತ್ರೆಗೆ ಪುಷ್ಪಾರ್ಚನೆ ಮಾಡಿ ಬರಮಾಡಿಕೊಂಡು ಮಾತನಾಡಿದ ಅವರು, ಸಾವರ್ಕರ್ ಸ್ವಾತಂತ್ರ್ಯ ಹೋರಾಟದ ಜೊತೆಗೆ ಹಿಂದೂ ಧರ್ಮದ ಸುಧಾರಣೆ, ರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದರು. ಅವರು ಸಾಗಿದ ದಾರಿಯಲ್ಲಿ ನಾವೆಲ್ಲರೂ ಸಾಗಬೇಕು. ಅವರು ದೇಶದ ಶ್ರೇಷ್ಠ ಹೋರಾಟಗಾರ. ಇಂದಿರಾ ಗಾಂಧಿ, ರಾಧಾಕೃಷ್ಣನ್ ಸೇರಿದಂತೆ ಹಲವು ಮಹಾನ್ ನಾಯಕರು ಸಾವರ್ಕರ್ ಅವರನ್ನು ಹೊಗಳಿದ್ದಾರೆ ಎಂದರು. ದೇಶ ಮಹತ್ವದ ಕಾಲಘಟ್ಟದಲ್ಲಿದೆ.



ಭಾರತ ವಿಶ್ವ ಗುರುವಾಗುವತ್ತ ದಾಪುಗಾಲಿಟ್ಟಿದ್ದರೆ, ಅನೇಕ ಸವಾಲುಗಳನ್ನೂ ಎದುರಿಸುತ್ತಿದೆ. ದೇಶದ ಹೆಸರಿಗೆ ಮಸಿ ಬಳಿಯುವ ಕೆಲಸವೂ ನಡೆಯುತ್ತಿದೆ. ಸಾವರ್ಕರ್ ಅವರನ್ನು ಸ್ವಾತಂತ್ರ್ಯ ಹೋರಾಟಗಾರನಲ್ಲ ಎನ್ನುವ ವರು ಅವರ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ ಎಂದು ಕಾಂಗ್ರೆಸಿಗರ ವಿರುದ್ಧ ಗುಡುಗಿದರು.

ಸಾವರ್ಕರ್ ರಥಯಾತ್ರೆ ಸಾಲಿಗ್ರಾಮ, ಚುಂಚನಕಟ್ಟೆ ಮಾರ್ಗವಾಗಿ ಕೆ.ಆರ್.ನಗರಕ್ಕೆ ತೆರಳಲಿದ್ದು, ನಂತರ ಪಿರಿಯಾಪಟ್ಟಣಕ್ಕೆ ತೆರಳಲಿದೆ ಎಂದರು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಕೆ.ವೈ.ಮಂಜು, ಎಪಿಎಂಸಿ ಮಾಜಿ ನಿರ್ದೇಶಕ ಅನಿಲ್, ತಾಲೂಕು ಬಿಜೆಪಿ ವಕ್ತಾರ ಗೋಪಾಲರಾಜು, ತಾಲೂಕು ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಾರ್ಕಂಡೇಯ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಸಂಜಯ್ ಶರ್ಮ, ಜಿಲ್ಲಾ ಯುವ ಮೋರ್ಚಾ ಉಪಾಧ್ಯಕ್ಷ ವಿನೋದ್, ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಧರ್ಮ, ಕೆಡಿಪಿ ಸಭೆ ಸದಸ್ಯ ಹರೀಶ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ದಿನೇಶ್, ಬಿಜೆಪಿ ಮುಖಂಡರಾದ ಉಮೇಶ್, ದೇವರಾಜು, ಪ್ರಕಾಶ್, ಪುರಸಭೆ ನಾಮ ನಿರ್ದೇಶಕರಾದ ಉಮಾಶಂಕರ, ಜಿ.ಪಿ.ಮಂಜು ಇತರರಿದ್ದರು.




## ತಿ.ನರಸೀಪುರ 4ನೇ ವಾರ್ಡ್‌ನಲ್ಲಿ ಕಸದ ಬುಟ್ಟಿ ವಿತರಣೆ



ತಿ.ನರಸೀಪುರ, ಆ.29– ಸ್ವಚ್ಛ ಭಾರತ್ ಮಿಷನ್ ಯೋಜನೆಯ ಎಸ್‌ಬಿಎಂ ಅನುದಾನದಲ್ಲಿ ಪುರಸಭೆಯ 4ನೇ ವಾರ್ಡ್ ಜನತೆಗೆ ವಾರ್ಡ್ ಸದಸ್ಯ ಎಲ್.ಮಂಜುನಾಥ್ ಒಣ, ಹಸಿ ಕಸ ಬೇರ್ಪಡಿಸಲು ಕಸದ ಬುಟ್ಟಿಗಳನ್ನು ವಿತರಿಸಿದರು.

ನಂತರ ಮಾತನಾಡಿದ ಅವರು, ಆರೋಗ್ಯದ ಹಿತದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಆದ್ಯ ಕರ್ತವ್ಯ ಎಂದರು.

ಮನುಷ್ಯ ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳನ್ನು ಘನ, ದ್ರವ, ಅನಿಲ ತ್ಯಾಜ್ಯ ಎಂದು 3 ವಿಧವಾಗಿ ವರ್ಗೀಕರಿಸಲಾಗಿದೆ. ಇವುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದಿದ್ದರೆ ಪರಿಸರ ನಾಶವಾಗುತ್ತದೆ. ಆದ್ದರಿಂದ ಇವುಗಳನ್ನು ವೈಜ್ಞಾನಿಕ ರೀತಿ ವಿಂಗಡಿಸಲು ಸೂಕ್ತ ವ್ಯವಸ್ಥೆ ಮಾಡಿಕೊಳ್ಳಬೇಕು. ಮರುಬಳಕೆ ಮಾಡಲಾಗದ ತ್ಯಾಜ್ಯವನ್ನು ವೈಜ್ಞಾನಿಕ ರೀತಿ ದಹಿಸುವ ಅಥವಾ ಭೂಮಿಯಲ್ಲಿ ಹುದುಗಿಸುವ ವ್ಯವಸ್ಥೆ ಮಾಡಬೇಕು. ಕಸದಿಂದ ರಸ ತಯಾರಿಸಲು ಜನರಿಗೆ ಪ್ರೋತ್ಸಾಹಿಸಬೇಕು. ಇವೆಲ್ಲವನ್ನೂ ಮಾಡಿದಾಗ ಸ್ವಚ್ಛ ಭಾರತ್ ನಿರ್ಮಾಣದ ಕನಸು ನನಸಾಗಿಸಬಹುದು ಎಂದರು. ಈ ವೇಳೆ ಪುರಸಭಾಧ್ಯಕ್ಷ ಮದನ್ ರಾಜ್, ಮುಖ್ಯಾಧಿಕಾರಿ ಬಸವರಾಜು, ಆರೋಗ್ಯ ಅಧಿಕಾರಿ ಲೋಕೇಶ್ವರಿ, ಬಿಲ್ ಕಲೆಕ್ಟರ್ ಪುಟ್ಟಸ್ವಾಮಿ, ಮುಖಂಡರಾದ ಲೋಕೇಶ್, ಕುಮಾರ್, ಪುರಸಭೆ ಸಿಬ್ಬಂದಿ ವರ್ಗ ಹಾಜರಿದ್ದರು.



ಮೈಸೂರು ತಾಲೂಕಿನ ಸಿಂಧುವಳ್ಳಿ ಗ್ರಾಪಂ ಅಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದ ಅನ್ನಪೂರ್ಣ ಅವರು ಶಾಸಕ ಜಿ.ಟಿ.ದೇವೇಗೌಡ, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿ.ಡಿ.ಹರೀಶ್‌ಗೌಡ ಅವರನ್ನು ಸನ್ಮಾನಿಸಿದರು. ಈ ವೇಳೆ ಗ್ರಾಪಂ ಸದಸ್ಯರು ಸೇರಿದಂತೆ ಇತರರಿದ್ದರು.

# ಮಳೆ ಹಾನಿಗೊಳಗಾದ ಎಲ್ಲರಿಗೂ ಪರಿಹಾರ

**●ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಘೋಷಣೆ ●ಮಳೆಯಿಂದ 3200 ಮನೆಗಳಿಗೆ ಹಾನಿ; ಇಬ್ಬರು ಬಲಿ ●14 ಜಾನುವಾರು ಸಾವು**



ಮೈಸೂರು, ಆ.29(ಆರ್‌ಕೆಬಿ)–ಮಳೆ ಹಾನಿಯಿಂದ ತೊಂದರೆಗೊಳಗಾದ ಎಲ್ಲರಿಗೂ ಸೂಕ್ತ ಪರಿಹಾರ ವಿತರಿಸಬೇಕು. ಇದರಲ್ಲಿ ಯಾವುದೇ ರಾಜಕೀಯ ಇಲ್ಲ ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತಿಯ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಮಳೆ ಹಾನಿಗೆ ಸಂಬಂಧಿಸಿದಂತೆ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದ ಸಚಿವರು, ಮಳೆ ಹಾನಿ, ಬೆಳೆ ಹಾನಿ ಆದವರಿಗೆ ಸೂಕ್ತ ರೀತಿಯಲ್ಲಿ ಪರಿಹಾರ ವಿತರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಕೆಆರ್‌ಎಸ್‌ನಲ್ಲಿ ಒಳ ಮತ್ತು ಹೊರ ಹರಿವಿನಲ್ಲಿ ಹೆಚ್ಚಳವಾಗಿದ್ದು, ಸದ್ಯಕ್ಕೆ ಯಾವುದೇ ತೊಂದರೆ ಇಲ್ಲ. ವಾಡಿಕೆಗಿಂತ ಶೇ.72ರಷ್ಟು ಹೆಚ್ಚುವರಿ ಮಳೆಯಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು. ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಜಿಲ್ಲೆಯಲ್ಲಿ ಮಳೆಯಿಂದ ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ. ಹುಣಸೂರು ತಾಲೂಕಿನಲ್ಲಿ ಒಬ್ಬರು ಮತ್ತು ಮೈಸೂರು ತಾಲೂಕಿನ ಜಯಪುರ ಹೋಬಳಿಯಲ್ಲಿ ಒಬ್ಬರು, 10 ದೊಡ್ಡ ಹಾಗೂ 4 ಚಿಕ್ಕ ಒಟ್ಟು 14 ಜಾನುವಾರುಗಳು ಬಲಿಯಾಗಿವೆ. 14 ಪ್ರಾಣಿಗಳ ಹಾನಿಯಾಗಿದೆ. 3200 ಮನೆಗಳಿಗೆ ಹಾನಿಯಾಗಿದ್ದು, ಈ ಪೈಕಿ 2497 ಮನೆಗಳಿಗೆ ಪರಿಹಾರ ನೀಡಲಾಗಿದೆ ಎಂದರು.

3,95,827 ಹೆಕ್ಟೇರ್ ಪೈಕಿ 3,05,127 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. 321 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಈ ಕುರಿತು ಜಂಟಿ ಸರ್ವೆ ಮಾಡಲಾಗುತ್ತಿದೆ. ಭತ್ತ, ಮುಸುಕಿನ ಜೋಳ, ಅಲಸಂದೆ ಬೆಳೆಗಳು ಹಾಳಾಗಿವೆ ಎಂದರು. 29 ಮನೆಗಳಿಗೆ ನೀರು ನುಗ್ಗಿದೆ. 159 ಪ್ರಾಥಮಿಕ ಶಾಲಾ ಕಟ್ಟಡ,

> “ಅಧಿಕಾರಿಗಳ ಬೇಜವಾಬ್ದಾರಿಯಿಂದ ವಿಜಯನಗರ 1 ಮತ್ತು 2ನೇ ಹಂತದ ಜನರಿಗೆ ತೊಂದರೆಯಾಗುತ್ತಿದೆ. ಅಧಿಕಾರಿಗಳು ಚರಂಡಿ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಕೈಗೊಂಡಿದ್ದರೆ ಹೀಗಾಗುತ್ತಿರಲಿಲ್ಲ. ತಕ್ಷಣ ಕ್ರಮ ಕೈಗೊಂಡು ಜನರಿಗಾಗುತ್ತಿರುವ ತೊಂದರೆ ತಪ್ಪಿಸಿ.
> –ಎಲ್.ನಾಗೇಂದ್ರ, ಶಾಸಕ

15 ಅಂಗನವಾಡಿ, 13 ಪ್ರಾಥಮಿಕ ಆರೋಗ್ಯ ಕೇಂದ್ರ, 12 ಸೇತುವೆಗಳು, ನಗರದಲ್ಲಿ 30 ಕಿ.ಮೀ., 335 ವಿದ್ಯುತ್ ಕಂಬಗಳು, 11 ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗಿದೆ ಎಂದರು. ಮೂರು ದಿನಗಳಿಂದ ಮಳೆಯಾಗುತ್ತಿದ್ದು, ಶಾಲೆಗಳಿಗೆ ಮಕ್ಕಳು ಆಗಮಿಸಿದ ನಂತರ ರಜೆ ಘೋಷಣೆ ಮಾಡಿದ್ದರಿಂದ ಪೋಷಕರು ಗೊಂದಲಕ್ಕೀಡಾಗಿದ್ದಾರೆ. ಬಿಇಓ, ಡಿಡಿಪಿಐಗಳ ಎಡವಟ್ಟಿನಿಂದ ಈ ರೀತಿಯಾಗಿದೆ ಎಂದು ಸಚಿವರು ತರಾಟೆಗೆ ತೆಗೆದುಕೊಂಡರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೆ.ಆರ್.ನಗರ ಶಾಸಕ ಸಾ.ರಾ.ಮಹೇಶ್, ಪಿರಿಯಾಪಟ್ಟಣ ಶಾಸಕ ಕೆ.ಮಹದೇವ್, ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಜಿಪಂ ಸಿಇಒ ಪೂರ್ಣಿಮಾ, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

**ಲಿಂಗಾಂಬುದಿ ಕೆರೆ ನಿರ್ವಹಣೆ ಇಲ್ಲದೆ ಜನರಿಗೆ ತೊಂದರೆ:** ಮೈಸೂರಿನ ಲಿಂಗಾಂಬುದಿ ಕೆರೆಯ ಸೂಕ್ತ ನಿರ್ವಹಣೆ ಮಾಡುತ್ತಿಲ್ಲ. ಹೀಗಾಗಿ ಹಲವು ಬಡಾವಣೆಗಳು, ಮನೆಗಳಿಗೆ ನೀರು ನುಗ್ಗುವಂತಾಗಿದೆ. ಜನರು ಪರದಾಡುವಂತಾಗಿದೆ. ಹೀಗಾಗಿ ರಾಜಕಾಲುವೆಗಳ ದುರಸ್ತಿಯಾಗಬೇಕು, ಮನೆಗಳಿಗೆ ನೀರು ಹೋಗದಂತೆ ನೋಡಿಕೊಳ್ಳಬೇಕು. ರಾಜಕಾಲುವೆ ದುರಸ್ತಿ ಮಾಡದೆ ಶಾಶ್ವತ ಪರಿಹಾರ ಅಸಾಧ್ಯ ಎಂದು ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಸಿ.ಎನ್.ಮಂಜೇಗೌಡ ಸಚಿವರ ಗಮನ ಸೆಳೆದರು. ಇದಕ್ಕೆ ಉತ್ತರಿಸಿದ ಸಚಿವ ಎಸ್.ಟಿ.ಸೋಮಶೇಖರ್ ಜನರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಮುಡಾ ಮತ್ತು ನಗರಪಾಲಿಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



### ಆ.28ರವರೆಗೆ ಜಲಾಶಯಗಳ ನೀರಿನ ಮಟ್ಟ

- **ಕೆಆರ್‌ಎಸ್: (ಮಂಡ್ಯ ಜಿಲ್ಲೆ):** ಗರಿಷ್ಠ ಮಟ್ಟ 124.80 ಅಡಿ, ಇಂದಿನ ನೀರಿನ ಮಟ್ಟ– 124.68 ಅಡಿ, ಒಳಹರಿವು– 27,217 ಕ್ಯೂಸೆಕ್ಸ್, ಹೊರ ಹರಿವು– 25,409 ಕ್ಯೂಸೆಕ್ಸ್
- **ಕಬಿನಿ (ಹೆಚ್.ಡಿ.ಕೋಟೆ ತಾಲೂಕು):** ಗರಿಷ್ಠ ಮಟ್ಟ– 2284 ಅಡಿ, ಇಂದಿನ ನೀರಿನ ಮಟ್ಟ– 2283 ಅಡಿ, ಒಳಹರಿವು– 15,673 ಕ್ಯೂಸೆಕ್ಸ್, ಹೊರ ಹರಿವು– 20,000 ಕ್ಯೂಸೆಕ್ಸ್.
- **ಹಾರಂಗಿ (ಕೊಡಗು ಜಿಲ್ಲೆ):** ಗರಿಷ್ಠ ಮಟ್ಟ– 2859 ಅಡಿ, ಇಂದಿನ ನೀರಿನ ಮಟ್ಟ– 2424 ಅಡಿ, ಒಳಹರಿವು– 3193 ಕ್ಯೂಸೆಕ್ಸ್, ಹೊರ ಹರಿವು– 3670 ಕ್ಯೂಸೆಕ್ಸ್.
- **ನುಗು (ಸರಗೂರು ತಾಲೂಕು):** ಗರಿಷ್ಠ ಮಟ್ಟ– 110 ಅಡಿ, ಇಂದಿನ ನೀರಿನ ಮಟ್ಟ– 108 ಅಡಿ, ಒಳ ಹರಿವು– 2400 ಕ್ಯೂಸೆಕ್ಸ್, ಹೊರ ಹರಿವು– 2500 ಅಡಿ.
- **ತಾರಕ (ಹೆಚ್.ಡಿ.ಕೋಟೆ ತಾಲೂಕು):** ಗರಿಷ್ಠ ಮಟ್ಟ 2425 ಅಡಿ, ಇಂದಿನ ಮಟ್ಟ– 2424 ಅಡಿ, ಒಳಹರಿವು– 183 ಕ್ಯೂಸೆಕ್ಸ್, ಹೊರ ಹರಿವು– 580 ಕ್ಯೂಸೆಕ್ಸ್.

## ಶಾಸಕ ಜಿ.ಟಿ.ದೇವೇಗೌಡರಿಂದ ನಾನಾ ಸಮಸ್ಯೆ ಮಂಡನೆ

**● ನೀರು, ಹಾವುಗಳಿಂದ ನಿವಾಸಿಗಳಿಗೆ ಹೆಚ್ಚಿನ ತೊಂದರೆ ● ರಾಜಕಾಲುವೆ ಒತ್ತುವರಿಯಿಂದ ಹೆಚ್ಚುತ್ತಿರುವ ಅನಾಹುತ**

ಮೈಸೂರು,ಆ.29–ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಸೋಮವಾರ ಜಿಪಂ ಸಭಾಂಗಣದಲ್ಲಿ ನಡೆದ ಮಳೆ ಹಾನಿ ಕುರಿತ ಸಭೆಯಲ್ಲಿ ಜಿಲ್ಲೆಯ ಶಾಸಕರು ಮಳೆಯಿಂದಾಗಿರುವ ನಾನಾ ಅವಾಂತರಗಳನ್ನು ವಿವರಿಸಿದರು. ಮೈಸೂರು ನಗರದ ದಟ್ಟಗಳ್ಳಿ ಬಡಾವಣೆಯ ಕೌಟಿಲ್ಯ ಶಾಲೆಯ ರಸ್ತೆಯಲ್ಲಿರುವ ಮನೆಗಳಿಗೆ ನೀರು ನುಗ್ಗಿ ಕೆರೆಯಿಂದ ಹಾವುಗಳು ಮನೆಗೆ ಬಂದು ನಿವಾಸಿಗಳಿಗೆ ಬಹಳ ತೊಂದರೆಯಾಗುತ್ತಿದೆ. ಕೋಟೆಹುಂಡಿಯ ಕೆಎಸ್‌ಆರ್‌ಟಿಸಿ ಬಡಾವಣೆಯಲ್ಲಿ ಮೈಸೂರು ನಗರದಿಂದ ಬರುವ ಎಲ್ಲಾ ನೀರು ನುಗ್ಗಿ ಮನೆಗಳಿಗೆ ಹಾನಿಯಾಗಿದೆ. ಸೋಮನಾಥನಗರದಲ್ಲಿ ಕೇರ್ಗಳ್ಳಿ ಕೆರೆ ನೀರು ಮನೆಗಳಿಗೆ ನುಗ್ಗಿದೆ. ರಾಮಕೃಷ್ಣ ನಗರ ಹೆಚ್ ಬ್ಲಾಕ್‌ನಲ್ಲಿ ಲಿಂಗಾಂಬುದಿ ಕೆರೆ ಆವರಣದಲ್ಲಿ ಬೆಳೆದಿರುವ ಬಿದಿರು ಮಳೆಯಿಂದ ನಿವಾಸಿಗಳಿಗೆ ತೊಂದರೆಯಾಗುತ್ತಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು. ಈ ಬಗ್ಗೆ ಅರಣ್ಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಸೂಚಿಸಿದರು.

ವಿಜಯನಗರ 3ನೇ ಹಂತದಲ್ಲಿ ಮಳೆಯಿಂದ ಮಳೆ ನೀರಿನ ಚರಂಡಿ ಕುಸಿದು ಬಿದ್ದಿದ್ದು, ವಿದ್ಯುತ್ ಕಂಬ ಬೀಳುವ ಸ್ಥಿತಿಯಲ್ಲಿದೆ. ಮೈಸೂರು ನಗರ ದಲ್ಲಿ ಮತ್ತು ತಾಲೂಕಿನ ಹಲವು ಕಡೆಗಳಲ್ಲಿ ರಾಜಕಾಲುವೆ ಒತ್ತುವರಿಯಾಗಿವೆ.

ಕೆಲವೆಡೆ ರಾಜಕಾಲುವೆಗಳು ನೀರು ಹರಿಯುವ ಹಳ್ಳಗಳು ಮುಚ್ಚಿ ಬಡಾವಣೆಗಳನ್ನು ನಿರ್ಮಾಣ ಮಾಡಿದ್ದಾರೆ. ಹೀಗಾಗಿ ಮೈಸೂರು ನಗರ ಮತ್ತು ತಾಲೂಕಿನ ರಾಜಕಾಲುವೆ, ನೀರು ಹರಿಯುವ ಹಳ್ಳಗಳನ್ನು ಸರ್ವೆ ಮಾಡಿ, ಕೂಡಲೇ ತೆರವುಗೊಳಿಸಿದರೆ ಮುಂದೆ ಮಳೆಯಿಂದಾಗುವ ಅನಾಹುತಗಳು ತಪ್ಪುತ್ತವೆ ಎಂದರು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಮೈಸೂರು ತಾಲೂಕಿನ ತಳೂರು ಯೋಜನೆ ಮೂಲಕ ನೀರನ್ನು ಒದಗಿಸುತ್ತಿದ್ದು ಹಬ್ಬ ಇರುವುದರಿಂದ ಹೆಚ್ಚುವರಿಯಾಗಿ ಹಳ್ಳಿಗಳಿಗೆ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಬೇಕು.

ಸಾಮಾನ್ಯವಾಗಿ ಎಲ್ಲಾ ಗ್ರಾಮಗಳಲ್ಲಿ ಕುಡಿಯುವ ನೀರನ್ನು ಕೆರೆಗಳಲ್ಲಿ ಕೊಳವೆಬಾವಿ ತೆಗೆದು ಒದಗಿಸಲಾಗುತ್ತಿತ್ತು, ಆದರೆ ಮಳೆಯಿಂದಾಗಿ ಕೆರೆಗಳು ತುಂಬಿದ್ದು, ಕೊಳವೆಬಾವಿಗಳಿಂದ ಕುಡಿಯುವ ನೀರನ್ನು ಒದಗಿಸಲು ಕಷ್ಟವಾಗುತ್ತಿದೆ, ಆದ್ದರಿಂದ ಹಳ್ಳಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಕಬಿನಿ ಕುಡಿಯುವ ನೀರು ನೀಡಲು ಕ್ರಮ ಕೈಗೊಳ್ಳಬೇಕೆಂದು ಸಚಿವರ ಗಮನ ಸೆಳೆದರು.

ಬೆಳವಾಡಿಯಲ್ಲಿ ಬಡಾವಣೆ ನಿರ್ಮಾಣಗೊಂಡಿದ್ದು, ಎಲ್ಲಾ ನಿವೇಶನಗಳನ್ನು ಪ್ರಾಧಿಕಾರ ಬಿಡುಗಡೆ ಮಾಡಿದೆ. ಎಸ್‌ಟಿಪಿ ಇಲ್ಲದೆ ಅಲ್ಲಿಯ ಜನರು ಪ್ರತಿನಿತ್ಯ ಕಷ್ಟ ಅನುಭವಿಸುತ್ತಿದ್ದಾರೆ. ಅಲ್ಲಿ ಎಸ್‌ಟಿಪಿ ನಿರ್ಮಾಣ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು. ಜಯಪುರ ಕೆಗ್ಗೆರೆ ಕೆರೆ ತುಂಬಿ ಕೋಡಿ ಬಿದ್ದು, ಕೋಡಿಯಲ್ಲಿ ಮಾವಿನಹಳ್ಳಿಯ ಮಹೇಶ್ ಕೊಚ್ಚಿ ಹೋಗಿ, ಸಾವನ್ನಪ್ಪಿದ್ದಾರೆ. ಕೋಡಿಯ ಮೇಲೆ ಸೇತುವೆ ನಿರ್ಮಾಣಕ್ಕೆ ಕ್ರಮ ವಹಿಸಬೇಕು. ಸಿಂಧುವಳ್ಳಿ ಮತ್ತು ಬ್ಯಾತಗಳ್ಳಿ ಗ್ರಾಮಗಳಲ್ಲಿ ಹರಿಯುವ ಎಣ್ಣೆಹೊಳೆಗೆ ಮೈಸೂರು ನಗರದ ಎಲ್ಲಾ ನೀರು ಹರಿದು ಬರುವುದರಿಂದ ಸೇತುವೆ ಮುಳುಗಡೆಯಾಗಿ ಈ ಗ್ರಾಮಗಳ ಸಂಪರ್ಕ ಕಡಿತಗೊಂಡಿದ್ದು, ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿದೆ ಎಂದರು.

ರಾಯನಕೆರೆಯಿಂದ ರಾಜಕಾಲುವೆಯಲ್ಲಿರುವ ಜಂಗಲ್ ತೆರವುಗೊಳಿಸಿದರೆ ಸ್ವಲ್ಪ ಪ್ರಮಾಣದಲ್ಲಿ ಮಳೆ ನೀರು ಬಡಾವಣೆಗಳಿಗೆ ಹೋಗುವುದನ್ನು ತಪ್ಪಿಸಬಹುದು. ಈ ನಿಟ್ಟಿನಲ್ಲಿ ರಾಯನಕೆರೆಯಿಂದ ಮುಂದೆ ಎಣ್ಣೆಹೊಳೆಗೆ ಸೇರುವ ಸ್ಥಳದಿಂದ ರಾಜಕಾಲುವೆಯ ಒತ್ತುವರಿ ಮತ್ತು ಜಂಗಲ್, ಹೂಳು ತೆಗೆಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

## ಹಿಜಾಬ್ ನಿಷೇಧ ಪ್ರಕರಣ: ಸೆ.5ಕ್ಕೆ ವಿಚಾರಣೆ ಮುಂದೂಡಿಕೆ

**ನವದೆಹಲಿ:** ಕರ್ನಾಟಕದಲ್ಲಿ ಹಿಜಾಬ್ ವಿವಾದ ಕುರಿತ ವಿಚಾರಣೆಯನ್ನು ಸೆ.5ಕ್ಕೆ ಮುಂದೂಡಿ ಸುಪ್ರೀಂಕೋರ್ಟ್ ಸೋಮವಾರ ಆದೇಶ ಹೊರಡಿಸಿದೆ.

ಹಿಜಾಬ್ ಮುಸ್ಲಿಂ ಧರ್ಮೀಯರಲ್ಲಿ ಆಚರಣೆ ಕಡ್ಡಾಯ ಭಾಗವಲ್ಲ ಎಂದು ಕಳೆದ ಫೆಬ್ರವರಿಯಲ್ಲಿ ಹೈಕೋರ್ಟ್ ನೀಡಿದ್ದ ಆದೇಶವನ್ನು ಪ್ರಶ್ನಿಸಿ ಹಲವು ಮುಸ್ಲಿಂ ಸಂಘಟನೆಗಳು ಸಲ್ಲಿಸಿರುವ ಮೇಲ್ಮನವಿಗೆ ಸಂಬಂಧಪಟ್ಟಂತೆ ಇದೇ ವೇಳೆ ಹೆಚ್ಚಿನ ವಿವರಣೆ ಕೇಳಿ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

**ರಾಜ್ಯ ಸರ್ಕಾರಕ್ಕೆ ಸುಪ್ರೀಂಕೋರ್ಟ್ ನೋಟೀಸ್**



ರಾಜ್ಯ ಸರ್ಕಾರ ಪದವಿ ಪೂರ್ವ ಕಾಲೇಜುಗಳಲ್ಲಿ ಮುಸ್ಲಿಂ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದಕ್ಕೆ ನಿಷೇಧ ಹೇರಿ ಕಾನೂನು ಹೊರಡಿಸಿತ್ತು. ಸುಪ್ರೀಂಕೋರ್ಟ್ ಮುಂದೆ ವಾದ ಮಂಡಿಸಿದ ರಾಜ್ಯ ಸರ್ಕಾರ ಪರ ಅಡ್ವೊಕೇಟ್, ಮುಂದಿನ ಸೋಮವಾರವೇ ಹಿಜಾಬ್ ವಿಚಾರಣೆಯನ್ನು ಕೈಗೆತ್ತಿಕೊಳ್ಳಬೇಕೆಂದು ಮನವಿ ಮಾಡಿದೆ.

ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರ ಪೀಠವು ಅರ್ಜಿಗಳ ಕುರಿತು ರಾಜ್ಯಕ್ಕೆ ನೋಟಿಸ್ ಜಾರಿಗೊಳಿಸಿ ಸೆಪ್ಟೆಂಬರ್ 5ರಂದು ವಿಚಾರಣೆಗೆ ಮುಂದೂಡಿತು. ಇದೇ ಸಂದರ್ಭದಲ್ಲಿ ವಿಚಾರಣೆ ಮುಂದೂಡಿಕೆಯನ್ನು ಕೋರಿದ ಕೆಲವು ಅರ್ಜಿದಾರರನ್ನು ಪೀಠವು ತರಾಟೆಗೆ ತೆಗೆದುಕೊಂಡು ಈ ರೀತಿಯ ಫೋರಂ ಶಾಪಿಂಗ್‌ನ್ನು ಅನುಮತಿಸುವುದಿಲ್ಲ ಎಂದು ಹೇಳಿತು.

ಹಿಜಾಬ್ ಧರಿಸುವುದು ಸಂವಿಧಾನದ 25ನೇ ವಿಧಿಯ ಅಡಿಯಲ್ಲಿ ರಕ್ಷಿಸಬಹುದಾದ ಅತ್ಯಗತ್ಯ ಧಾರ್ಮಿಕ ಆಚರಣೆಯ ಭಾಗವಲ್ಲ ಎಂಬ ಕರ್ನಾಟಕ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವಾರು ಅರ್ಜಿಗಳು ಸಲ್ಲಿಕೆಯಾಗಿವೆ. ಉಡುಪಿಯ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನಲ್ಲಿ ತರಗತಿಯೊಳಗೆ ಹಿಜಾಬ್ ಧರಿಸಲು ಅನುಮತಿ ನೀಡುವಂತೆ ಕೋರಿ ಮುಸ್ಲಿಂ ವಿದ್ಯಾರ್ಥಿನಿಯರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ರಾಜ್ಯದ ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ಧರಿಸದಂತೆ ಸರ್ಕಾರ ಆದೇಶ ನೀಡಿದ್ದಕ್ಕೆ ರಾಜ್ಯಾದ್ಯಂತ ಭಾರೀ ಗಲಾಟೆ, ಪ್ರತಿಭಟನೆಗಳು ನಡೆದಿದ್ದವು. ಹಲವು ವಿದ್ಯಾರ್ಥಿನಿಯರು ಪರೀಕ್ಷೆಯನ್ನೂ ಬಹಿಷ್ಕರಿಸಿದ್ದರು.

ಈ ಪ್ರಕರಣದ ಕುರಿತು ಕಳೆದ ಮಾರ್ಚ್ 15ರಂದು ಕರ್ನಾಟಕ ಹೈಕೋರ್ಟ್ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಲ್ಲಿ ಯೂನಿಫಾರ್ಮ್ ಮಾತ್ರ ಧರಿಸಬೇಕು, ಯಾವುದೇ ಧರ್ಮ ಸೂಚಕ ಉಡುಪನ್ನು ಧರಿಸುವಂತಿಲ್ಲ ಎಂದು ತೀರ್ಪು ನೀಡಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಹಿಜಾಬ್ ನಿಷೇಧದ ಬಗ್ಗೆ ಕರ್ನಾಟಕ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಸೋಮವಾರ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಿ ಮುಂದಿನ ವಿಚಾರಣೆಯನ್ನು ಸೆಪ್ಟೆಂಬರ್ 5ಕ್ಕೆ ಮುಂದೂಡಿದೆ.

## ವಿಶ್ವಕಪ್ ನಂತರ ಕೊಹ್ಲಿ ಟಿ–20ಗೆ ಗುಡ್ ಬೈ?

**ನವದೆಹಲಿ:** ಇತ್ತೀಚೆಗೆ ಟಿ–20 ಪಂದ್ಯಗಳಲ್ಲಿ ಕಳಪೆ ಪ್ರದರ್ಶನ ತೋರುತ್ತಿರುವ ವಿರಾಟ್ ಕೊಹ್ಲಿ ವಿಶ್ವಕಪ್ ನಂತರ ಟಿ–20ಗೆ ಗುಡ್ ಬೈ ಹೇಳುವ ಸಾಧ್ಯತೆ ಹೆಚ್ಚಾಗಿರುವುದಾಗಿ ಮೂಲಗಳು ಹೇಳಿವೆ.



ಕೊಹ್ಲಿ ಅವರಿಂದ 150ರ ಸ್ಟ್ರೈಕ್ ದರದಲ್ಲಿ ರನ್ ಬರುತ್ತಿಲ್ಲ. ಭಾನುವಾರ ನಡೆದ ಏಷ್ಯಾ ಕಪ್ ಟೂರ್ನಿಯ ಪಾಕಿಸ್ತಾನ ವಿರುದ್ಧದ ಪಂದ್ಯದಲ್ಲಿ ಆರಂಭದಲ್ಲಿ ರನ್ ಗಳಿಸಲು ಪರದಾಡಿದರು. ಆದರೆ, ನಂತರ 30 ಎಸೆತಗಳಲ್ಲಿ 35 ರನ್ ಗಳಿಸಿದರು. ಆದ್ದರಿಂದ ಕೊಹ್ಲಿ ಅವರನ್ನು ಟಿ–20 ವಿಶ್ವಕಪ್ ತಂಡದಿಂದ ಕೈ ಬಿಡುವ ಸಾಧ್ಯತೆಯಿದೆ. ಆದರೆ, ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ–20 ಬಳಿಕ ಟಿ–20ಯಲ್ಲಿ ಭಾರತ ಪರ ಕೊಹ್ಲಿ ಆಡಲಿದ್ದಾರೆಯೇ ಎಂಬ ಪ್ರಶ್ನೆಗೆ ಆಯ್ಕೆದಾರರಿಗೆ ಮಾತ್ರ ಉತ್ತರ ಗೊತ್ತಿರುತ್ತದೆ. ಆದರೆ, ಅವರು ಈ ಬಗ್ಗೆ ಏನನ್ನು ಮಾತನಾಡುತ್ತಿಲ್ಲ. 33 ವರ್ಷದ ಕೊಹ್ಲಿ 464 ಅಂತಾರಾಷ್ಟ್ರೀಯ ಪಂದ್ಯಗಳು ಹಾಗೂ ಐಪಿಎಲ್‌ಅನ್ನು 15 ಸೀಸನ್‌ಗಳಲ್ಲಿ ಆಡಿದ್ದಾರೆ. ಈ ವರ್ಷ ನಡೆದ ಐದು ಟಿ–20 ಪಂದ್ಯಗಳಲ್ಲಿ ಕ್ರಮವಾಗಿ 17, 52, 1,11 ಮತ್ತು 35 ರನ್‌ಗಳನ್ನು ಕೊಹ್ಲಿ ಗಳಿಸಿದ್ದಾರೆ. ಪ್ರತಿ ಪಂದ್ಯದಲ್ಲೂ ಅರ್ಧ ಶತಕ ಗಳಿಸುವ ಅಗತ್ಯವಿಲ್ಲ, ಆದರೆ, 20–22 ಎಸೆತಗಳಲ್ಲಿ 35, ಅಥವಾ 10 ಎಸೆತಗಳಲ್ಲಿ 20 ರನ್ ಆದರೂ ಗಳಿಸಬೇಕಾಗುತ್ತದೆ. ಇದು ಸ್ವಲ್ಪ ಮಟ್ಟದ ಪರಿಣಾಮವನ್ನಾದರೂ ಬೀರುತ್ತದೆ.

ಟಿ–20 ಕ್ರಿಕೆಟ್‌ನಲ್ಲಿ ಕೊಹ್ಲಿಯ ನಂ.3 ಕ್ರಮಾಂಕದ ಬಗ್ಗೆಯೂ ಚರ್ಚೆಯಾಗುತ್ತಿದೆ. ಆದರೆ ಬಿಸಿಸಿಐ ಟಿ–20 ವಿಶ್ವಕಪ್‌ನ ಕೊನೆಯವರೆಗೂ ಈ ಸಮಸ್ಯೆ ಪರಿಹರಿಸುವುದಿಲ್ಲ ಎಂದು ತಿಳಿದುಬಂದಿದೆ. ಕೊಹ್ಲಿ ಅವರನ್ನು ಟಿ–20 ತಂಡದಿಂದ ಕೈ ಬಿಡುವ ಬಗ್ಗೆ ರಾಷ್ಟ್ರೀಯ ಆಯ್ಕೆದಾರರ ತಂಡ ಕೋಚ್ ರಾಹುಲ್ ದ್ರಾವಿಡ್, ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರೊಂದಿಗೆ ಚರ್ಚೆ ನಡೆಸಿದ ಬಳಿಕ ಅಂತಿಮ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

## ತರಬೇತಿ ಕಾರ್ಯಾಗಾರ

ಮೈಸೂರು, ಆ.29– ಮೈಸೂರು ಜಿಲ್ಲಾ ಪೊಲೀಸ್ ಘಟಕ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮೈಸೂರು ನಗರ ಪೊಲೀಸ್ ಘಟಕ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪೊಲೀಸ್ ಕಚೇರಿ ಆವರಣದಲ್ಲಿ ಮಕ್ಕಳ ಕಲ್ಯಾಣ ಪೊಲೀಸ್ ಅಧಿಕಾರಿಗಳು ಹಾಗೂ ಮಕ್ಕಳ ನ್ಯಾಯದಾನ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆಗೆ ಭಾಗೀದಾರರಿಗೆ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಸದಸ್ಯ ಕಾರ್ಯದರ್ಶಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ ಭೂತೆರವರು ಉದ್ಘಾಟನೆಯನ್ನು ನೆರವೇರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಪೊಲೀಸ್ ಅಧೀಕ್ಷಕ ಚೇತನ್ ವಹಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಅಪರ ಪೊಲೀಸ್ ಅಧೀಕ್ಷಕಿ ಡಾ.ನಂದಿನಿ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅರುಂಧತಿ, ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ಧನಂಜಯ, ಜಿಲ್ಲಾ ಪೊಲೀಸ್ ಹಾಗೂ ಮೈಸೂರು ನಗರ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಅರ್ಜಿ ವಿಚಾರಣೆ ಪಟ್ಟಿಗೆ ಶೀಘ್ರ ಹೊಸ ಕಾರ್ಯವಿಧಾನ: ಸಿಜೆಐ

**ನವದೆಹಲಿ:** ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಯು.ಯು. ಲಲಿತ್ ಅವರು ಸೋಮವಾರ ತಮ್ಮ ಮೊದಲ ದಿನದ ಕಾರ್ಯಾರಂಭಿಸಿ, ಉನ್ನತ ನ್ಯಾಯಾಲಯದಲ್ಲಿ ಅರ್ಜಿಗಳ ವಿಚಾರಣೆಯ ಪಟ್ಟಿಗೆ ಹೊಸ ಕಾರ್ಯವಿಧಾನ ಶೀಘ್ರವೇ ಆರಂಭಿಸಲಾಗುವುದು ಎಂದು ಹೇಳಿದರು.



ಗುರುವಾರದ ಹೊತ್ತಿಗೆ ಈ ಹೊಸ ವ್ಯವಸ್ಥೆ ಜಾರಿಗೆ ಬರಲಿದೆ. ಅಲ್ಲಿ ವರೆಗೆ, ನಾವು ತುರ್ತು ಅರ್ಜಿಗಳನ್ನು ಪಟ್ಟಿ ಮಾಡಲಿದ್ದು, ರಿಜಿಸ್ಟ್ರಾರ್ ಮುಂದೆ ಅರ್ಜಿಗಳನ್ನು ಪ್ರಸ್ತಾಪಿಸುವ ಮೂಲ ಪದ್ಧತಿಗೆ ಹಿಂತಿರುಗುತ್ತೇವೆ ಎಂದರು. ತುರ್ತು ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳುವಂತೆ ಮೊದಲು ನ್ಯಾಯಾಲಯಕ್ಕೆ ಮನವಿ ಮಾಡುವುದಕ್ಕಿಂತ, ರಿಜಿಸ್ಟ್ರಾರ್ ಮುಂದೆ ತುರ್ತು ವಿಚಾರಣೆ ಪ್ರಕರಣಗಳನ್ನು ಉಲ್ಲೇಖಿಸುವಂತೆ ವಕೀಲರಿಗೆ ಸೂಚಿಸಿದರು. ಮುಖ್ಯ ನ್ಯಾಯಮೂರ್ತಿ ನೇತೃತ್ವದ ಪೀಠವು ದಿನದ ಕಲಾಪಗಳನ್ನು ಪ್ರಾರಂಭಿಸಿದಾಗ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸಿಜೆಐ ಲಲಿತ್ ಅವರಿಗೆ ಸ್ವಾಗತ ಕೋರಿ, ಸರ್ಕಾರದಿಂದ ಸಂಪೂರ್ಣ ಬೆಂಬಲದ ಭರವಸೆ ನೀಡಿದರು. ಹಿರಿಯ ವಕೀಲ ದುಷ್ಯಂತ್ ದವೆ ಅವರು ವಕೀಲರ ಸಮೂಹದ ಪರವಾಗಿ ಶುಭಾಶಯ ಹೇಳಿದರು. ಸಿಜೆಐ ಲಲಿತ್ ಅವರು ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಅವರನ್ನೊಳಗೊಂಡ ಪೀಠದ ಮುಂದೆ 62 ಅರ್ಜಿಗಳು ವಿಚಾರಣೆಗೆ ಬಂದವು. ಇದರಲ್ಲಿ ಹತ್ತು ಸಾರ್ವಜನಿಕ ಅರ್ಜಿಗಳು ಇದ್ದವು. 60 ಪಿಐಎಲ್‌ಗಳು ಸೇರಿ 900ಕ್ಕೂ ಹೆಚ್ಚು ಅರ್ಜಿಗಳನ್ನು ಸುಪ್ರೀಂಕೋರ್ಟ್‌ನಲ್ಲಿ ಸೋಮವಾರ ವಿಚಾರಣೆಗೆ ಪಟ್ಟಿ ಮಾಡಲಾಗಿತ್ತು.